SRI D. DEVARAJ URS —The hon'ble member, I am afraid, is trying to confuse the issues between the resolution and the motion. The resolution is clearly governed by Chapter 15 *vide* sections 133 to 139. If it is a resolution it should be under rule 133. If it is a motion it should be under Chapter XVI. How can we confuse these things ? This is only a suggestion which the Leader of the Opposition has made which I have said cannot be accepted. There ends the matter. Now Sri Puttaswamy is trying to argue that it is a resolution, I am afraid, it is not.

ಅಧ್ಯಕ್ಷರು.—ಮಾನ್ಯ ಸದಸ್ಯರು ಈಗ ಮೊದಲು ನಿರ್ಣಯದ ವಿಚಾರದಲ್ಲಿ ಕೇಳಿ, ಈಗ 'ಪ್ರಸ್ತಾವಕ್ಕೆ' ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ಕಾಗದ ಬಂದಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಮತ್ತು ಶ್ರೀ ಬಂಗಾರಪ್ಪನವರು ಹೇಳಿದ ಹಾಗೆ ಈ ಇಲಾಖೆಯ ಬೇಡಿಕೆ ಬರುವುದರಿಂದ, ಆಗ ಇದರ ಪ್ರಸ್ತಾಪ ಮಾಡಬಹುದಾಗಿದೆ. ಬೇಡಿಕೆ ಪ್ರಸ್ತಾಪವಿರುವಾಗ ಸಮಿತಿಯನ್ನು ನೇಮಕ ಮಾಡಬೇಕೆನ್ನುವ ವಿಚಾರವಾಗಲೀ ಅಥವಾ ಇನ್ನಾವುದೇ ತತ್ಸಂಬಂಧ ವಿಚಾರದ ಬಗ್ಗೆಯಾಗಲಿ ಮಾತನಾಡಬಹುದೆಂದು ನನ್ನ ಅಭಿಪ್ರಾಯ.

After having the Chief Minister and others I think I should give my consent to the motion.

Budget Estimates for 1977-78
Demands for Grants

Demand Nos. 50, 51 and 52 (Debate Continued)

† ಶ್ರೀ ಎಂ ಸಿದ್ಧಮಾದಯ್ಯ (ಕೊಳ್ಳೇಗಾಲ).—ಸನ್ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಇಲಾಖೆಯ ಬೇಡಿಕೆ ಬಗ್ಗೆ ನನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ ರೇಷ್ಮೆ ಇಲಾಖೆಯನ್ನು ಚೆನ್ನಾಗಿ ಅಭಿವೃದ್ಧಿಪಡಿಸಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ಒಂದು ಯೋಜನೆಯನ್ನು ಸಿದ್ಧಪಡಿಸಿ, ಕೇಂದ್ರ ಸರ್ಕಾರದಿಂದ ಸುಮಾರು ಅರವತ್ತು ಕೋಟಿ ಹಣವನ್ನು ತಂದು ಸರ್ಕಾರದವರು ವ್ಯವಸ್ಥೆ ಮಾಡಿದರು. ಆದರೆ, ರೇಷ್ಮೆ ಇಲಾಖೆಯಲ್ಲಿರುವ ಕೆಳಮಟ್ಟದ ಅಧಿಕಾರಿಗಳು ಒಂದಲ್ಲ ಒಂದು ರೂಪದಲ್ಲಿ ಹಣವನ್ನು ದುರುಪಯೋಗ ಮಾಡಿ ಬಡ ಜನತೆಗೂ ಹಾಗೂ ರೇಷ್ಮೆ ಕೈಗಾರಿಕೆಯನ್ನವಲಂಬಿಸಿಕೊಂಡಿರುವವರಿಗೂ ತೊಂದರೆ ಕೊಡುತ್ತಿದ್ದಾರೆ. ದಳ್ಳಾಳಿಗಳನ್ನು ತೆಗೆಯಬೇಕೆಂದು ಸರ್ಕಾರದವರು ನಿಲುವು ತಾಳಿದ್ದರೂ, ಅದು ದಳ್ಳಾಳಿಗೇ ಅನುಕೂಲವಾಗುತ್ತಿದೆಯೇ ಹೊರತು ಬಡ ಜನರಿಗೆ ಮತ್ತು ರೇಷ್ಮೆ ಬೆಳೆಗಾರರಿಗೆ, ಹಾಗೂ ಫಿಲೇಚರ್‌ಗಳಲ್ಲಿ ಕೆಲಸ ಮಾಡುವವರಿಗೆ ಅನುಕೂಲವಾಗುತ್ತಿಲ್ಲ. ಚಿತ್ತನೆ ಗೂಡು ತಯಾರು ಮಾಡುವುದಕ್ಕೆ ಸರ್ಕಾರದವರು ಒಂದು ಪ್ರದೇಶವನ್ನು ನಿಗದಿ ಮಾಡಿದ್ದಾರೆ.

ಚಿತ್ತನೆ ಮಾಡತಕ್ಕ ಏರಿಯಾಗಳಲ್ಲಿ ಒಂದೊಂದು ತಿಂಗಳಲ್ಲಿ ಬೆಲೆಗಳು ಏರುಪೇರಾಗುತ್ತವೆ. 45 ರೂಪಾಯಿಗಳಿಗೆ ಮೊಟ್ಟೆ ತಂದು ಹುಳುವನ್ನು ಸೃಷ್ಟಿ ಮಾಡಿ ಬೆಳೆಯನ್ನು ತೆಗೆಯುವಷ್ಟರಲ್ಲಿ ರೈತ ಬಹಳ ತೊಂದರೆಯನ್ನು ಅನುಭವಿಸುತ್ತಾನೆ. ಸರ್ಕಾರ ಬೆಲೆಗಳು ಏರುಪೇರಾಗದಂತೆ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸಿಲ್ಕ್‌ಫಿಲೇಚರ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಸರ್ಕಾರದರು ಆ ಮಾರುಕಟ್ಟೆಗಳನ್ನು ತೆರೆದಿದ್ದಾರೆ, ಅಲ್ಲಿ ದಳ್ಳಾಳಿಗಳ ಮುಖಾಂತರ ಸರ್ಕಾರದವರು ಗೂಡುಗಳನ್ನು ತೆಗೆದುಕೊಳ್ಳುತ್ತಾರೆ. ಒಂದು ದಿನ ಇದ್ದ ಧಾರಣೆ ಇನ್ನೊಂದು ದಿನ ಇರುವುದಿಲ್ಲ. ಒಂದುಕಡೆಯಿಂದ ಒಂದುಕಡೆಗೆ ಗೂಡುಗಳನ್ನು

ತೆಗೆದುಕೊಂಡು ಹೋಗಿ ಹೆಚ್ಚಿನ ಲಾಭ ಮಾಡಿಕೊಳ್ಳುತ್ತಾರೆ ಆಯಾ ಕ್ಷೇತ್ರದಲ್ಲಿಯೇ ಗೂಡುಗಳನ್ನು ಮಾರತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಲ್ಲದೆ ಎಲ್ಲರಿಗೂ ಅನುಕೂಲವಾಗುವಂತೆ ರೇಟ್ ಫಿಕ್ಸ್ ಮಾಡಬೇಕೆಂದು ಹೇಳುತ್ತೇನೆ ಈ ರೀತಿ ಮಾಡಿದರೆ ರೇಷ್ಮೆ ಇಲಾಖೆಯಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಇದರಿಂದ ಬೆಳೆಯುವವನಿಗೂ ಮತ್ತು ಮಾರುವವನಿಗೂ ಅನುಕೂಲವಾಗುತ್ತದೆ.

ಇನ್ನು ಹಿಪ್ಪುನೇರಳೆ ತೋಟದಲ್ಲಿ ಸಾವಿರಾರು ಜನ ಕೂಲಿ ಕೆಲಸ ಮಾಡುವವರು ಇದ್ದಾರೆ. ಇವರಿಗೆ ಹೆಚ್ಚಿನ ಕೂಲಿ ದೊರೆಯುವಂತೆ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇನ್ನು ಸಿಲ್ಕ್ ಫಿಲೇಚರ್‌ನ್ನು ಸೊಸೈಟಿಗಳ ಮೂಲಕ ಫೆಡರೇಷನ್ ಮೂಲಕ ಕೊಡಬೇಕೆಂದು ಮಾಡಿದ್ದಾರೆ. ಸುಮಾರು ಒಂಬ ಲಕ್ಷ ರೂಪಾಯಿನಷ್ಟು ಫಿಲೇಚರನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಇವತ್ತು 325 ರೂಪಾಯಿಗೆ ಕೆ.ಜಿ. ಕೊಡಬೇಕಾಗಿದ್ದನ್ನು ಬಿಕರಿ ಮಾಡದೆ ಇರುವುದರಿಂದ ತುಂಬಾ ನಷ್ಟ ಆಗಿದೆ. ಇವತ್ತು 80-100 ರೂಪಾಯಿ ಕೆ.ಜಿ. ಕೊಟ್ಟರೂ ಲಾಸ್ ಆಗುತ್ತದೆ. ಜನತೆಯ ಹಣವನ್ನು ಪೋಲು ಮಾಡುವುದು ಸರಿಯಲ್ಲವೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈಗ ಇರತಕ್ಕ ಫಿಲೇಚರನ್ನು ಆದಷ್ಟು ಜಾಗ್ರತೆ ಬಿಕರಿ ಮಾಡಬೇಕೆಂದು ಹೇಳುತ್ತೇನೆ. ಕಳೆದ 2-3 ತಿಂಗಳಿಂದ ಧಾರಣೆ ಏರುಪೇರಾಗಿದೆ. ಇದರಿಂದ ಸಣ್ಣ ಕೈಗಾರಿಕೆ ಇಟ್ಟುಕೊಂಡಿರುವವರಿಗೆ ತೊಂದರೆಯಾಗುವುದಲ್ಲದೆ ನಷ್ಟ ಕೂಡ ಆಗುತ್ತದೆ. ಆಯಾಯಾ ಮಾರ್ಕೆಟ್ ಲೆವೆಲ್‌ನಲ್ಲಿಯೇ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಕೊಳ್ಳೇಗಾಲ, ಚಾಮರಾಜನಗರ ಆ ಕಡೆಯಿಂದ ಬಂದು ಗೂಡುಗಳನ್ನು ಕೊಂಡುಕೊಂಡು ಹೋಗುತ್ತಾರೆ. ಎಲ್ಲೆಲ್ಲಿ ಫಿಲೇಚರ್ ಇದೆ ಅಲ್ಲಿಯೇ ಗೂಡುಗಳನ್ನು ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಸರ್ಕಾರ ಆದೇಶ ಕೊಡಬೇಕೆಂದು ಹೇಳುತ್ತೇನೆ.

ಇನ್ನು ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಸ್ಟೇಟ್ ಅಡ್ವೈಸರಿ ಕಮಿಟಿಯನ್ನು ಮಾಡಿ ಅದರ ಮೂಲಕ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ, ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಸಣ್ಣ ಕೈಗಾರಿಕೆಗೆ ಸಂಬಂಧಪಟ್ಟಂತೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಯಾವುದೇ ಕಾರ್ಪೊರೇಷನ್ ಮಾಡಿಲ್ಲ, ಅಲ್ಲಿನ ಜನತೆ ಕೈಮಗ್ಗದ ಕೈಗಾರಿಕೆಯನ್ನು ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಒಂದು ಕಾರ್ಪೊರೇಷನ್ನಿನ ಬ್ರಾಂಚನ್ನು ಪ್ರಾರಂಭಮಾಡಿ, ಆ ಭಾಗದ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ, ಇದರಿಂದ ನೇಯ್ಗೆಯವರಿಗೂ ಅನುಕೂಲವಾಗುತ್ತದೆ. ಧಾರಣೆ ವಿಚಾರದಲ್ಲಿ ಮಾತ್ರ ಸರ್ಕಾರ ಒಂದು ನಿಗದಿಯಾದ ಧಾರಣೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI ABDUL KHUDDUS ANWAR (Bhadravathi).—Madam Speaker, while opposing this Demand I only take up the working of these industrial departments particularly the Iron and Steel Limited and Mysore Paper Mills. Sir, according to the report they have said that due to lack of proper guidance and management the production has declined etc., This 51 thousand tonne alloy steel was lying there since 2 years over which Rs 2 crores interest is paid and thus resulted in a loss. While paying the bonus the management say that there are no allocable surplus to pay the bonus. Really, if you take into consideration the production it has not fallen. At the same time the profit that they have shown in the year 1975-76 on page 12 is only Rs. 165 lakhs. After paying the interest this amount has been shown as profit. In the year 1974-75, it is Rs. 307 lakhs and in the year 75-76 it is Rs. 165 lakhs.

Two crores of rupees is paid in the form of interest because the entire commodity of the special steel is not sold vide Page 11. It is lying idle. It is on account of bad management Then there is the issue of investment in capital outlay of the Forge Plant. This question has been raised repeatedly. So many illegal purchases are made and illegal contracts were awarded, to the favourites of top officials. They have given 40 per cent over the schedule to their favourites. This question was raised and our friend Mr S. M. Krishna said it will be worked out within 16 crores. It is about 19 crores

3-00 P. M.

The construction of the building was taken about 10 years ago and the estimates were revised and now it has come to about 19 crores of rupees. The Forge Plant is installed to produce high alloy tool steels like high speed steel, die blocks etc., and according to their own statement the profitability of the Company for the year 1975-76 was seriously affected on account of restrictions of varying degrees on the power supply etc. They say that they expect after the installation of the Forge Plant and implementation of the balancing schemes there would be increase in the production of high grade special steel resulting in higher turnover and increased profitability. It is made clear from their statement on Page 11 that production of special steel was about 51,000 tons in 1975-76 and the production of Mild Steel Sections was about 36,000 tons. The production of Ingot steel was about 1, 27,000 tons. This gives you a clear picture that production has not at all suffered. The actual production of ingot steel is 1,27,382 tons during the year 1975-76. Altogether they realised about 70 000 tons. Where was the necessity for them to give an opportunity for the contractors to make easy money About three crores of rupees are given during the last seven years Out of these moneys they could have taken up developmental works. Every time the top officers will be going to foreign countries in connection with some thing or the other. The Forge Plant machinery is there and it is to be commissioned in October 1977. Again, these officers are planning to go abroad and every month their expenses on account of foreign tours will come to about 30-40 thousand rupees. They have invested about 40 lakhs of rupees and they are producing not alloy but 'sunna' (lime) : about 10 thousand tons of dust, is produced after spending lakhs and lakhs of rupees. Then about the fabricating plant etc. Many of these things can easily be manufactured here Even for the construction of Forge Plant contracts have been awarded to their own favourites though experienced local people have offered 15 per cent

and 10 percent, they have given these contractors 30 per cent over the schedule. They have wasted lakhs and lakhs of rupees instead of wasting money like this, they could have uilised this money over the by-products. They are again thinking of going abroad and waste some money and get some more commission. The amount will come to about 1½ crores of rupees in all, in respect of instalation of the Vacuum Degassing Unit.

Now I wish to say a word about Mines We had got a very good flow of 2,000 tons. They say that cost is very high on account of the wage board. One contractor Mr. Poddar has been benefited to the tune of lakhs of rupees in the deals connected with this. We could have run the mines we have invested crores of rupees.

With regard to the other projects like Locomotives they have made deals with Suri and Nair. I have brought to the notice of the Hon. Chief Minister the loss of 8 lives and the Chief Minister said the question would be examined and compensation would be paid to the family members.

Then I raised the question of payment of wages to the people. They have brought people from Durgapur and other places. Our Engineers are not selected on an All India basis.

These Officers are aspiring for super-grades and other things. Is it not be possible to do this for our Officers It is not difficult because they are telling that they are competing with the Hindustan Steel and producing equal quantity of Steel.

Coming to the working of the Paper Mills, I want to bring it to the notice of the Hon. Chief Minister that some good workers have been dismissed by the Chairman for no fault of theirs. He has dismissed those workers without conducting any inquiry. Those workers were working very satisfactorily and were very loyal workers. They were working very hard to improve the production. There is a General Manager, who is drawing Rs. 4,000. When we met the Hon. Chief Minister last time, he was good enough to say that he is going to reconsider the cases of those who have been dismissed. Anyhow, I am sorry to say that in the Paper Mills, lakhs of rupees were spent for decorating the room of the Chairman. They have spent Rs. 28 lakhs for decoration purposes in the Bhadravathi factory itself. Appointments, Directorships etc , were given to the relatives of the Ministers./Officers. A relative of the General Manager has drawn Rs. 75,000/-in this year as T. A. and D. A. One Mr. Parthasarathy who became the Director, overnight,

has drawn a T. A. of Rs. 50,000. For what purpose he has drawn that amount etc., must be enquired. Then bamboo log was setfire but no enquiry was conducted.

Madam, I am prepared to give the list of discrepancies in the Paper Mills. Mr. Srikantaiah's Son in-law has been appointed to some post.

As regards distribution of sheds, now our Hon. Chief Minister was pleased to say that he is going to construct some sheds in Bhadravathi. If those sheds are given to the Paper Mills, then, the new entrepreneurs will not be able to get it. I request the Government to allot the sheds to the new entrepreneurs. The Paper Mills authorities wanted to have a Sugar Factory also. If the Sugar Factory is given, then there is no guarantee that the ryots will get back their money; I once again stress that the distribution of sheds should not be given to the Paper Mills.

With these words, I think the Chair and conclude my speech.

ಶ್ರೀ ಬಿ. ಎಂ. ಹೊರಕೇರಿ (ಗುಳೇದ್‌ಗುಡ್).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಈಗಾಗಲೇ ಮಾನ್ಯ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ನನ್ನ ಅನೇಕ ಜನ ಮಾನ್ಯ ಸ್ನೇಹಿತರುಗಳು ಸ್ವಾಗತಿಸಿ ಮಾತನಾಡಿದ್ದಾರೆ ;

ಮೊದಲನೆಯದಾಗಿ ಹೇಳುವುದಾದರೆ ಶಿವರಾಮನ್ ಕಮಿಟಿ ವರದಿಯನ್ವಯ ರಾಜ್ಯಸರ್ಕಾರವು ಕರ್ನಾಟಕ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಕೈಮಗ್ಗದ ಅಭಿವೃದ್ಧಿ ಮಾಡಿ ತನ್ಮೂಲಕ ಬಡ ನೇಕಾರರ ಧಾರುಣ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾಗಿದೆ. ಬನಹಟ್ಟಿ, ಇಳಕಲ್ಲುಗಳಲ್ಲಿ ನೇಕಾರರ ಅಭಿವೃಧಿ ಕಾರ್ಯ ಪ್ರಗತಿಯಲ್ಲಿದೆ. ಬಿಜಾಪುರ ಜಿಲ್ಲೆಯಲ್ಲಿ 32ಸಾವಿರ ನೇಕಾರರ ಕುಟುಂಬಗಳು ಇದ್ದು ರಾಜ್ಯದ ಇತರ ಪ್ರದೇಶಕ್ಕಿಂತ ಹೆಚ್ಚಾಗಿವೆ. ಬಾದಾಮಿ-ಹುನಗುಂದ ತಾಲ್ಲೂಕುಗಳಲ್ಲಿ, ನೇಕಾರರ ಸಂಖ್ಯೆ ತುಂಬಾ ಹೆಚ್ಚಾಗಿವೆಯೆಂದರೆ ತಪ್ಪಾಗಲಿಕ್ಕಿಲ್ಲ. ಗುಳೇದಗುಡ್ಡ ಇಳಕಲ್ಲು ಕಮತಗಿ—ಅಮೀನಗಡ, ಸೂಳಿಭಾವಿ—ಗುಡೂರು, ಕೆರೂರು, ಶಿರೂರು, ಬದಾಮಿ ಜೀಲೂರು ಗೋವನಕೊಪ್ಪ ಗ್ರಾಮಗಳಲ್ಲಿ ನೇಕಾರರು ಹೆಚ್ಚಾಗಿದ್ದು ಇವು ನೇಕಾರರ ಹಳ್ಳಿಗಳೇ ಆಗಿವೆ. ಗುಳೇದಗುಡ್ಡ—ಇಳಕಲ್ಲು ನಗರದಲ್ಲಿ 10 ಸಾವಿರ ನೇಕಾರರ ಕುಟುಂಬಗಳಿವೆ. ಸದ್ಯ ಕಾರ್ಯಗತದಲ್ಲಿದ್ದ "ಕರ್ನಾಟಕ ಕೈಮಗ್ಗ ಅಭಿವೃದ್ಧಿ ಮಂಡಲಿಯ" ಸಮೀಕ್ಷೆ ಕೆಲಸ ಪೂರೈಸಿ ಬಡ ನೇಕಾರರಿಗೆ ಹಣಕಾಸಿನ ನೆರವು, ತಯಾರಾದ ಸರಕಿನ ಮಾರಾಟ, ಸುಧಾರಿಸಿದ ಉಪಕರಣ, ಕಚ್ಚಾಮಾಲು, ಪೂರೈಕೆ ಅಗತ್ಯವಿದ್ದ ತಾಂತ್ರಿಕ ಶಿಕ್ಷಣ, ವಸತಿಗೃಹ ಯೋಜನೆಗಳನ್ನು ಕಾರ್ಯಚರಣೆಯಲ್ಲಿ ತರುತ್ತಲಿದೆಯೇನೋ ನಿಜ. ಇದನ್ನು ತ್ವರಿತಗತಿಯಲ್ಲಿ ತಂದು ನೇಕಾರರಿಂದ ತುಂಬಿದ ಗ್ರಾಮಗಳಲ್ಲಿರುವ ಬಡ ನೇಕಾರರಿಗೆ ಇದರ ಲಾಭ ದೊರೆಯುವಂತಾಗಬೇಕು. ಈ ಯೋಜನೆಯ ಲಾಭ ದೊರಕುವವರೆಗೆ ನಾನು ಸರ್ಕಾರದವರಲ್ಲಿ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ಆಯಾ ಗ್ರಾಮದಲ್ಲಿರತಕ್ಕಂಥ ಸರ್ಕಾರಿ ಷೆಡ್ಯೂಲ್ಡ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್‌ಗಳು, ಬಡ ನೇಕಾರರಿಗೆ ಡಿ.ಐ.ಆರ್. ಯೋಜನೆಯ ಪ್ರಕಾರ ಸಾಲ ಒದಗಿಸುವ ವ್ಯವಸ್ಥೆ ಮಾಡಬೇಕು. ಏಕೆಂದರೆ, ನನಗೆ ತಿಳಿದ ಮಟ್ಟಿಗೆ ಬ್ಯಾಂಕ್‌ನ ಅಧಿಕಾರಿಗಳು ಈ ದಿಸೆಯಲ್ಲಿ ಮುತುವರ್ಜಿ ವಹಿಸಲಾರದವರಾಗಿದ್ದಾರೆ. ಬ್ಯಾಂಕ್‌ನ ನಿಯಮಗಳ ಪ್ರಕಾರ ಅವರು ನೇಕಾರರಿಗೆ ಈ ವರೆಗೆ ಕೊಟ್ಟಿರುವ ಹಣ ನೋಡಿದರೆ ಅವರ ಅಂಕಸಂಖ್ಯೆಗಳಿಂದಲೇ ನಮಗೆ ಗೊತ್ತಾಗುತ್ತದೆ. ಇವರು ಸರಿಯಾಗಿ ಹಣವನ್ನು ವಿತರಣೆ

ಮಾಡಿಲ್ಲ. ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಬಡ ಜನರಿಗೆ ಡಿ.ಐ.ಆರ್. ಯೋಜನೆಯ ಕೆಳಗೆ ಸಾಕಷ್ಟು ಹಣವನ್ನು ಸಾಲ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇಷ್ಟೇ ಅಲ್ಲದೆ ಇಳಕಲ್‌ನಲ್ಲಿರುವ ಯೋಜನೆಯು ಕೆಲವು ಹಳ್ಳಿಗಳಿಗೆ ಸೀಮಿತವಾಗಿದೆ. ಇನ್ನುಳಿದ ನೇಕಾರರ ಹಳ್ಳಿಗಳಿಗೆ ಕಾಲಕ್ರಮೇಣ ಈ ಯೋಜನೆಯು ಲಾಭಲಭಿಸುವಂತೆ ಕಾರ್ಪೊರೇಷನ್‌ನವರು ಬಾದಾಮಿ ತಾಲ್ಲೂಕಿನ ಕೇರೂರ-ಬಾದಾಮಿ, ಬೇಲೂರ, ಗೋವನ ಕೊಪ್ಪಗಳಿಗೂ, ಬಾಗಲಕೋಟೆ ತಾಲ್ಲೂಕಿನ ಶಿರೂರ—ಹವೇಲಿಗಳಿಗೂ ವಿಸ್ತರಿಸಬೇಕಾಗಿ ಪ್ರಾರ್ಥನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಭಂಗಿಯವರು ವಿಷದಪಡಿಸಿದಂತೆ ನೇಕಾರ ಗ್ರಾಮಗಳಲ್ಲಿ ನೇಕಾರಿ ಸಹಕಾರ ಸಂಘಗಳು ಕಾರ್ಯಗತವಾಗಿರುವುದು ನಿಜ. ಆದರೆ ಅವೆಲ್ಲಾ ಒಂದಲ್ಲೊಂದು ಕಾರಣದಿಂದ ಸ್ಥಗಿತಗೊಂಡಿವೆಯೆಂದು ಹೇಳಲು ತುಂಬಾ ಖೇದವಾಗುತ್ತದೆ. ಇವುಗಳನ್ನು ಸಹಕಾರಿ ಇಲಾಖೆಯವರು ಪುನಃ ಚೇತನಗೊಳಿಸಿ ಅವುಗಳ ಪರಿಸ್ಥಿತಿ ಸುಧಾರಿಸಿ ಚೆನ್ನಾಗಿ ಕೆಲಸಮಾಡುವಂತೆ ಮಾಡಬೇಕೆಂದು ತಮ್ಮಲ್ಲಿ ಮತ್ತೊಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೇಷ್ಮೆ ವ್ಯವಸಾಯ ಕುರಿತು ಹೇಳಬೇಕೆಂದರೆ, ಇದೊಂದು ಗ್ರಾಮೀಣ ಕಸಬು. ಹಳೇ ಮೈಸೂರಿನಲ್ಲಿ ರೇಷ್ಮೆ ವ್ಯವಸಾಯ ಅನೇಕ ವರ್ಷಗಳಿಂದ ಬೆಳೆಯುತ್ತಾ ಬಂದಿದೆಯೆಂದು ನನಗನಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಈ ವ್ಯವಸಾಯದ ಅನುಭವವಿಲ್ಲ. ಈ ರೇಷ್ಮೆ ವ್ಯವಸಾಯವು ಗ್ರಾಮಾಂತರದಲ್ಲಿ ವ್ಯವಸಾಯಗಾರರಿಗೆ ವರ್ಷಾನುಕಾಲವು ಕೆಲಸ ಒದಗಿಸಿ ಕೊಡುವುದು. ಇವತ್ತು ದಾಂಡೇಲಿ ಮುಂತಾದ ಕಡೆಗಳಿಗೆ ಕೃಷಿ ಕಾರ್ಮಿಕರು ವ್ಯವಸಾಯ ಕೆಲಸ ಇಲ್ಲದ ಸಮಯದಲ್ಲಿ ಊರು ಬಿಟ್ಟು ಹೊರಗೆ ಹೋಗುತ್ತಾರೆ. ಈ ಭಾಗಗಳಲ್ಲಿ ರೈತರಿಗೆ ಕೆಲಸವಿಲ್ಲದ ಸಮಯದಲ್ಲಿ ರೇಷ್ಮೆ ಕೆಲಸ ಪ್ರಾರಂಭ ಮಾಡಿದರೆ ಅವರಿಗೆ ಬಹಳ ಸಹಾಯ ಮಾಡಿದಂತಾಗುತ್ತದೆ. ಅವರೂ ಕೂಡ ಹೊರಗಡೆ ಹೋಗುವುದಿಲ್ಲ. ಆದುದರಿಂದ ಮಲಪ್ರಭಾ, ಘಟಪ್ರಭಾ, ಕೃಷ್ಣಾ ಯೋಜನೆಗಳ ಕೆಳಗೆ ಮಲ್ಬರಿ ಬೆಳೆಯನ್ನು ಬೆಳೆಸಿ ರೇಷ್ಮೆ ಸಾಗುವಳಿಗೆ ಅನುಕೂಲ ಮಾಡಿಕೊಡಬೇಕು. ನಮ್ಮ ಕಡೆ ಗುಡ್ಡಗಾಡು ಪ್ರದೇಶ ಜಾಸ್ತಿ ಇವೆ. ಅಲ್ಲಿ ಮರಗಿಡಗಳು ಬಹಳವಾಗಿ ಬೆಳೆಯುತ್ತವೆ. ಸಾಮಾನ್ಯವಾಗಿ ಮಾರ್ಚ್, ಏಪ್ರಿಲ್ ತಿಂಗಳ ಸಮಯದಲ್ಲಿ ರೇಷ್ಮೆ ಹುಳುವಿನಂತಹ ಒಂದು ಜಾತಿಯ ಹುಳುಗಳು ಹುಟ್ಟಿಕೊಂಡು ಹೆಬ್ಬೇವಿನ ಮರಗಳಲ್ಲಿರುವ ಎಲೆಗಳನ್ನೆಲ್ಲಾ ತಿಂದು ಒಂದು ರೀತಿ ದಾರವನ್ನು ಬಿಟ್ಟುಹೋಗುತ್ತವೆ. ಬಹುಶ ಇದೂ ಕೂಡ ಒಂದು ರೀತಿಯ ರೇಷ್ಮೆ ಇರಬಹುದೆಂದು ನನಗನಿಸುತ್ತದೆ. ಇದರ ಬಗ್ಗೆ ಸಂಶೋಧನೆ ನಡೆಸಿ ಅದರ ಗುಣಧರ್ಮವನ್ನು ನೋಡಿ ಉಪಯೋಗಿಸಿಕೊಳ್ಳಲು ಸಾಧ್ಯವಾದರೆ ಉಪಯೋಗಿಸಿಕೊಳ್ಳಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ನಮ್ಮ ಬಾದಾಮಿ ತಾಲೂಕಿನ ಕೈಗಾರಿಕೆಯನ್ನು ಕುರಿತು ಒಂದೆರಡು ಮಾತನ್ನು ಹೇಳ ಬಯಸುತ್ತೇನೆ. ಬದಾಮಿ ತಾಲೂಕು ಉಸುಕು ಭೂಮಿಯನ್ನು ಹೊಂದಿರತಕ್ಕಂಥ ಪ್ರದೇಶವಾಗಿರುತ್ತದೆ. ಈ ಭೂಮಿಯಲ್ಲಿ ಶೇಂಗಾ ಬೆಳೆಯಲು ವಿಪಲವಾಗಿ ಬೆಳೆಯುತದೆಂಬುದಾಗಿ ಬಡವರ ಬದಾಮಿ ಎಂಬುವಾಗಿ ಬದಾಮಿ ಗ್ರಾಮದ ಹೆಸರು ಬಂದಿದೆ. ಈ ಪ್ರದೇಶದಲ್ಲಿ ವರ್ಷಕ್ಕೆ 5 ಲಕ್ಷ ಕ್ವಿಂಟಾಲ್‌ನಷ್ಟು ಶೇಂಗಾ ಉತ್ಪನ್ನಮಾಡಬಹುದು. ಶೇಂಗಾದಿಂದ ತಯಾರಿಸತಕ್ಕ ವನಸ್ಪತಿ ತುಪ್ಪದ ಕಾರ್ಖಾನೆ, ಸಬಕಾರದ ಕಾರ್ಖಾನೆ, ಶೇಂಗದ ಹಿಂಡಿಯಿಂದ ಬಿಸ್ಕಟ್ಟು ಕಾರಖಾನೆ, ಇತ್ಯಾದಿಗಳನ್ನು ತಯಾರಿಸತಕ್ಕಂಥ ಒಂದು ಕಾರ್ಖಾನೆಯನ್ನು ಇಲ್ಲಿ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಶೇಂಗಾದ ಕವಚ (Husk) ದಿಂದ ರಟ್ಟಿನ ಕಾರ್ಖಾನೆ ಪ್ರಾರಂಭಿಸಬಹುದು. ಇದರಿಂದ ರೈತರಿಗೆ ಬೆಳೆದ ಶೇಂಗಾಕ್ಕೆ ಸರಿಯಾದ ಬೆಲೆ ಸಿಕ್ಕುವುದಲ್ಲದೆ, ಅನೇಕರಿಗೆ ಉದ್ಯೋಗವಕಾಶವು ಲಭಿಸುತ್ತದೆಂದು ಹೇಳಬಯಸುತ್ತೇನೆ.

ಇನ್ನು ಬಿಜಾಪುರ ಜಿಲ್ಲೆಯ ಉತ್ತರ ಪ್ರದೇಶವು ಕೃಷ್ಣಾನದಿಯಿಂದ ಉತ್ತರದ ಭೀಮಾನದಿಯವರೆವಿಗಿರುವ ಈ ಪ್ರದೇಶವು ಮುಖ್ಯತ ಡೆಕ್ಕನ್ ಟ್ರಾಪ್ ರಾಕ್ ದಿಂದ ಕೂಡಿದ ಭೂಮಿಯಿದ್ದು ಏರಿಳಿತಗಳಿಂದ ಅಂದರೆ ಹಳ್ಳ ದಿಣ್ಣೆಗಳಿಂದ ಕೂಡಿದ ಪ್ರದೇಶವಾಗಿರುತ್ತದೆ. ಇಲ್ಲಿ

ವಿಶೇಷವಾಗಿ ಬಂಜರು ಭೂಮಿಯಿದ್ದು ಕೇವಲ ಹುಲ್ಲು ಮಾತ್ರ ಬೆಳೆಯಲು ಸಾಧ್ಯವಿರುತ್ತದೆ. ಇಂತಹ ವಿಶಾಲವಾದ ಪ್ರದೇಶದಲ್ಲಿ ಕತ್ತಾಳೆ ಬೆಳೆಯಲು ಸಾಧ್ಯ. ಈ ಕತ್ತಾಳೆ ಬೆಳೆಯಿಂದ ಸದ್ಯ ವಿಜಾಪುರ ಜಿಲ್ಲೆಯಿಂದ ಕಚ್ಚಾನಾರು ತಯಾರಾಗಿ, ಟನ್‌ಗಟ್ಟಲೆ ವ್ಯಾಗನ್‌ಗಟ್ಟಲೆ ಕಲ್ಕತ್ತೆಗೆ ರವಾನೆಯಾಗುತ್ತಲಿದೆ ಅದ್ದರಿಂದ ಹೆಚ್ಚು ಕ್ಷೇತ್ರದಲ್ಲಿ ಇದನ್ನು ಬೆಳೆಸಿದಲ್ಲಿ ನಾಲ್ಕು ವರ್ಷದಲ್ಲಿ ಬೆಳೆಬಂದು ವಿಪುಲವಾದ ನಾರು ಉತ್ಪನ್ನವಾಗುತ್ತದೆ. ಪರರಾಜ್ಯಗಳಿಗೆ ಈ ನಾರನ್ನು ಕಳಿಸಿದರೆ ರಾಜ್ಯದಲ್ಲಿ ನಾರಿನ ಅಭಿವೃದ್ಧಿ ಯೋಜನೆಯಿಂದ ಒಳ್ಳೆ ಬಟ್ಟೆ ಇನ್ನಿತರ ಪಕ್ಕಾ ಮಾಲು ತಯಾರಿಸಿದಲ್ಲಿ ವಿದೇಶಿ ವಿನಿಮಯಕ್ಕೂ ಅನುಕೂಲವಾಗುತ್ತದೆ, ಬಿಜಾಪುರ ಜಿಲ್ಲೆಯಲ್ಲಿ ಉತ್ತರ ಭಾಗದಲ್ಲಿ ಕತ್ತಾಳೆ ಬೆಳೆಯನ್ನು ಖಾಸಗಿ ಹಾಗೂ ಸರಕಾರಿ ಭೂಮಿಯಲ್ಲಿ ಬೆಳೆಸುವುದರೊಂದಿಗೆ ಮುಂದೆ ಪಕ್ಕಾಮಾಲನ್ನಾಗಿ ಪರಿವರ್ತಿಸುವುದಾಗಿ ಫೈಬರ್ ಡೆವಲಪ್‌ಮೆಂಟ್ ಸ್ಕೀಮ್‌ಗೂ ಅನುಕೂಲವಾಗುತ್ತದೆ. ಅದ್ದರಿಂದ ಈ ಕಾರ್ಖಾನೆಯನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥನೆ.

ಬಾದಾಮಿ ಬಾಗಲಕೋಟೆ ತಾಲ್ಲೂಕಿನಲ್ಲಿ ಖನಿಜ ಸಂಪತ್ತು ಅಪಾರವಾಗಿದೆ. ಗಣಿ ಇಲಾಖೆಯವರು ಈಗಾಗಲೇ ಸಮೀಕ್ಷೆಯನ್ನು ಮಾಡಿರುತ್ತಾರೆ. ಕಗಲಗೊಂಬ, ಸೂಳಿಕೇರಿ, ನೀರಬೂದಿಹಳ, ಯಳ್ಳಿಗುತ್ತಿ ಗ್ರಾಮ ಪ್ರದೇಶದಲ್ಲಿ ದೊರೆಯತಕ್ಕ ಖನಿಜಗಳನ್ನು ಈಗಾಗಲೇ ಸಂಶೋಧಿಸಿರುತ್ತಾರೆ. ಹೀಗೆ ರಾಜ್ಯದಲ್ಲಿಯ ಸಂಪನ್ಮೂಲಗಳನ್ನು ಸಂಶೋಧಿಸಿ ಖನಿಜ ಸಂಪತ್ತಿನ ಲಾಭವನ್ನು ಪಡೆದು ಅಭಿವೃದ್ಧಿ ಮಾಡುವುದಾಗಿ ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡು ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).— ಸನ್ಮಾನ್ಯ ಸಭಾಧ್ಯಕ್ಷಣಿಯವರೇ ಈವತ್ತಿನ ದಿವಸ ಮೂರು ಜನ ಸನ್‌ಮಾನ್ಯ ಮಂತ್ರಿಯವರು ಮಂಡಿಸಿರತಕ್ಕಂಥ ಖಾತೆಗಳ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿ ಕೆಲವು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ತಾವು ಅನುಗ್ರಹ ಕೊಟ್ಟಿರತಕ್ಕಂಥ ಕಾಲ ಮಿತಿಯಲ್ಲಿಯೇ ನನ್ನ ಬಾಷಣವನ್ನು ಮುಕ್ತಾಯ ಮಾಡಲು ಪ್ರಯತ್ನ ಪಡುತ್ತೇನೆ. ತಾವು ಮಧ್ಯ ಘಂಟೆಯನ್ನು ಹೊಡೆದರೆ ಜ್ಞಾಪಕ ಮರೆತುಹೋಗಿ ಬಿಡುತ್ತದೆ. ಅದ್ದರಿಂದ ತಮ್ಮಲ್ಲಿ ಪ್ರಪ್ರಥಮವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಘಂಟೆಯನ್ನು ಮಾತ್ರ ಹೊಡೆಯಬೇಡಿ, ನಾನು ದೀರ್ಘವಾಗಿ ಭಾಷಣವನ್ನು ಮಾಡುವುದಕ್ಕೆ ಹೋಗದೆ ನನ್ನ ಮಾತನ್ನು ಸೀಮಿತಪಡಿಸಿ ಕೊಂಡು ಕೆಲವು ಅಂಶಗಳನ್ನು ತಮ್ಮ ಮುಖಾಂತರ ಘನ ಹೊಂದಿದ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅನೇಕಸಾರಿ ಯಾವ ಸಚಿವರೇ ಆಗಲಿ, ಉಪಸಚಿವರೇ ಆಗಲಿ, ಮಾತನ್ನು ಆಡುವಾಗ ರಾಮಬಾಣ ಹೊಡೆದಂತೆ ಮಾತನಾಡಬೇಕೆಂದು ತಮ್ಮ ಮುಖಾಂತರ ಪ್ರಸ್ತಾಪ ಮಾಡಿದ್ದೇನೆ. ಈಗಲೂ ಸಹ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ತಾವು ಮಾತನಾಡುವಾಗ ರಾಮಬಾಣ ಹೊಡೆದಂತೆ ಮಾತನಾಡಿ ಇಲ್ಲದಿದ್ದರೆ ರಾಜನಾಮೆ ಕೊಡಿ ಎಂದು.

ಸನ್‌ಮಾನ್ಯ ಅಧ್ಯಕ್ಷಣಿಯವರೇ ಬಹಳ ದೊಡ್ಡ ಖಾತೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. 7 ಕೋಟಿ, 3 ಕೋಟಿ, 2 ಕೋಟಿ ಚಿಲ್ಲರೆ ಏನು ಖರ್ಚು ಮಾಡುತ್ತಿದ್ದೀರಿ ಇದು ಬಡಬೋರೆಗೌಡ ಬೆವರನ್ನು ಸುರಿಸಿದಂಥ ಹಣವಾಗಿರುತ್ತದೆ. ಇದನ್ನು ವಿನಿಯೋಗಿಸತಕ್ಕಂಥ ಜವಾಬ್ದಾರಿಯನ್ನು ಈ ಮನೆ ವಹಿಸಿಕೊಡತಕ್ಕಂಥಾದ್ದು ಸಹ ಅವಶ್ಯಕವಿರುತ್ತದೆ. ಕೈಗಾರಿಕೆ ಮಂತ್ರಿಗಳು ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಪ್ರಾಯಶಃ ಮಾನ್ಯ ಶಿವಯ್ಯನವರು, ಸಚಿವರು ಈ ಮಾತುಗಳನ್ನು ಮುಟ್ಟಿಸುತ್ತಾರೆ ಎನ್ನುವ ನಂಬಿಕೆಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ದಕ್ಷತೆಯನ್ನು, ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡತಕ್ಕಂಥಾದ್ದು ಈ ಸಂದರ್ಭದಲ್ಲಿ ಯೋಗ್ಯವೂ ಅಲ್ಲ ಉಚಿತವೂ ಅಲ್ಲವೆಂದು ಹೇಳಬಯಸುತ್ತೇನೆ. ಒಂದೇ ಒಂದು ವಿಷಯ ಮೈಸೂರು ಸೋಪ್ ಫ್ಯಾಕ್ಟರಿಯ ಬಗ್ಗೆ ಅಧ್ಯಕ್ಷರ ಗಮನಕ್ಕೆ ತರಬಯಸುತ್ತೇನೆ ಮೈಸೂರು ಸೋಪ್ ಕಾರ್ಖಾನೆಯಲ್ಲಿ ಡೈರೆಕ್ಟರವರ ಹುದ್ದೆ. ಕೆಲವು ತಿಂಗಳಿಂದ ಖಾಲಿ ಇದೆ, ಅಲ್ಲಿ ಒಬ್ಬ ಯೋಗ್ಯ ಜನರಲ್ ಮ್ಯಾನೇಜರ್ ಬಹಳ ಪಾಂಡಿತ್ಯವನ್ನು ಪಡೆದಿದ್ದರು ತುಂಬಾ ಸಂತೋಷ. ಪ್ರಾಯಶಃ ಮಾನ್ಯ ಮುಖ್ಯಮಂತ್ರಿಯವರು ನ್ಯಾಯ ದೊರಕಿಸುತ್ತಾ

ರೆಂಬ ನಂಬಿಕೆಯಿಂದ ಈ ಒಂದು ಮಾತನ್ನು ಹೇಳುತ್ತಿದ್ದೇನೆ. ಈ ಜನರಲ್ ಮ್ಯಾನೇಜರ್ 20-30 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಫಾರಿನ್‌ಗೆ ಓದಲಿಕ್ಕೆ ಕಳುಹಿಸಿದ್ದಾರೆ. ಇಂಥ ಒಂದು ದೊಡ್ಡ ಹುದ್ದೆಗೆ ಲಾಯಕ್ಕಾಗಿದ್ದಾರೆಯೇ ಎಂದು ಹಿಂದಿನ ಕೈಗಾರಿಕಾ ಸಚಿವರು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಶಿಫಾರಸು ಮಾಡಿದ್ದಾಗ್ಯೂ ಸಹ ರಾಜಕಾರಣದಲ್ಲಿ ಜಿಜ್ಞಾಸೆಹುಟ್ಟಿ ಫೈಲುಗಳು ಮುಖ್ಯಮಂತ್ರಿಗಳ ಗಮನಕ್ಕೆ ಬರೆದ ಮೂಲೆಯಲ್ಲಿ ಬಿದ್ದಿದಿಯೋ ಏನೋಗೊತ್ತಿಲ್ಲ. ಏತಕ್ಕೆಂದರೆ ಇತ್ತೀಚೆಗೆ ಅನೇಕ ವ್ಯವಹಾರಗಳ ಈ ಒಂದು ಪರಿಪಾಟದಲ್ಲಿ ಸಾಕಷ್ಟು ರಾಜಕೀಯ ಕಾರಣದ ಒತ್ತಡದಿಂದ ಜೊತೆಗೆ ಎಷ್ಟೋ ಮಿತ್ರರ ವಿರೋಧ ಇದನ್ನೆಲ್ಲ ಬಗೆಹರಿಸಬೇಕಾದರೆ ಪ್ರಾಯಶಃ ತಲೆ ಕೆಡಿಸಿಕೊಂಡಿರಬಹುದು. ಆದರೆ ತಲೆ ಕೆಟ್ಟಿದೆ ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ಆದಾಗ್ಯೂ ಸ್ವಲ್ಪ ನಿರ್ದಿಷ್ಟವಾದ ವ್ಯಕ್ತಿ, ಘಂಟೆ ಹೊಡೆದ ಹಾಗೆ ಮಾತನಾಡತಕ್ಕಂಥ ಸ್ವಭಾವವುಳ್ಳ ಶ್ರೀ ಡಿ. ದೇವರಾಜಅರಸ್‌ರವರು ಮೈಸೂರು ಸೋಪ್ ಕಾರ್ಖಾನೆಯ ಡೈರೆಕ್ಟರ್ ಅವರ ಹುದ್ದೆಯನ್ನು ಹಿಂದಿನ ಮಂತ್ರಿಗಳು ಏನು ಪ್ರಶ್ನೆ ಮಾಡಿದ್ದಾರೆ ಅದನ್ನು ಪರಿಶೀಲನೆ ಮಾಡಬಹುದು. ಇದರಲ್ಲಿ ಏನು ರಾಜಕೀಯ ಜಿಜ್ಞಾಸೆ ಇದ್ದರೂ ಕೂಡ ಫೈಲುಗಳನ್ನು ಕೂಡಲೆ ತರಿಸಿ ನ್ಯಾಯ ದೊರಕಿಸಿ ಕೊಡುತ್ತಾರೆಂದು ಹೇಳ ಬಯಸುತ್ತೇನೆ.

ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಅನೇಕಸಲ ಪ್ರಸ್ತಾಪ ಮಾಡಲಾಗಿದೆ, ಈ ಕೈಗಾರಿಕೆ ಇಲಾಖೆಯಲ್ಲಿ ಕೆಲವು ಪರ್ಮಿಟ್ ಕೋಟ ಕೊಡುವುದರ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಂದರ್ಭದಲ್ಲಿ ಪ್ರವೇಶಮಾಡಿ ವಾತಾವರಣವನ್ನು ತಿಳಿ ಮಾಡಿದ್ದಾರೆ. ತಾವು ಈ ರಾಜ್ಯದಲ್ಲಿ ಯಾರು ಯಾರಿಗೆ ಯಾವ ಯಾವ ಕೋಟ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಹೇಳುವುದಾದರೆ ಕಸಬು ಗೊತ್ತಿಲ್ಲದವರಿಗೆ ಪರ್ಮಿಟ್ ಕೋಟವನ್ನು ಕೊಟ್ಟಿರುತ್ತಾರೆ. ರಾಜಕಾರಣದಿಂದಲಾಗಲಿ, ಸ್ವಜನಪಕ್ಷಪಾತದಿಂದಲಾಗಲಿ ಪ್ರಾಯಶಃ ನಾನು ಹೇಳುವುದಾದರೆ ಶ್ರೀಮಾನ್ ದೇವರಾಜಅರಸ್‌ರವರ ನಿಲುವು ಈ ರಾಜ್ಯದಲ್ಲಿ ಏನು ಎಂಬುದನ್ನು ಘೋಷಣೆ ಮಾಡಬೇಕಿತ್ತು. ಕೆಲವು ಸ್ಟೀಲ್ ಕೋಟವನ್ನು ಏನು ಗೊತ್ತಿಲ್ಲದವರಿಗೆ ಕೊಟ್ಟಿರುತ್ತಾರೆ. ಆದ್ದರಿಂದ ಇಲಾಖೆಯ ಮೇಲೆ ಬಂದಿರತಕ್ಕಂಥ ಒಂದು ಗುರುತರವಾದ ಅಪಾದನೆಯನ್ನು ಲಕ್ಷದಲ್ಲಿಟ್ಟು ಕೊಂಡು ನಿಮ್ಮ ಸರ್ಕಾರದ ಖ್ಯಾತಿ ಕೀರ್ತಿ ಹೆಚ್ಚು ಬರಬೇಕಾದರೆ ಅಧ್ಯಕ್ಷರ ಮುಖಾಂತರ ಈ ಸಭೆಯಮುಂದೆ ಘೋಷಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರೇಷ್ಮೆ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಇಲ್ಲಿ ಒಂದು ಸಮಿತಿಯನ್ನು ಮಾಡಿಕೊಂಡಿದ್ದಾರೆ. ಅಧ್ಯಕ್ಷರೆ ಕರ್ನಾಟಕ ರಾಜ್ಯ ವಿಶ್ವದಲ್ಲಿಯೇ ರೇಶ್ಮೆ ಉತ್ಪಾದನೆಯಲ್ಲಿ ಬಹಳ ಪ್ರಖ್ಯಾತವಾದಂಥ ರಾಜ್ಯವಾಗಿದೆ. ರಾಷ್ಟ್ರದಲ್ಲಿ ಉತ್ಪಾದನೆಯಾಗತಕ್ಕಂಥ ರೇಷ್ಮೆಯಲ್ಲಿ, ಶೇಕಡಾ85-95 ಭಾಗ ಉತ್ಪಾದನೆಯನ್ನು ಮಾಡತಕ್ಕಂಥ ಕೀರ್ತಿ ಕರ್ನಾಟಕ ರಾಜ್ಯಕ್ಕೆ ಬಂದಿರತ್ತದೆ ಇದರಲ್ಲಿ ಒಂದು ಅಂಶ ಶ್ರೀ ಡಿ. ದೇವರಾಜ ಅರಸ್‌ಅವರ ಬಗ್ಗೆ ಹೇಳುವುದಾದರೆ ನಿಜವಾಗಿಯೂ ಈ ಕ್ಷೇತ್ರದಲ್ಲಿ ಬಹಳ ಯಶಸ್ವಿಯಾದ ಸೇವೆಯನ್ನು ಮಾಡಿದ್ದಾರೆ. ಅವರು ಹಿಂದೆ ಕೇಂದ್ರ ಸರ್ಕಾರದಲ್ಲಿ ರೇಷ್ಮೆ ಮಂಡಲಿಯಲ್ಲಿ ಅಧ್ಯಕ್ಷರಾಗಿದ್ದಾಗ ಈ ಇಲಾಖೆಯ ವಿಷಯದಲ್ಲಿ ಬಹಳ ದುಡಿದಿದ್ದಾರೆ.

3-30 P. M.

ಈ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಈ ಇಲಾಖೆಯ ವಿಷಯದಲ್ಲಿ ಬಹಳ ವರ್ಷಗಳಿಂದ ಪರಿಶ್ರಮಪಟ್ಟಿದ್ದಾರೆ ಮತ್ತು ಇದರ ಜೊತೆಗೆ ರೇಷ್ಮೆ ಬೆಳೆಗಾರರು ಎಂದು ಪ್ರಖ್ಯಾತಿಯನ್ನು ಪಡೆದಿದ್ದಾರೆ ಸನ್ಮಾನ್ಯ ಅಧ್ಯಕ್ಷರೇ, ಅವರು ಇದಕ್ಕಾಗಿ ನಿಗದಿ ಮಾಡಿರತಕ್ಕಂಥ ಹಣಕಾಸಿನ ವ್ಯವಸ್ಥೆಯನ್ನು ನೋಡಿದರೆ ಅದು ಬಹಳ ಕಡಿಮೆ. ನಾವು ಅನೇಕ ಸಾರಿ ಅವರ ಭಾಷಣವನ್ನು ಕೇಳಿದ್ದೇವೆ, '100 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಮಾಡುತ್ತೇವೆ' ಎನ್ನತಕ್ಕಂಥಾದ್ದನ್ನು ಜನತೆಗೆ ಹೇಳಿರುವುದು ಅಷ್ಟು ಉಚಿತವಲ್ಲ. ಈ ರೇಷ್ಮೆ ಇಲಾಖೆಗೆ ಎಷ್ಟು ಪ್ರಾಧಾನ್ಯತೆ ಸಿಕ್ಕಬೇಕಾಗಿತ್ತೋ ಅಷ್ಟು ಪ್ರಾಧಾನ್ಯತೆ ಸಿಕ್ಕಿಲ್ಲ. ಪ್ರಾಯಶಃ ಕಾರಣವಾದರೂ ಇಷ್ಟೆ ಒಳ್ಳೆಯ ಮಂತ್ರಿಗಳಿಗೆ ಒಳ್ಳೆಯ ಇಲಾಖೆ ಸಿಕ್ಕಿಲ್ಲ. ಏನೇ ತೊಂದರೆಗಳು ಬಂದಾಗ್ಯೂ ಸಹ ಅದನ್ನು

ದಿಟ್ಟತನದಿಂದ ಎದುರಿಸತಕ್ಕಂಥ ಸಾಮರ್ಥ್ಯ ಮಾನ್ಯ ಶ್ರೀರಾಮುಲುರವರಿಗೆ ಇದೆ, ಮತ್ತು ಈ ಇಲಾಖೆಯಲ್ಲಿರತಕ್ಕಂಥ ಡೈರೆಕ್ಟರ್ ಸಹ ಯಾರಿಗೂ, ಪ್ರಾಯಶಃ ಮಾನ್ಯ ಮುಖ್ಯಮಂತ್ರಿಯವರು ಹೇಳಿದರೂ ಸಹ ಬಗ್ಗದೇ ಇರತಕ್ಕಂಥ ಅಧಿಕಾರಿ ಎಂದು ನಾನು ಕೇಳಿದ್ದೇನೆ. ಬಹಳ ಬಿಗಿ ಮುಷ್ಟಿ ಇರತಕ್ಕಂಥ ಅಧಿಕಾರಿ ಮತ್ತು ಅಷ್ಟೇ ಬಿಗಿ ಮುಷ್ಟಿ ಇರತಕ್ಕಂಥ ಮಾನ್ಯ ಮಂತ್ರಿಯವರು ಇರುವಾಗ ಹೆಚ್ಚಿಗೆ ಹಣವನ್ನು ಈ ಇಲಾಖೆಗೆ ಒದಗಿಸಬೇಕಾಗಿತ್ತು. ಆದಾಗ್ಯೂ ಸಹ ಇನ್ನು ಮುಂದಾದರೂ ಹೆಚ್ಚಿನ ಹಣವನ್ನು ಈ ಇಲಾಖೆಗೆ ಒದಗಿಸಿ, ಹೆಚ್ಚಿನ ಹಣವನ್ನು ಈ ರೇಷ್ಮೆ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು ಎಂದು ಹೇಳುತ್ತೇನೆ. ಈ ರಾಜ್ಯದಲ್ಲಿ 2½ ಲಕ್ಷ ಕುಟುಂಬಗಳು ಈ ರೇಷ್ಮೆ ಬೆಳೆಯ ಮೇಲೆ ಅವಲಂಬಿಸಿಕೊಂಡಿದ್ದಾರೆ. ಸುಮಾರು 10 ಲಕ್ಷ ಜನರು ಇದರಿಂದ ಜೀವನವನ್ನು ನಡೆಸುತ್ತಿದ್ದಾರೆ. ಆದ್ದರಿಂದ 10 ಲಕ್ಷ ಜನ ನಿರುದ್ಯೋಗದ ಸಮಸ್ಯೆಯನ್ನು ಇದರಿಂದ ಪರಿಹರಿಸಿದಂತಾಗಿದೆ. ನಮ್ಮ ರಾಜ್ಯದಲ್ಲಿ ಪ್ರತಿವರ್ಷ 30 ಸಾವಿರ ಟನ್‌ನಷ್ಟು ರೇಷ್ಮೆ ಉತ್ಪಾದನೆಯಾಗುತ್ತಿದೆ. ನಾವು ಒಂದು ವರ್ಷಕ್ಕೆ ಈ ರೇಷ್ಮೆ ವ್ಯವಸಾಯ ಮಾಡತಕ್ಕಂಥವರಿಗೆ 18 ಕೋಟಿಯಷ್ಟು ಬಿತ್ತನೆ ಬೀಜ(ಮೊಟ್ಟೆ)ವನ್ನು ಒದಗಿಸಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಇದನ್ನು ಗಮನಿಸಬೇಕು. ಅದರಲ್ಲಿ ತಮ್ಮ ಇಲಾಖೆಯ ವತಿಯಿಂದ ಒದಗಿಸತಕ್ಕಂಥಾದ್ದು ಕೇವಲ 2½ ಕೋಟಿ ಮೊಟ್ಟೆಗಳು ಮಾತ್ರ. ಉಳಿದ ಮೊಟ್ಟೆಗಳು ಬೇರೆ ಸೀಡ್ ಗ್ರೋಯರ್ಸ್‌ನಿಂದ ಬರುತ್ತದೆ. ಅವರು ಸ್ವಚ್ಛವಾದ ರೋಗರಹಿತವಾದ ಮೊಟ್ಟೆಯನ್ನು ಒದಗಿಸುವುದಕ್ಕೆ ಅವರಿಗೆ ಅವಕಾಶವಾಗುತ್ತಾ ಇಲ್ಲ. ಈ ಬಗ್ಗೆ ಸಂಶೋಧನಾ ಕಾರ್ಯ ಹೇಗೆ ಎಂಬುದು ತಮಗೆ ಗೊತ್ತಿದೆ. ಚನ್ನಪಟ್ಟಣದಲ್ಲಿ ಒಂದು ದೊಡ್ಡ ಬೃಹದಾಕಾರವಾದ ಸಂಶೋಧನಾ ಕೇಂದ್ರವನ್ನು ಕಟ್ಟಿದರು. ಅದು ಪೋಲಿಸ್ ಟ್ರೇನಿಂಗ್ ಸೆಂಟರ್ ಆಯಿತು. ಮೈಸೂರಿನಲ್ಲಿರತಕ್ಕಂಥ ಸಂಶೋಧನಾ ಕೇಂದ್ರ ಈ ರೇಷ್ಮೆ ಬೆಳೆಗಾರರಿಗೆ ಏನೇನು ಸೌಲಭ್ಯಗಳನ್ನು ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಸರ್ಕಾರದವರು ಈ ರೇಷ್ಮೆ ಬೆಳೆಗಾರರಿಗೆ ರೋಗರಹಿತವಾದ ಮೊಟ್ಟೆಗಳನ್ನು ಕೊಟ್ಟರೆ ಮಾತ್ರ ಅವರಿಗೆ ಪ್ರಯೋಜನವಾಗುತ್ತದೆಯೇ ಶಿವಾಯಿ ಅವರಿಗೆ ಅನೇಕ ತರದ ಸಾಲಗಳನ್ನು ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ನಾನಾದರೂ ಕೇಳುತ್ತೇನೆ ಇಷ್ಟು ಜವಾಬ್ದಾರಿಯನ್ನು ಸರ್ಕಾರದವರೇ ಹೊರುವುದಕ್ಕೆ ಸಾಧ್ಯವಾಗಿದ್ದರೆ ಇಷ್ಟು ಜನ ಪರಿಣತರು ತಂಡ ಏತಕ್ಕೆ ಇರಬೇಕಾಗಿತ್ತು. ಈ ಒಂದು ಜವಾಬ್ದಾರಿಯನ್ನು ಹೊತ್ತು ಅವರಿಗೆ ರೋಗರಹಿತವಾದ ಮೊಟ್ಟೆಗಳನ್ನು ಒದಗಿಸತಕ್ಕಂಥ ಕಾರ್ಯ ಮಾನ್ಯ ದೇವರಾಜ ಅರಸ್‌ರವರ ನಾಯಕತ್ವದಲ್ಲಿ, ಅವರ ಕಾಲದಲ್ಲಿ ಆಗದೇ ಹೋದರೆ ಇನ್ನು ಯಾರ ಕಾಲದಲ್ಲಿಯೂ ಈ ಕಾರ್ಯವಾಗುವುದಿಲ್ಲ. ಮಾನ್ಯ ಶ್ರೀರಾಮುಲುರವರು ಮತ್ತು ಈ ಇಲಾಖೆಯ ಡೈರೆಕ್ಟರ್‌ರವರು ತತ್ವಶಃ ಈ ಕಾರ್ಯವನ್ನು ಮಾಡದಿದ್ದರೆ 2½ ಲಕ್ಷ ಕುಟುಂಬದವರ ಶಾಪಕ್ಕೆ ಅವರೆಲ್ಲರೂ ಒಳಗಾಗಬೇಕಾಗುತ್ತದೆ. ಆದ್ದರಿಂದ ದಯಮಾಡಿ ಅವರಿಗೆ ರೋಗರಹಿತವಾದ ಮೊಟ್ಟೆಗಳನ್ನು ಕೊಟ್ಟು ತಾವು ಸಮರ್ಥಶಾಲಿಗಳಾಗಬೇಕು. ಹೆಚ್ಚುಹೆಚ್ಚಾಗಿ ರೇಷ್ಮೆ ಉತ್ಪನ್ನ ಮಾಡತಕ್ಕಂಥವರು ಈ ರೇಷ್ಮೆ ಬೆಳೆಯನ್ನು ದೇವರು ಎಂದು ತಿಳಿದುಕೊಂಡಿದ್ದಾರೆ. ಈ ರೇಷ್ಮೆ ಬೆಳೆಗಾರರು ರೇಷ್ಮೆಯನ್ನು ಬೆಳೆದು ಮಾರ್ಕೆಟ್‌ಗೆ ತೆಗೆದುಕೊಂಡು ಹೋಗುವುವರೊಳಗೆ ಅವರು ಪಡತಕ್ಕಂಥ ಭವಣೆ ಅಷ್ಟಿಷ್ಟಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಯವರೂ ಅನುಭವಿಸಿದ್ದಾರೆ. ಈ ರೇಷ್ಮೆ ಬೆಳೆಗಾರರು ಚಾಮರಾಜನಗರ ಟಿ. ನರಸೀಪುರ ಕನಕಪುರ ಮತ್ತು ಇತರ ಅನೇಕ ಪ್ರದೇಶಗಳಿಂದ ರಾಮನಗರದ ಮಾರ್ಕೆಟ್‌ಗೆ ತರುತ್ತಾರೆ. ಇಡೀ ಕರ್ನಾಟಕದಲ್ಲಿ ಈ ರಾಮನಗರದ ಮಾರ್ಕೆಟ್‌ನಲ್ಲಿ ಆಗತಕ್ಕಂಥ ರೆವಿನ್ಯೂ ಉತ್ಪತ್ತಿ, ಇನ್ಯಾವ ಮಾರ್ಕೆಟ್‌ನಲ್ಲಿಯೂ ಆಗುವುದಿಲ್ಲ. ನನ್ನ ಅನುಭವದ ಪ್ರಕಾರ 1976-77ರಲ್ಲಿ ಸುಮಾರು 9 ಲಕ್ಷ ಚಿಲ್ಲರೆ ರೆವಿನ್ಯೂ ಉತ್ಪತ್ತಿಯಾಗಿದೆ. ಅನೇಕ ಸಂದರ್ಭಗಳಲ್ಲಿ ಲೀಕೇಜ್ ಆಗುತ್ತದೆ. ಮಾರ್ಕೆಟಿಂಗ್ ಆಫೀಸರ್, ಗುಮಾಸ್ತರು, ಬರೆಯುವವರು, ಕೊಂಡುಕೊಳ್ಳುವವರು ಮೇಸ್ಟೇಜ್ ಇಟ್ಟುಕೊಂಡು, ಲೀಕೇಜಸ್ ಇಲ್ಲದೇ ಹೋದರೆ ಪ್ರತಿವರ್ಷ 12-14 ಲಕ್ಷ ರೂಪಾಯಿಗಳ ರೆವಿನ್ಯೂ ಉತ್ಪತ್ತಿ ಇರುತ್ತದೆ. ಒಂದು ವಿಷಯವನ್ನು ತಮ್ಮಲ್ಲಿ ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಕರ್ನಾಟಕದಲ್ಲಿ 35 ಸರ್ಕಾರಿ ಮಾರ್ಕೆಟ್‌ಗಳು ಇವೆ. ಈ 35 ಮಾರ್ಕೆಟ್‌ಗಳ ಪೈಕಿ 5 ಮಾರ್ಕೆಟ್‌ಗಳಿಗೆ ಮಾತ್ರ ಸ್ವಂತ ಕಟ್ಟಡ ಇದೆ. ಇನ್ನು 30 ಮಾರ್ಕೆಟ್‌ಗಳಿಗೆ ಸ್ವಂತ ಕಟ್ಟಡ ಇಲ್ಲ. ನನ್ನ ಅನುಭವದ ಪ್ರಕಾರ ರಾಮನಗರ ಕೋಲಾರ ಶಿಡ್ಲಘಟ್ಟ ಈ ಮೂರು ಮಾರ್ಕೆಟ್‌ಗಳಲ್ಲಿ ಬರತಕ್ಕಂಥ ರೇಷ್ಮೆಗೂಡು ರಾಜ್ಯದಲ್ಲಿ ಇನ್ನು ಯಾವ ಕಡೆಗಳಲ್ಲೂ ಬರುವುದಿಲ್ಲ. ಈ ರೇಷ್ಮೆ ಬೆಳೆಗಾರರ ರಕ್ಷಣೆಯನ್ನು ಮಾಡತಕ್ಕಂಥ

ನೈತಿಕ ಹಕ್ಕು ಏನಿದೆ ಆ ಪ್ರಕಾರ ಈ ರೇಷ್ಮೆ ಬೆಳೆಗಾರರ ಮಾರ್ಕೆಟ್‌ಗಳಿಗೆ ಸ್ವಂತ ಕಟ್ಟಡ ಕೊಟ್ಟಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಈ ಸರ್ಕಾರಿ ಮಾರ್ಕೆಟ್‌ಗಳಿಗೆ ಸ್ವಂತ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಸಂಬಂಧಪಟ್ಟ ರೇಷ್ಮೆ ಇಲಾಖೆಯ ಮಂತ್ರಿಗಳಿಗೂ ನಾನೊಂದು ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತೇನೆ, ರಾಮನಗರದ ಹಳೇ ಬಸ್‌ಸ್ಟ್ಯಾಂಡ್ ಸಮೀಪದಲ್ಲಿ ಈ ಇಲಾಖೆಯವರು ವಹಿಸಿಕೊಂಡಿರತಕ್ಕ ಜಾಗ ಇದೆ. ಅಲ್ಲಿ ತಾವು ಈ ರೇಷ್ಮೆ ಮಾರ್ಕೆಟ್ ಕಟ್ಟಡವನ್ನು ಕಟ್ಟಿಸಿಕೊಡಬೇಕು. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲೀ, ಸಂಬಂಧಪಟ್ಟ ಸಚಿವರಾಗಲೀ ಯಾವ ಒಂದು ರಾಜಕಾರಣಕ್ಕೂ ಒಳಗಾಗಬಾರದು. ಏನೇ ಬಂದರೂ ಸಹ ಅನೇಕ ದಿಟ್ಟತನದ ನಿಲುವನ್ನು ತೆಗೆದುಕೊಂಡಿರತಕ್ಕಂಥ ಸಂಬಂಧಪಟ್ಟ ಮಾನ್ಯ ಮಂತ್ರಿಯವರು ಯಾವ ಒಂದು ಒತ್ತಡಕ್ಕೆ ಒಳಗಾಗದೇ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಇರತಕ್ಕಂಥ ತಮ್ಮ ಇಲಾಖೆಗೆ ಸಂಬಂಧಪಟ್ಟ ಜಮೀನಿನಲ್ಲಿ ಸ್ವಂತ ಕಟ್ಟಡವನ್ನು ಕಟ್ಟಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಇದರಲ್ಲಿ 10 ಕೋಟಿ ರೂಪಾಯಿಗಳು ಲುಕ್ಸಾನು ಆಗಿದೆ ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಇದು ಸಾಮಾನ್ಯ ಹಣ ಅಲ್ಲ. ನಾನು ಈ ಬಗ್ಗೆ ಒರಟು ಮಾತಿನಿಂದ ಇದು ಯಾರಪ್ಪನ ಮನೆಯ ದುಡ್ಡು ಎಂದು ಹೇಳಿದರೆ ಯಾರೂ ಬೇಜಾರು ಮಾಡಿಕೊಳ್ಳಬಾರದು. 10 ಕೋಟಿ ರೂಪಾಯಿಗಳ ಹಣ ಅಲ್ಲಿ ಅಪವ್ಯಯವಾಗಿದೆ, ಈ ಬಗ್ಗೆ ನ್ಯಾಯಾಂಗ ತನಿಖೆಗೆ ವ್ಯವಸ್ಥೆ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಯವರು ಘೋಷಣೆ ಮಾಡಿರುವಾಗ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅವರ ಮಾತು ಊರ್ಜಿತವಾಗಬೇಕು ಇಲ್ಲದಿದ್ದರೆ ಅವರು ರಾಜೀನಾಮೆಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಷಯವೇನೆಂದರೆ ಈ ಸದನದಲ್ಲಿ ನಾವು ಸದಸ್ಯರಾಗಿ ಬಂದ ಮೇಲೆ ನಾವು ಅನೇಕಸಾರಿ ಹೇಳಿದ್ದೇವೆ, ಮಾನ್ಯಮುಖ್ಯಮಂತ್ರಿಯವರು ಈ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಅವರಿಗಿರುವ ಅನುಕಂಪ ಬಿಡಬೇಕೆಂದು ಹೇಳಿದ್ದೇವೆ. ಏಕೆಂದರೆ ಈ ದೇಶದಲ್ಲಿ ಅವರ ಹೆಸರು ವಿನಾಕಾರಣದಿಂದ ಹರಾಜು ಆಗಬಾರದು. ಅಲ್ಲಿ ನಡೆಯುತ್ತಾ ಇರತಕ್ಕಂಥ ಅವ್ಯವಸ್ಥೆಗೆ ಅವರು ರಕ್ಷಣೆಯನ್ನು ಕೊಡುತ್ತಿದ್ದಾರೆಂದು ಪ್ರತೀತಿ ಆಗಿದೆ. ಅದು ಉಂಟೋ ಇಲ್ಲವೋ, ಅವರಿಗೆ ಬಿಟ್ಟಿರುವ ವಿಷಯ. ಆದರೆ ಪ್ರತಿವರ್ಷ ಆಡಿಟ್ ಆಗಿ ಅವರ ಲೆಕ್ಕಗಳನ್ನು ತನಿಖೆಗೆ ಒಪ್ಪಿಸತಕ್ಕ ಕೆಲಸ ನಡೆಯುತ್ತಿದೆ. ಸನ್ಮಾನ್ಯ ಅಧ್ಯಕ್ಷರೇ ಅಲ್ಲಿ 68-70 ಲಕ್ಷರೂಪಾಯಿಗಳವರೆಗೆ ದುರ್ವ್ಯವಹಾರ ನಡೆದಿದೆ ಎಂದು ನನ್ನ ಗಮನಕ್ಕೆ ಬಂದಿದೆ. ನಾನು ತಮ್ಮ ಮೂಲಕ ನಮ್ರತೆಯಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಅಲ್ಲಿ ಏನೇ ದುರ್ವ್ಯವಹಾರ ಇದ್ದಾಗ್ಯೂ ಕೂಡ ಆ ಬಗ್ಗೆ ಅವರು ತನಿಖೆ ಮಾಡಿಸಿ, ಯಾರೇ ತಪ್ಪಿತಸ್ಥರು ಇರಲಿ ಅವರಿಗೆ ಶಿಕ್ಷೆಯನ್ನು ಮಾಡಿ ಈ ದಿಶೆಯಲ್ಲಿ ಪ್ರಖ್ಯಾತಿಯನ್ನು ಪಡೆಯಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಬಗ್ಗೆ ಸಂಬಂದಪಟ್ಟ ಮಂತ್ರಿಯವರೂ ಸಹ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ ಮತ್ತು ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಬೇಕೆಂದು ಈ ಸಭೆಯಲ್ಲಿ ಹೇಳಿದ್ದಾರೆ. ನಾನು ಈ ವಿಷಯವನ್ನು ಪದೇಪದೇ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಮಾನ್ಯ ಮಂತ್ರಿಯವರು ಬಾಯಿಗೆ ಬಂದ ಹಾಗೆ ಹೇಳಿದ್ದಾರೆಯೋ ಅಥವಾ ಅವರ ಮಾತು ಈಡೇರುವ ರೀತಿಯಲ್ಲಿ ಹೇಳಿದ್ದಾರೆಯೋ ಎಂಬುದು ಗೊತ್ತಿಲ್ಲ. ಅವರು ಎರಡು ದೊಡ್ಡ ಮಾತನ್ನು ಹೇಳಿದ್ದಾರೆ. ಈ ಸಿಲ್ಕ್ ಫಿಲೇಚರ್ ಬಗ್ಗೆ 10 ಕೋಟಿ ರೂಪಾಯಿಗಳ ಲುಕ್ಸಾನು ಆಗಿರುವ ಬಗ್ಗೆ ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಮತ್ತು ಈ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಅನ್ನು ಸೂಪರ್‌ಸೀಡ್ ಮಾಡಬೇಕು ಎಂದು ಈ ಎರಡು ಮಾತುಗಳನ್ನು ಮಾನ್ಯಮಂತ್ರಿಯವರು ಹೇಳಿದ್ದಾರೆ. ಈ ಮಾತುಗಳು ಈಡೇರಬೇಕೆಂದು ನಾನು ಹೇಳುತ್ತಿದ್ದೇನೆ ನಾನು ಈ ಮಾತನ್ನು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ ಅವರು ಅನೇಕ ವಿಷಯಗಳಲ್ಲಿ ಧೈರ್ಯವಾದ ನಿಲುವನ್ನು ತೆಗೆದುಕೊಂಡು ಬಹಳ ಒಳ್ಳೆಯ ಹೆಸರನ್ನು ಪಡೆದು ಕೊಂಡಿದ್ದಾರೆ, ಹಾಗೆಯೇ ಈ ಬಗ್ಗೆ ಕೂಡ ಧೈರ್ಯವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ ಸನ್ಮಾನ್ಯ ಅಧ್ಯಕ್ಷರೇ, ಜಪಾನಿನಲ್ಲಿ 40 ಬೇಸಿನ್ ಇರತಕ್ಕ ಫಿಲೇಚರ್ ವ್ಯವಸ್ಥೆ ಇದೆ ಆದರಲ್ಲಿ ಏಕಕಾಲದಲ್ಲಿ ಕೇವಲ ನಾಲ್ಕು ಜನ ಕುಳಿತು ಅದನ್ನು ರೀಲ್ ಮಾಡತಕ್ಕ ವ್ಯವಸ್ಥೆ ಇದೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಸಚಿವರನ್ನು ಪ್ರಾರ್ಥನೆ ಮಾಡುತ್ತೇನೆ,

ನಮ್ಮ ರಾಮನಗರದಲ್ಲಿ ಒಬ್ಬ ಕೈಗಾರಿಕೋದ್ಯಮಿ ಮುಂದೆ ಬಂದಿದ್ದಾನೆ, ಅವನಿಗೆ ಆ ಯೂನಿಟ್ಟನ್ನು ಕೊಡಿಸತಕ್ಕ ಒಂದು ಪ್ರಯತ್ನವನ್ನು ತಾವು ಮಾಡಬೇಕು. ಆತ ಕೈಗಾರಿಕೆಯನ್ನು ಸ್ಥಾಪಿಸಿ ಅದರಿಂದ ಅನೇಕ ಜನರಿಗೆ ಮಾರ್ಗದರ್ಶನವಾಗಲಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಈ ಫಿಲೇಚರ್‌ನಲ್ಲಿ ತುಂಬಾ ಲುಕ್ಸಾನಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಂತ್ರಿಗಳಿಗೂ ಅನುಭವ ಇದೆ. ಆ ರೀತಿ ನಷ್ಟವಾಗುವುದಕ್ಕೆ ಅನೇಕ ಕಾರಣಗಳಿವೆ. ರೇಷ್ಮೆಗೂಡು ಕೊಳ್ಳುವಾಗ ಎರಡನೇ ದರ್ಜೆ, ಮೂರನೇ ದರ್ಜೆ ಗುಮಾಸ್ತರು ಸಾವಿರಾರು ರೂಪಾಯಿ ತೆಗೆದುಕೊಂಡು ಮಾರ್ಕೆಟ್ಟಿಗೆ ಹೋಗುತ್ತಾರೆ. ಅವರು ಟೆಕ್ನಿಕಲ್ ಕ್ವಾಲಿಫೈಡ್ ಪರ್ಸನ್ಸ್ ಅಲ್ಲ. ಆ ಎರಡನೇ ದರ್ಜೆ ಗುಮಾಸ್ತ, ರೇಷ್ಮೆ ಗೂಡುಗಳನ್ನು ಕೊಂಡು ವ್ಯಾನಿಗೆ ತುಂಬುತ್ತಾನೆ. ತುಂಬುವಾಗ ಮಂದವಾಗಿ ತುಂಬಿದರೆ ಬಿಸಿ ಬಂದು ಗೂಡಿನಲ್ಲಿ ನೀರು ಬರುತ್ತದೆ. ಯೀಲ್ಡ್ ಸರಿಯಾಗಿ ಬರುವುದಿಲ್ಲ. ಆದ್ದರಿಂದ ತಾವು ಈ ರೇಷ್ಮೆ ಗೂಡನ್ನು ಸರ್ಕಾರಿ ಫಿಲೇಚರ್‌ಗೆ ಕೊಂಡುಕೊಳ್ಳುವುದಕ್ಕೆ ಒಬ್ಬ ಜಾಯಿಂಟ್ ಡೈರೆಕ್ಟರನ್ನು ಮುಖ್ಯಾಧಿಕಾರಿಯನ್ನಾಗಿ ನೇಮಿಸಿ ಅವರಿಗೆ ಈ ಜವಾಬ್ದಾರಿಯನ್ನು ಕೊಟ್ಟು ಈ ಜವಾಬ್ದಾರಿಯನ್ನು ನಿಮ್ಮ ಹೊರಬೇಕು ಎಂದು ಅದರ ಹೊಣೆಗಾರಿಕೆಯನ್ನು ಅವರ ಮೇಲೆ ಹೊರಿಸಬೇಕು. ಮತ್ತು ರೇಷ್ಮೆ ಗೂಡುಗಳನ್ನು ಸಾಗಿಸುವಾಗ ಅದನ್ನು ಡೀಸೆಲ್ ವ್ಯಾನಿನಲ್ಲಿ ಸಾಗಿಸಬೇಕು. ಪೆಟ್ರೋಲ್ ವ್ಯಾನಿನಲ್ಲಾದರೆ ಖರ್ಚು ಬಹಳ ಆಗುತ್ತದೆ. ಗೌರ್ನಮೆಂಟ್ ಫಿಲೇಚರ್‌ನಲ್ಲಿ ಸೀರಿಕಲ್ಚರ್ ಆಫೀಸರ್‌ಗಳನ್ನು ತಾಂತ್ರಿಕ ಪರಿಜ್ಞಾನ ಇಲ್ಲದೇ ಇರತಕ್ಕವರನ್ನು ಹಾಕಿದರೆ ನಷ್ಟವಾಗುತ್ತದೆ. ಆದ್ದರಿಂದ ಸೀರಿಕಲ್ಚರ್ ಆಫೀಸರುಗಳನ್ನು ನೇಮಕ ಮಾಡುವಾಗ ತಾಂತ್ರಿಕ ಪರಿಣತಿ ಇರುವವರನ್ನು ಹಾಕಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಅರಿವಿಗೆ ಬಂದಿರುವ ಹಾಗೆ ಗೌರ್ನಮೆಂಟ್ ಸಿಲ್ಕ್ ಫಿಲೇಚರ್ 7 ಸ್ಪನ್ ಸಿಲ್ಕ್ ಮಿಲ್ಸ್ ಮಿಲ್ 3, ಒಟ್ಟು 10 ಇದೆ. ನಾನು ಹೇಳುವುದೇನೆಂದರೆ ಒಟ್ಟು 10 ಜನ ಟೆಕ್ನಿಕಲ್ ಆಫೀಸರ್‌ಗಳನ್ನು ತಾವು ನೇಮಿಸಬೇಕಾದ್ದು ಯೋಗ್ಯ. ಮತ್ತು ಇನ್ನೊಂದು ವಿಷಯ ನನ್ನ ಗಮನಕ್ಕೆ ಬಂದಿದೆ, ಈ ಇಲಾಖೆಯ ಡೈರೆಕ್ಟರ್ ಅವರು ಕೆಲವು ಮಾರ್ಪಾಡುಗಳನ್ನು ಮಾಡುವ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕಳುಹಿಸಿದ್ದಾರೆ. ಅದನ್ನು ಸರ್ಕಾರ ಅಪ್ರೂವ್ ಮಾಡಿ ದಕ್ಷತೆಯಿಂದ ಚೆನ್ನಾಗಿ ಕೆಲಸ ಆಗುವಂತೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಚನ್ನಪಟ್ಟಣ ಸ್ಪನ್‌ಸಿಲ್ಕ್ ಮಿಲ್‌ನ ಬಗ್ಗೆ ಅಹವಾಲು ತಮ್ಮ ಹತ್ತಿರ ಕೂಡ ಬಂದಿವೆ. ಆ ಕಾರ್ಖಾನೆ ರಾಜಕೀಯಕ್ಕೆ ಒಳಗಾದ ಪರಿಸ್ಥಿತಿ ತಮಗೆ ಗೊತ್ತಿದೆ. ಅಲ್ಲಿನ ಕಾರ್ಮಿಕರಿಗೆ ಪೇ ಕಮಿಷನ್ ರಿಪೋರ್ಟ್ ಪ್ರಕಾರ ತಾತ್ಕಾಲಿಕ ಪರಿಹಾರ ಏನು ಕೊಡಬೇಕೋ ಅದನ್ನು ಕೊಟ್ಟಿಲ್ಲ. ಆದ್ದರಿಂದ ಅದನ್ನು ತಾವು ಜಾಗ್ರತೆ ಮಂಜೂರು ಮಾಡಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದೊಂದು ಫ್ಯಾಕ್ಟರಿಯನ್ನು ಸರ್ಕಾರ ಅಂಡರ್‌ಟೇಕಿಂಗ್ ತೆಗೆದುಕೊಳ್ಳಬೇಕು. ಮತ್ತು ಇಷ್ಟು ಪರ್ಸೆಂಟ್ ಉತ್ಪಾದನೆ ಬಂದರೆ ಇಷ್ಟು ಡಿ. ಎ. ಕೊಡಬೇಕು ಎಂದು ತಾವು ಏನು ನಿಯಮ ಇಟ್ಟುಕೊಂಡಿದ್ದೀರಿ ಅದನ್ನು ಕಾರ್ಮಿಕರ ಉದಾರತೆ ದೃಷ್ಟಿಯಿಂದ ತಡೆಹಿಡಿದು ಬೇರೆಕಡೆಗಳಲ್ಲಿ ಕಡ್ಡಾಯವಾಗಿ ಎಲ್ಲ ಕಾರ್ಮಿಕರಿಗೆ ಕೊಟ್ಟ ಹಾಗೆ ಈ ಫಿಲೇಚರ್‌ಗೂ ಸಹಾಯ ಕೊಡಬೇಕೆಂದು ಕೇಳಿಕೊಂಡು ಕೊನೆಯದಾಗಿ ಇನ್ನೊಂದು ಮಾತನ್ನು ಹೇಳುತ್ತೇನೆ, ನಾನು ಮೊದಲೇ ಹೇಳಿದಂತೆ 40 ಬೇಸಿನ್ ಇಟ್ಟುಕೊಂಡು ನಾಲ್ಕು ಜನ ಕುಳಿತು ರೀಲ್ ಮಾಡತಕ್ಕ ವ್ಯವಸ್ಥೆ ಜಪಾನಿನಲ್ಲಿ ಏನಿದೆ ಅದೇರೀತಿ ಮಾಡಲು ಒಬ್ಬ ಕೈಗಾರಿಕೋದ್ಯಮಿ ರಾಮನಗರದಲ್ಲಿ ಬಂದಿರುವುದರಿಂದ ಅವನಿಗೆ ಪರ್ಮಿಟ್ ಕೊಟ್ಟು ಪ್ರೋತ್ಸಾಹ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಬಂಡವಾಳ ಎಷ್ಟು?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನನಗೆ ಅದು ಸರಿಯಾಗಿ ಗೊತ್ತಿಲ್ಲ. ಒಂದು ಯೂನಿಟ್ಟಿಗೆ ಒಂದು ಲಕ್ಷ ಚಿಲ್ಲರೆ ರೂಪಾಯಿ ಆಗುತ್ತದೆಂದು ಕೇಳಿದ್ದೇನೆ. ನನ್ನ ಹತ್ತಿರ ಸ್ಪಷ್ಟವಾದ ಮಾಹಿತಿ ಇಲ್ಲ. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ ಈ ಇಲಾಖೆಯಲ್ಲಿರುವ ಕೆಲವು ದಕ್ಷ ಅಧಿಕಾರಿಗಳನ್ನು ಪರದೇಶಕ್ಕೂ ಕಳುಹಿಸಿ ಅಲ್ಲಿಂದ ಅನುಭವಪಡೆದುಕೊಂಡು ಬರಬೇಕು ಮತ್ತು ಜಪಾನಿನಲ್ಲಿರುವ ಅಧಿಕಾರಿಗಳನ್ನು ಇಲ್ಲಿ ಕರೆಸಬೇಕು, ಈ ರೀತಿ ಸಂಮಯ ಮಾಡಿ ಒಳ್ಳೆಯ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಟ್ಟಿದ್ದರೆ ಈ ಇಲಾಖೆ ಬೆಳೆಯುವುದ

ಕ್ಕಾಗುವುದಿಲ್ಲ. ಈ ಇಲಾಖೆ ಬೆಳೆಯದೇ ಹೋದರೆ ಈ ನಾಡನ್ನು ಏನು ಚಿನ್ನದ ಬೀಡು, ಗಂಧದ ಬೀಡು, ರೇಷ್ಮೆಯ ನಾಡು ಎಂದು ಹೇಳುತ್ತೇವೆ ಆ ಕೀರ್ತಿಗೆ ಮಾನ್ಯ ದೇವರಾಜಅರಸರು ಕಳಂಕ ತಂದರು ಎಂಬ ಅಪಖ್ಯಾತಿ ತಮ್ಮ ತಲೆಯಮೇಲೆ ಹೊತ್ತುಕೊಳ್ಳಬೇಕಾಗುತ್ತದೆ, ಆ ರೀತಿ ಆಗುವುದಕ್ಕ ಅವಕಾಶ ಕೊಡಬೇಡಿ ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಹೇಳಿ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಗಂಧದ ಮರವನ್ನು ಪದೇಪದೇ ರಿಯಾಯಿತಿ ದರದಲ್ಲಿ ಕೊಡುತ್ತಿದ್ದಾರೆ. ಪ್ರತಿ ವರ್ಷ ಅದನ್ನು ತೆಗೆದುಕೊಳ್ಳುವುದಕ್ಕೆ ಲೈಸೆನ್ಸ್ ರಿನ್ಯೂ ಮಾಡಬೇಕು. ಕಳೆದ ವರ್ಷ ಮಾಡಿಸಿದ ಲೈಸೆನ್ಸ್ ಮಾರ್ಚಿ ತಿಂಗಳಿಗೆ ಮುಗಿಯಿತು. ಈಗ ಜುಲೈ ಬಂತು. ಇವರು ಪರ್ಮಿಟ್ ಕೊಡುವುದರೊಳಗೆ 6 ತಿಂಗಳಾಗುತ್ತದೆ. ಅದಕ್ಕೋಸ್ಕರ ಗುಡಿಗಾರರಿಗೆ ರಿಯಾಯಿತಿ ದರದಲ್ಲಿ ಗಂಧದಮರವನ್ನು ಕೊಡುವುದಕ್ಕೆ ಶಾಶ್ವತವಾದ ಒಂದು ಆಜ್ಞೆ ಹೊರಡಿಸಿ. ವಾಯಿದೆ ಯಾತಕ್ಕೆ ನಿಗದಿ ಮಾಡುತ್ತೀರಿ?

ಶ್ರೀ ವೀರಪ್ಪ ಮೊಯಿಲಿ (ಸಣ್ಣ ಕೈಗಾರಿಕೆ ಶಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ಈ ಸಣ್ಣ ಕೈಗಾರಿಕೆಗಳ ವಿಚಾರವಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿ ಕೆಲವು ಸಮಸ್ಯೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ನಾನು ನಿರೀಕ್ಷಿಸಿದ ಮಟ್ಟಿಗೆ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಆದಂಥ ಪ್ರಗತಿಯ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಹೆಚ್ಚು ಗಮನ ಕೊಟ್ಟಂತೆ ಕಾಣುವುದಿಲ್ಲ. ಪ್ರಥಮವಾಗಿ ದುರ್ಬಲವರ್ಗದವರಿಗೆ ಅನ್ಯಾಯವಾಗಿರತಕ್ಕ ಸಂದರ್ಭದಲ್ಲಿ ಅನೇಕ ಸಾಧನೆಗಳನ್ನು ನಮ್ಮ ಸರ್ಕಾರ ಕಳೆದ ಸಾಲಿನಲ್ಲಿ ಮಾಡಿದೆ. ಈ ದುರ್ಬಲ ವರ್ಗದವರು, ನೇಕಾರರು, ಗುಡಿಗಾರರು ಮತ್ತು ಇನ್ನಿತರ ಕುಶಲಕರ್ಮಿಗಳು ನಮ್ಮ ಕರ್ನಾಟಕದಲ್ಲಿ ಎಷ್ಟು ಜನ ಇದ್ದಾರೆ, ಅವರ ಅವಶ್ಯಕತೆಗಳೇನು ಎಂಬ ಬಗ್ಗೆ ಒಂದು ಸಮೀಕ್ಷೆ ಕೂಡ ಮೊದಲು ನಮ್ಮ ಸರ್ಕಾರದಲ್ಲಿರಲಿಲ್ಲ. ಕಳೆದ ವರ್ಷ ಆ ಬಗ್ಗೆ ಒಂದು ಶಾಸ್ತ್ರೀಯವಾದಂಥ ಸರ್ವೆಯನ್ನು ನಾವು ಮಾಡಿದ್ದೇವೆ ದುರ್ಬಲವರ್ಗದವರು ಮತ್ತು ಕುಶಲಕರ್ಮಿಗಳು ಸುಮಾರು 50 ಸಾವಿರ ಮಂದಿ ನಮ್ಮ ಕರ್ನಾಟಕದಲ್ಲಿದ್ದಾರೆ. ಅವರ ಕ್ರೆಡಿಟ್ ನೀಡ್ಸ್ 50 ಕೋಟಿ ರೂಪಾಯಿಗಳು. ಮತ್ತು ಅವರು ತಯಾರು ಮಾಡತಕ್ಕ ವಸ್ತುಗಳು ಮತ್ತು ಸಾಮಗ್ರಿಗಳ ಒಟ್ಟು ಮೊತ್ತ 2.6 ಕೋಟಿ ರೂಪಾಯಿಗಳು ಆದ್ದರಿಂದ ಪ್ರತಿಯೊಬ್ಬ ಕುಶಲಕರ್ಮಿಗೆ 900 ರೂಪಾಯಿಗಳ ಆರ್ಥಿಕ ಸಹಾಯ ನಾವು ಒದಗಿಸಬೇಕಾದಂಥ ಅವಶ್ಯಕತೆ ಇದೆ ಎಂದು ಹೇಳಿ ನಾವು ಆ ಬಗ್ಗೆ ಸಂಪೂರ್ಣವಾದ ಸಮೀಕ್ಷೆ ನಡೆಸಿ ತನ್ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳೊಡನೆ ಕೂಡ ಹೆಚ್ಚಿನ ಮಾತುಕತೆಯನ್ನು ನಡೆಸಿ ಕುಶಲಕರ್ಮಿಗಳು ನಾಲ್ಕು ಪರ್ಸೆಂಟ್ ಬಡ್ಡಿಯಲ್ಲಿ ತಮ್ಮ ಸಾಲವನ್ನು ಪಡೆಯುವ ರೀತಿಯಲ್ಲಿ ನಮ್ಮ ಕೈಗಾರಿಕೆ ಇಲಾಖೆ ಮುಂದಾಗಿ ನಿಂತು ಕೆಲಸ ಮಾಡಿದೆ. ಈ ಒಂದು ದಿಸೆಯಲ್ಲಿ ನೇಕಾರರ ಅಭಿವೃದ್ಧಿ ವಿಚಾರದಲ್ಲಿ ಹೇಳುವುದಾದರೆ ನೇಕಾರರ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಜಾರಿ ಮಾಡಿರುವುದರಲ್ಲಿ ನಮ್ಮ ಕರ್ನಾಟಕಕ್ಕೆ ಪ್ರಥಮ ಸ್ಥಾನ ದೊರೆತಿದೆ. ಮುಖ್ಯವಾಗಿ ಕೇಂದ್ರ ಸರ್ಕಾರದ ಸಹಾಯದೊಂದಿಗೆ ರಬಕವಿ ಮತ್ತು ಬನಹಟ್ಟಿ ಪ್ರದೇಶದಲ್ಲಿ 185 ಲಕ್ಷ ರೂಪಾಯಿಯ ಒಂದು ಯೋಜನೆಯನ್ನು ತಯಾರು ಮಾಡಿ 10 ಸಾವಿರ ಕೈಮಗ್ಗಗಳನ್ನು ಐದು ವರ್ಷದ ಅವಧಿಯಲ್ಲಿ ಮಾಡಿ ಅವುಗಳಿಗೆ ಬೇಕಾದಂಥ ಸಹಾಯವನ್ನು ಕಡಿಮೆ ಬಡ್ಡಿಯಲ್ಲಿ ಬ್ಯಾಂಕ್ ಮೂಲಕ ಸಾಲದ ಸಹಾಯವನ್ನು ದೊರಕಿಸುವುದಲ್ಲದೆ ಅವರಿಗೆ ಅವಶ್ಯವಿರುವಂಥ ಕಚ್ಚಾ ಸಾಮಗ್ರಿಗಳನ್ನು ಮತ್ತು ಅವರ ಕೈಮಗ್ಗಗಳಲ್ಲಿ ಉತ್ಪಾದನೆ ಮಾಡುವ ಮಾಲುಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡುವುದರ ಬಗ್ಗೆ ನಾವು ನಿರ್ದಿಷ್ಟವಾದ ಯೋಜನೆಯನ್ನು ಆ ಪ್ರದೇಶದಲ್ಲಿ ಮಾಡಿದ್ದೇವೆ.

ಈ ಒಂದು ವರ್ಷದಲ್ಲಿ ಸುಮಾರು ರಬಕವಿ, ಬನಹಟ್ಟಿ ಹಿಲ್‌ಕಲ್ ಈ ಒಂದು ಯೋಜನೆಯನ್ನು ನಮ್ಮ ಹ್ಯಾಂಡ್‌ಲೂಮ್ ಕಾರ್ಪೋರೇಷನ್ ಮುಖಾಂತರ ಜಾರಿಮಾಡಿ ಪ್ರಥಮವಾಗಿ ಕೇಂದ್ರ ಸರ್ಕಾರದ ಸಹಾಯ ದೊರಕದೆ ಇದ್ದರೂ ಆ ಪ್ರದೇಶದಲ್ಲಿ ಇರತಕ್ಕ ನೇಕಾರರ ಕಷ್ಟವನ್ನು ಪರಿಶೀಲನೆ ಮಾಡಿ ಅಲ್ಲಿ ಕೂಡ ಒಂದು ಯೋಜನೆಯನ್ನು ವಿಸ್ತರಿಸಿಕೊಂಡು ಕೇಂದ್ರಸರ್ಕಾರದೊಂದಿಗೆ ವ್ಯವಹರಿಸಿ ಹಿಲ್‌ಕಲ್ ಯೋಜನೆಗೆ ಕೇಂದ್ರ ಸರ್ಕಾರದ ಸಹಾಯವನ್ನು ಪಡೆದಿದ್ದೇವೆ ಎಂದು ಹೇಳ

ಲಕ್ಕೆ ಸಂತೋಷಪಡುತ್ತೇನೆ. ಇಷ್ಟು ಮಾತ್ರವಲ್ಲದೆ ಕರ್ನಾಟಕ ಸರ್ಕಾರದ ಮತ್ತು ಹ್ಯಾಂಡ್ ಲೂಮ್‌ವತಿಯಿಂದ ಇನ್ನು ಕೆಲವು ಯೋಜನೆಗಳನ್ನು ಪ್ರಮುಖವಾಗಿ ರಾಮದುರ್ಗ, ರಾಣಿ ಬೆನ್ನೂರು, ಗುಲ್ಬರ್ಗಾ ಮತ್ತು ಬೀದರ್ ಪ್ರದೇಶಗಳಲ್ಲಿ ಈ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತಂದಿದ್ದೇವೆಂದು ಹೇಳಲಿಕ್ಕೆ ಬಯಸುತ್ತೇನೆ. ಅದರಿಂದಾಗಿ ಬೇರೆ ಒಂದು 5,500 ಕೈಮಗ್ಗ ಗಳನ್ನು ಯೋಜನೆಗಳಲ್ಲಿ ಅಳವಡಿಸಿದ್ದೇವೆ. ಸುಮಾರು 15 ಸಾವಿರ ನೇಕಾರರಿಗೆ ಪ್ರತ್ಯಕ್ಷವಾಗಿ ಸಹಾಯ ದೊರಕಿಸುವುದು ಮಾತ್ರವೇ ಅಲ್ಲದೆ ಅಪ್ರತ್ಯಕ್ಷವಾಗಿ ಆ ಪ್ರದೇಶದಲ್ಲಿ ತಕ್ಕ ಅನೇಕ ಮಂದಿಗೆ ಸತತವಾಗಿ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೆ ಸಹಕಾರಿಯಾಗಿದೆ. ಇನ್ನು 7 ಪ್ರದೇಶಗಳಲ್ಲಿ ಈ ಯೋಜನೆಯನ್ನು 8 ಕೋಟಿ ರೂಪಾಯಿ ಖರ್ಚು ಮಾಡಿ ಈ 5 ವರ್ಷಗಳಲ್ಲಿ ಸುಮಾರು 80 ಕೋಟಿ ರೂಪಾಯಿ ಯೋಜನೆಗಳನ್ನು ಸಂಪೂರ್ಣವಾಗಿ ಜಾರಿ ಮಾಡುವಂತೆ ತೆರೆಯಲಿದ್ದೇವೆ. ಈ 5 ವರ್ಷ ದಲ್ಲಿ 35 ಸಾವಿರ ಕೈಮಗ್ಗಗಳನ್ನು ಅಳವಡಿಸಿಕೊಂಡು ಸುಮಾರು 1,500 ಮಂದಿ ನೇಕಾರರಿಗೆ ಉದ್ಯೋಗವನ್ನು ಸಂಪೂರ್ಣವಾಗಿ ಒದಗಿಸಬೇಕೆಂದು ಯೋಜನೆಯನ್ನು ಮಾಡಿಕೊಂಡಿದ್ದೇವೆ. ಇಷ್ಟು ಮಾತ್ರವೇ ಅಲ್ಲದೆ ಸಿಲ್ಕ್ ಎಕ್ಸ್‌ಪರ್ಟ್ ಓರಿಯೆಂಟೆಡ್ ಪೈಲೆಟ್ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರದ ನೇತೃತ್ವದಿಂದ ಬೆಂಗಳೂರು, ಕಲ್ಲೂರು, ಆನೇಕಲ್ ಮತ್ತು ಮೊಳಕಾಲ್ಮೂರುಗಳಲ್ಲಿ ಈ ಯೋಜನೆಯಿಂದ ಸಹಾಯ ಮಾಡಿದ್ದೇವೆ. ಸುಮಾರು ಈ ಯೋಜನೆಗಳಿಗೆ ಒಂದು ಕೋಟಿ 45 ಲಕ್ಷ ರೂಪಾಯಿ ಈ ಐದು ವರ್ಷಗಳಲ್ಲಿ ಖರ್ಚು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ನಾವು ಕೇಳಿದರೆ ಅವರು ಕೇವಲ 45 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇದರಿಂದ ಬರೀ 5 ನೂರು ಸಿಲ್ಕ್ ಕೈಮಗ್ಗಗಳಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಾಗಿದೆ. ಇನ್ನು ಒಂದು ಯಶಸ್ವಿ ಯೋಜನೆ ಎಂದರೆ 1 ಕೋಟಿ 45 ಲಕ್ಷ ರೂಪಾಯಿ ಸಿಲ್ಕ್ ಎಕ್ಸ್‌ಪರ್ಟ್ ಯೋಜನೆಯನ್ನು ಮುಂದೆ ಇಟ್ಟಿದ್ದೇವೆ. ಇದಕ್ಕೆ ಒಂದು ಕೋಟಿ ರೂಪಾಯಿಯನ್ನು ಕೊಡಬೇಕೆಂದು ವಿಚಾರವನ್ನು ಮುಂದಿಟ್ಟಿದ್ದೇವೆ. ಇದು ಕೇಂದ್ರ ಸರ್ಕಾರದಿಂದ ಬಂದರೆ ಸುಮಾರು 2 500 ಕೈಮಗ್ಗಗಳಿಗೆ ನಮ್ಮ ಯೋಜನೆಯನ್ನು ವಿಸ್ತರಿಸಲಿಕ್ಕೆ ಸಾಧ್ಯವಾಗುತ್ತದೆ. ಇದರಿಂದ 7 500 ಮಂದಿಗೆ ಪ್ರತ್ಯಕ್ಷವಾಗಿ ಕೆಲಸ ಸತತವಾಗಿ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇನ್ನು 1977-78 ವರ್ಷದಲ್ಲಿ ನಾವು 5 ,00 ಕಾಟನ್ ಮತ್ತು ಸಿಲ್ಕ್ ಕೈಮಗ್ಗಗಳನ್ನು ತೆಗೆದುಕೊಂಡು ನಾವು ಈ ಯೋಜನೆಯನ್ನು 1977-78ರಲ್ಲಿ ಕೈಗೊಳ್ಳಲಿಕ್ಕೆ ಇದ್ದೇವೆ. ಕಳೆದ ವರ್ಷ ಕೈಮಗ್ಗದವರಿಗೆ ಬಹಳ ಪ್ರಮುಖ ವಾಗಿ ಒಂದು ವ್ಯವಸ್ಥೆಯನ್ನು ಅಂದರೆ ಪ್ರಾಮುಖ್ಯವಾದ ಮಾರುಕಟ್ಟೆ ಪ್ರಾರಂಭಿಸಿದ್ದೇವೆ. ಇಲಕಲ್ ಮತ್ತು ಬನಹಟ್ಟಿ ಇವುಗಳು ಮಹಾರಾಷ್ಟ್ರ ಪ್ರದೇಶಕ್ಕೆ ಹತ್ತಿರವಿರುವುದರಿಂದ ಸುಮಾರು 7-8 ತಿಂಗಳು ಅವಧಿಯಲ್ಲಿ ಮಾಸ್ಟರ್ ವೀವರ್ಸ್‌ರವರ ಜೊತೆಯಲ್ಲಿ ಸತತವಾದ ಹೋರಾಟವನ್ನು ನಡೆಸಿ ಮಾರುಕಟ್ಟೆಯಲ್ಲಿ ಒಂದು ವಿಧ ಅಪಪ್ರಚಾರ ನಡೆದಿತ್ತೋ ಅದನ್ನೆಲ್ಲಾ ಬಗೆಹರಿಸಿಕೊಂಡು ಅಲ್ಲಿ ನಮ್ಮ ಮಾಲುಗಳಿಗೆ ಒಳ್ಳೆಯ ಮಾರುಕಟ್ಟೆಯನ್ನು ಪಡೆಯಲು ಬಹಳ ಕಷ್ಟವಾಯಿತು ಮಹಾರಾಷ್ಟ್ರ ಪ್ರದೇಶಗಳಲ್ಲಿ ಹ್ಯಾಂಡ್‌ಲೂಮ್ ಸೀರೆಗಳಿಗೆ ಮತ್ತು ಕಣಗಳಿಗೆ ಬಹಳ ಯೋಗ್ಯ ಮಟ್ಟದ ಪ್ರಶಸ್ತಿಯನ್ನು ಪಡೆದಿದ್ದೇವೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಅಷ್ಟೇ ಅಲ್ಲದೆ ನಮ್ಮ ಮಾರುಕಟ್ಟೆಗಳಲ್ಲಿ 10-15 ದಿವಸಗಳಲ್ಲಿ ಒಂದು ಸೀರೆ ಇಲ್ಲದೆ ಸಂಪೂರ್ಣವಾಗಿ ಮಾರಾಟವಾಗ ಲಿಕ್ಕೆ ವ್ಯವಸ್ಥೆಯಾಯಿತು. ಮಾರುಕಟ್ಟೆ ವ್ಯವಸ್ಥೆ ಕೂಡ ಚೆನ್ನಾಗಿದೆ. ಬಹುಶಃ ಖಾನಗಿಯವ ರಿಂದ ಈಗ ಪದಾರ್ಥಗಳು ಮಾರಾಟ ಆಗಲಿಕ್ಕೆ ಸಾಧ್ಯವಿಲ್ಲ. ಇನ್ನು ಹ್ಯಾಂಡ್‌ಲೂಮ್ ಕಾರ್ಪೊ ರೇಷನ್ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ 21 ಸೇಲ್ಸ್ ಔಟ್‌ಲೆಟ್‌ಗಳನ್ನು ತೆರೆದಿದ್ದೇವೆ. ಇಷ್ಟು ಮಾತ್ರವೇ ಅಲ್ಲದೆ ನಮ್ಮ ಮಾಲುಗಳಿಗೆ ಆಲ್ ಇಂಡಿಯಾ ಮಟ್ಟದಲ್ಲಿ ಒಳ್ಳೆಯ ಹೆಸರು ಇರು ವುದರಿಂದ ಇವಕ್ಕೆ ಹೆಚ್ಚಿನ ಕೀರ್ತಿ ಇದೆ. ಈ ಒಂದು ವರ್ಷದಲ್ಲಿ ಅಂದರೆ 31-3-1977 ವರೆಗೆ 51 ಲಕ್ಷ 38 ಸಾವಿರ ರೂಪಾಯಿ ವ್ಯಾಪಾರ ನಮ್ಮ ಮಳಿಗೆಗಳಲ್ಲಿ ಮಾಡಿದ್ದೇವೆ.

ಇನ್ನು ಸಹಕಾರಿ ಕ್ಷೇತ್ರದಲ್ಲಿ ಕೂಡ ಹ್ಯಾಂಡ್ ಲೂಮ್ ಕೈಮಗ್ಗಗಳು ಅಭಿವೃದ್ಧಿಯನ್ನು ಬೆಳೆಸಿ ಕೊಂಡು ಬರಬೇಕೆನ್ನುವ ಇಚ್ಛೆಯನ್ನು ಪಟ್ಟು ನಮ್ಮಲ್ಲಿ ಕಾಟನ್ ಅಪೆಕ್ಸ್ ಸಿಲ್ಕ್ ಅಪೆಕ್ಸ್ ಸೊಸೈಟಿ ಮತ್ತು ಉಲ್ಲನ್ ಅಪೆಕ್ಸ್ ಸೊಸೈಟಿಗಳನ್ನು ಹೊಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹ್ಯಾಂಡ್‌ಲೂಂ ಅಪೆಕ್ಸ್ ಸೊಸೈಟಿ ಏನಾಗಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾಟನ್ ಅಪೆಕ್ಸ್ ಸೊಸೈಟಿಗೆ ಈ ಪಾಲನ್ನು ಹೆಚ್ಚಿಸ ಬೇಕೆಂದು ಹೇಳಿ ನಾವು ಸುಮಾರು 20 ಲಕ್ಷ ರೂಪಾಯಿಗಳನ್ನು ಈ ವರ್ಷ ಅವರಿಗೆ ಒದಗಿಸುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಇಷ್ಟು ಮಾತ್ರವಲ್ಲದೆ ಈ ವರ್ಷದಲ್ಲಿ ಕೇಂದ್ರ ಸರ್ಕಾರದವರು ಕೂಡ ಸುಮಾರು 15 ಲಕ್ಷ ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಈ ವರ್ಷದಲ್ಲಿ 3 ಕಾಟನ್ ವೀವಿಂಗ್ ಸೆಂಟರ್‌ಗಳನ್ನು ಪ್ರಾರಂಭಮಾಡಿದ್ದೇವೆ, ನೇಕಾರರಿಗೆ ವಸತಿಯ ವ್ಯವಸ್ಥೆ ಇಲ್ಲದೆ ಬಹಳ ಕಷ್ಟದಲ್ಲಿದ್ದರು. ಆದುದರಿಂದ ನಮ್ಮ ಕರ್ನಾಟಕ ಸರ್ಕಾರದವರು ಈ ನೇಕಾರರಿಗಾಗಿ ಮಾಪಿನ ಇಪ್ಪರಗಿ. ಉಡುಪಿ ಮತ್ತು ತಲ್ಲೂಕಿನ ಪ್ರದೇಶದಲ್ಲಿ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆ. ಉಡುಪಿಯಲ್ಲಿ ವಸತಿ ವ್ಯವಸ್ಥೆ ಪೂರ್ತಿಯಾಗಿಲ್ಲ ಈಗಾಗಲೇ ನೇಕಾರರು ಆ ಪ್ರದೇಶಕ್ಕೆ ಹೋಗಿ ವಾಸ ಮಾಡುತ್ತಿದ್ದಾರೆ. ಅದೇ ಪ್ರದೇಶದಲ್ಲಿ ಕೆಲಸ ಕೂಡ ಪ್ರಾರಂಭ ಮಾಡಿದ್ದಾರೆ. ಅವರಿಗೆ ಮಾರು ಕಟ್ಟೆ ಆದಷ್ಟು ಜಾಗ್ರತೆ ಸಿಗಬೇಕು ಎಂದು ಹೇಳಿ ಶೇಕಡ 20 ರಷ್ಟು ರಿಬೇಟನ್ನು ಕೊಟ್ಟಿದ್ದೇವೆ. ಇದರಿಂದಾಗಿ 4 ಕೋಟಿ ರೂಪಾಯಿಗಳ ಕೈ ಮಗ್ಗದ ವಸ್ತ್ರಗಳು ಮಾರಾಟವಾಗಿದೆ. ಇದರಿಂದಾಗಿ ನಮ್ಮ ಕರ್ನಾಟಕದಲ್ಲಿ 43 ಲಕ್ಷ ರೂಪಾಯಿಗಳ ರಿಬೇಟನ್ನು ಪಡೆದುಕೊಂಡು ವ್ಯಾಪಾರ ಮಾಡಿದ್ದಾರೆ. ಆ ಪೈಕಿ 50 ಪರ್ಸೆಂಟ್ ನಮ್ಮ ಸರ್ಕಾರದವರು 50 ಪರ್ಸೆಂಟ್ ಕೇಂದ್ರ ಸರ್ಕಾರದವರು ಕೊಡಲಿಕ್ಕೆ ವ್ಯವಸ್ಥೆಯಾಗಿದೆ. ಇನ್ನು ಹ್ಯಾಂಡಿ ಕ್ರಾಫ್ಟ್ಸ್ ಕಾರ್ಪೊರೇಷನ್ ವಿಚಾರದಲ್ಲಿ ಹೇಳು ವುದಾದರೆ ಬಹಳ ಸಂತೋಷದ......

4-00 P. M.

ಶ್ರೀ ಕಾಗೋಡು ತಿಮ್ಮಪ್ಪ.—ಗೊತ್ತಿಲ್ಲದೇ ಇದ್ದವರನ್ನು ಬೋರ್ಡಿಗೆ ತಂದು ಹಾಕಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸುಮಾರು ಎರಡು ವರ್ಷದ ಅವಧಿಯಲ್ಲಿ 10 ಲಕ್ಷ ರೂಪಾಯಿ ಗಳ ವಹಿವಾಟು ಈ ಹ್ಯಾಂಡಿ ಕ್ರಾಫ್ಟ್ಸ್ ಕಾರ್ಪೊರೇಷನ್ನಿಂದ ಜಾಸ್ತಿಯಾಗಿದೆ. 1976-77ರಲ್ಲಿ 35 ಲಕ್ಷ ರೂಪಾಯಿಗಳ ವ್ಯವಹಾರ ಮಾಡಿದ್ದೇವೆ. 1974-75 ರ ಸಾಲಿಗಿಂತ ಜಾಸ್ತಿ ವ್ಯವಹಾರ ಮಾಡಿದ್ದೇವೆ. ಅದೇ ಹೈಯೆಸ್ಟ್. ಇಷ್ಟು ವ್ಯವಹಾರವಾಗಿರುವುದು ಈ ಕಾರ್ಪೊರೇಷನ್ನಿನ ಇತಿಹಾಸದಲ್ಲಿ ಅತಿ ಹೆಚ್ಚಿನದು ಎಂದು ಹೇಳಲಿಕ್ಕೆ ಬಯಸುತ್ತೇನೆ. ಇಷ್ಟು ಮಾತ್ರವಲ್ಲದೆ ಕಳೆದ ವರ್ಷ ಸುಮಾರು 1 17 ಲಕ್ಷ ಲಾಭ ಮಾಡಿಕೊಂಡಿದ್ದೇವೆ. ಒಂದು ವಿಚಾರ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ್ದು ಏನೆಂದರೆ, ಹ್ಯಾಂಡಿ ಕ್ರಾಫ್ಟ್ ಕಾರ್ಪೊರೇಷನ್ ಬರೀ ಲಾಭ ಮಾಡಲಿಕ್ಕೆ ಹುಟ್ಟಿದಂಥ ಸಂಸ್ಥೆಯಲ್ಲ. ಇದರ ಮುಖ್ಯವಾದಂಥ ಕರ್ತವ್ಯವೇನೆಂದರೆ ಯಾರು ಕುಶಲ ಕರ್ಮಿಗಳು ಇದ್ದಾರೆ ಅವರಿಗೆ ಹೆಚ್ಚಿನ ಬೆಂಬಲ ಕೊಡಲಿಕ್ಕೆ ಮತ್ತು ಅವರ ಜೀವನ ಸುಗಮವಾಗಿರುವಂತೆ ಮಾಡುವಂಥಾ ಸಂಸ್ಥೆ. ಹಾಗೂ ಕುಶಲ ಕರ್ಮಿಗಳಿಗೆ ಕಚ್ಚಾ ಸಾಮಾನು ಗಳನ್ನು ಕೊಡುತ್ತಿದ್ದೇವೆ. ಈ ಒಂದು ವ್ಯವಸ್ಥೆಯನ್ನು ಸುಮಾರು 600 ಮಂದಿ ಕುಶಲ ಕರ್ಮಿ ಗಳು ಪಡೆಯುತ್ತಿದ್ದಾರೆ. ಮುಖ್ಯವಾಗಿ ಯಾರು ನಮ್ಮ ಕರ್ನಾಟಕ ಕುಶಲಕರ್ಮಿಗಳು ಇದ್ದಾರೆ. ಅವರು ಬಹಳ ಪ್ರಸಿದ್ಧ ಕುಶಲ ಕರ್ಮಿಗಳು ಆಗಿದ್ದಾರೆ. ಅವರು ಕರ್ನಾಟಕ ಬೇರೆ ಬೇರೆ ಪ್ರದೇಶ ಗಳಲ್ಲಿ ಇದ್ದಾರೆ. ನಾವು ಅವರಿಗೆ ಸಹಾಯ ಮಾಡಬೇಕಾಗಿದ್ದರೆ ಬರೀ ಹಣದ ಸಹಾಯ ಕೊಟ್ಟರೆ ಸಾಲದು ಅಥವಾ ಬರೀ ಕಚ್ಚಾ ಸಾಮಾನುಗಳನ್ನು ಕೊಟ್ಟರೆ ಸಾಲದು ಅವರಿಗೆ ಮಾರುಕಟ್ಟೆಯ ವ್ಯವಸ್ಥೆಯನ್ನು ಮಾಡತಕ್ಕಂಥ ಅವಶ್ಯಕತೆ ಇದೆ. ಆದುದರಿಂದಲೇ ನಾವು ಕ್ರಾಫ್ಟ್ ಕಾಂಪ್ಲೆಕ್ಸ್ ಎಂದು, ಕುಶಲ ಕರ್ಮಿಗಳ ಕೇಂದ್ರವೆಂದು ವ್ಯವಸ್ಥೆ ಮಾಡಿ ಅವರಿಗೆ ಸರಿಯಾದ ಸಹಾಯ ಕೊಡ ಬೇಕೆಂದು ಹೇಳಿ ಪ್ರಾರಂಭ ಮಾಡಿದ್ದೇವೆ. ಕಳೆದ ವರ್ಷ ಬೀದರ್ ವೈರ್ ಕಾಂಪ್ಲೆಕ್ಸ್ ಪ್ರಾರಂಭ ಮಾಡಿದ್ದೇವೆ. ಬಹಳ ಸಂತೋಷದಿಂದ ಹೇಳುವುದಾದರೆ ಇದನ್ನು 17-5-1976ರಲ್ಲಿ ಪ್ರಾರಂಭ ಮಾಡಿದ ಬಿದರ್ ಕಾಂಪ್ಲೆಕ್ಸ್‌ನ ಪ್ರೊಡಕ್ಷನ್ ಮೇ 1977 ರವರೆಗೆ 1 ಲಕ್ಷದ 36 ಸಾವಿರದ 700 ರೂಪಾಯಿ ಮತ್ತು ಸುಮಾರು 1 ಲಕ್ಷದ 3 ಸಾವಿರ ರೂಪಾಯಿಗಳ ಉಚಿತ ಕಚ್ಚಾ ಸಾಮಾನು ಗಳನ್ನು ನಾವು ಶೇಕಡ 4ರ ಬಡ್ಡಿಯ ರೂಪದಲ್ಲಿ ಅವರಿಗೆ ಕೊಟ್ಟಿದ್ದೇವೆ. ಈ ಬಿದರ್ ವೈರ್ ಯಾವ ಒಂದು ಕುಶಲ ಕಲೆ ಇದೆ ಅದು 400, 500 ವರ್ಷಗಳ ಕರೆ ಇದು ಹುಟ್ಟಿದ್ದು ಸಹ ಇಲ್ಲ. ಆದರೆ ಅನೇಕ ಕುಶಲ ಕಲೆಗಾರರು ಕಾರಣಾಂತರಗಳಿಂದ ಹೈದರಾಬಾದಿಗೆ ಹೋಗಿದ್ದಾರೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕೆಲವು ಸಲ ಡೆಲ್ಲಿಯಲ್ಲಿ ಮಾತನಾಡುವಾಗ ಈ ಬಿದರ ವೈರ್ ಕಲೆಯನ್ನು ಹೈದರಾಬಾದ್ ಕಲೆ ಎಂದು ಹೇಳುತ್ತಾರೆ ಆದರೆ ಇದು ಮಾಲತ; ನಮ್ಮ ಕರ್ನಾಟಕ ಕಲೆ ಇವತ್ತು ಒಂದು ಸಂತೋಷ ವೇನೆಂದರೆ ಯಾವ ಒಂದು ಕುಶಲ ಕಲೆಗಾರರು ಹೈದರಾಬಾದಿಗೆ ಹೋಗಿದ್ದರೋ ಅವರೂ ಕೂಡ ಪುನಃ ವಾಪಸ್ಸು ಬಂದು ನಮ್ಮ ಕಾರ್ಯಕ್ರಮಗಳಲ್ಲಿ ಬಾಗವಹಿಸಿ ಅನುಕೂಲತೆಯನ್ನು ಪಡೆದು ಕೊಳ್ಳಬಹುದೆಂದು ಕೇಳಿಕೊಳ್ಳುತ್ತೇನೆ. ಈ ಕಾರ್ಯಕ್ರಮ ಬಹಳ ಯಶಸ್ವಿಯಾಗಿಯೆಂದು ಹೇಳ ಲಿಕ್ಕೆ ಬಯಸುವುದು ಮಾತ್ರವಲ್ಲದೆ ಸಧ್ಯದಲ್ಲಿಯೇ ಅವರಿಗೆ ಬೇಕಾದಂಥ ವರ್ಕ್‌ಶಾಪ್, ವಸತಿ ಸೌಕರ್ಯ ಕೂಡ ಕೊಡುವುದಕ್ಕೆ ಕಾರ್ಯಕ್ರಮ ಕೈಗೊಂಡಿದ್ದೇವೆ. ಇದೆಲ್ಲಾ ಒಂದು ವ್ಯವಸ್ಥೆ ಈ ಬಿದರ ವೈರ್ ಕಾಂಪ್ಲೆಕ್ಸ್‌ನಲ್ಲಿ ಇರುವುದರಿಂದ ಆ ಜನಗಳು ಬರಲಿಕ್ಕೆ ಸಾಧ್ಯತೆ ಇದೆ. ಇಷ್ಟು ಮಾತ್ರವಲ್ಲದೆ ನಾವು ವೆಸ್ಟ್ರನ್ ಘಾಟ್ ಡೆವಲಪ್‌ಮೆಂಟ್ ಪ್ರೋಗ್ರಾಂ ಮುಖಾಂತರ ಸ್ಯಾಂಡಲ್ ಉಡ್ ಕಾಂಪ್ಲೆಕ್ಸನ್ನು ಸಾಗರದಲ್ಲಿ ಸ್ಥಾಪಿಸಿ ತನ್ಮೂಲಕ, ಸಾಗರ, ಸೊರಬ ಮತ್ತು ಕುಮಟ ಈ ಪ್ರದೇಶಗಳಲ್ಲಿ ಯಾವ ಗಂಥದ ಕುಶಲ ಕರ್ಮಿಗಳು ಇದ್ದಾರೆ ಅವರಿಗೆ 4 ಲಕ್ಷ ರೂಪಾಯಿಗಳನ್ನು ನಮ್ಮ ಕರ್ನಾಟಕ ಸರ್ಕಾರದವರು ಕರ್ನಾಟಕ ಹ್ಯಾಂಡಿ ಕ್ರಾಫ್ಟ್ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ ಏತಕ್ಕೆಂದು ಹೇಳಿದರೆ ಯಾವುದೇ ಒಂದು ಕಾರ್ಯಕ್ರಮವನ್ನು ಮಾಡಿದಾಗ ಬರೀ ಹಣದ ಒಂದು ವ್ಯವಸ್ಥೆ ಮಾತ್ರ ಮಾಡುವುದಲ್ಲ ಅವರಿಗೆ ಬೇಕಾದಂಥ ಸಂಪೂರ್ಣ ವ್ಯವಸ್ಥೆಯನ್ನು ಮಾಡಿದಾಗ ಮಾತ್ರ ಕಾರ್ಯಕ್ರಮ ಅರ್ಥವತ್ತಾಗುತ್ತದೆ, ಹಾಗೂ ಯಶಸ್ಸು ಆಗುತ್ತದೆ. ಇನ್ನು ಒಂದೆರಡು ತಿಂಗಳಲ್ಲಿ ಈ ಕಾರ್ಯಕ್ರಮ ನಾವು ಸಾಗರದಲ್ಲಿ ಪ್ರಾರಂಭ ಮಾಡಲಿದ್ದೇವೆ. ಇದರಿಂದಾಗಿ ಯಾವ ಒಂದು ಟ್ರೆಡೀಷನಲ್ ಆರ್ಟಿಸಾನ್ ಇದ್ದಾರೆ ಅವರಿಗೆ ಸಾಕಷ್ಟು ಪ್ರೋಷಣ್ ಮತ್ತು ಅವರಿಗೆ ಸಾಕಷ್ಟು ಮಾರ್ಕೆಟ್ಟಿನ ವ್ಯವಸ್ಥೆ ಮಾಡಲಿಕ್ಕೆ ಅವಕಾಶವಾಗುತ್ತದೆ ಬರೀ 6 ತಿಂಗಳ ಮಟ್ಟಿಗೆ ಸ್ಯಾಂಡ್ ಉಡ್ ಕುಶಲ ಕರ್ಮಿಗಳಿಗೆ ಕೊಟ್ಟರೆ ಸಬ್ಸಿಡಿ ಕೊಟ್ಟರೆ ಅನುಕೂಲವಾಗುವುದಿಲ್ಲ ಆದುದರಿಂದ ಅವರಿಗೆ 2-3 ವರ್ಷಗಳ ಮಟ್ಟಿಗಾದರೂ ಸಬ್ಸಿಡಿಯನ್ನು ಕೊಡಬೇಕು ಎನ್ನುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿಅದು ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾ 6 ತಿಂಗಳುಗಳಾಯಿತು.

ಶ್ರೀ ವೀರಪ್ಪ ಮೊಯಿಲಿ.— ಇದನ್ನು ಇಷ್ಟಕ್ಕೆ ನಿಲ್ಲಿಸದೆ ಮೈಸೂರು ಮತ್ತು ಚನ್ನಪಟ್ಟಣಗಳಲ್ಲಿರುವ ಕುಶಲ ಕರ್ಮಿಗಳನ್ನು ಪ್ರೋತ್ಸಾಹಿಸುವ ದಿಶೆಯಲ್ಲಿ ಅಲ್ಲಿ ಕ್ರಾಫ್ಟ್ ಕಾಂಪ್ಲೆಕ್ಸ್‌ನ್ನು ಏರ್ಪಾಡು ಮಾಡಬೇಕೆಂದು ಸರ್ಕಾರ ವಿಚಾರ ಮಾಡಲಿಕ್ಕೆ ಹತ್ತಿದೆ. ಬಹುಶಃ ಇವೆಲ್ಲಾ ವ್ಯವಸ್ಥೆಗಳು ಮುಗಿದಾಗ ಕುಶಲ ಕರ್ಮಿಗಳು ಮತ್ತಷ್ಟು ಪ್ರೋಷಣ್ ಪಡೆದು ಕರ್ನಾಟಕದ ಅಮೂಲ್ಯ ಕಲೆಯನ್ನು ಹೆಚ್ಚು ಅಭಿವೃದ್ಧಿಪಡಿಸಲಿಕ್ಕೆ ಸಾಧ್ಯವಿದೆ.

ಇನ್ನು ಸಣ್ಣ ಕೈಗಾರಿಕೆಗಳ ವಿಚಾರದಲ್ಲಿ ಹೇಳಬೇಕಾಗಿದೆ ನಮ್ಮ ಕರ್ನಾಟಕದಲ್ಲಿ ಸುಮಾರು 28 ಕೈಗಾರಿಕಾ ಎಸ್ಟೇಟ್‌ಗಳಿವೆ. ಇವುಗಳಲ್ಲಿ ಸುಮಾರು 1,200 ಷೆಡ್ಡುಗಳನ್ನು ಕಟ್ಟಲಾಗಿದೆ. ಇಷ್ಟು ಮಾತ್ರವಲ್ಲದೆ, ಹೊಸಪೇಟೆ, ಸಿರಸಿ, ಚಿತ್ರದುರ್ಗ, ದಾವಣಗೆರೆ ಮತ್ತು ರಾಯಚೂರಿನಲ್ಲಿ ನಿವೇಷನಗಳನ್ನು ಪಡೆದು ಎಸ್ಟೇಟ್ ಅಥವಾ ಪ್ಲಾಟುಗಳನ್ನು ಕಟ್ಟುವ ವ್ಯವಸ್ಥೆ ಮಾಡಿದ್ದೇವೆ. 1976-77ನೇ ಸಾಲಿನಲ್ಲಿ ಈ ಷೆಡ್ಡುಗಳನ್ನು ಕಟ್ಟಲಿಕ್ಕಾಗಿ ಸುಮಾರು 125 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಕಳೆದ ಸಾಲಿನಲ್ಲಿ ಮಂಡ್ಯದಲ್ಲಿ ಹತ್ತು ಷೆಡ್ಡುಗಳನ್ನೂ, ಮುದ್ದೇನಹಳ್ಳಿಯಲ್ಲಿ ನಾಲ್ಕು ಷೆಡ್ಡುಗಳನ್ನೂ, ಮಂಗಳೂರಿನಲ್ಲಿ ಹತ್ತು ಷೆಡ್ಡುಗಳನ್ನೂ ತುಮಕೂರಿನಲ್ಲಿ ಆರು ಷೆಡ್ಡುಗಳನ್ನೂ, ಮೈಸೂರಿನಲ್ಲಿ ಇಪ್ಪತ್ತೈದು ಷೆಡ್ಡುಗಳನ್ನೂ, ಬೀದರಿನಲ್ಲಿ ಎಂಟು ಷೆಡ್ಡುಗಳನ್ನೂ ಮತ್ತು ಪೀಣ್ಯದಲ್ಲಿ 186 ಷೆಡ್ಡುಗಳನ್ನೂ ಕಟ್ಟಲಾಗಿದೆ. ಅಲ್ಲದೆ, ಈ ವರ್ಷದಲ್ಲಿ ಸುಮಾರು ನೂರು ಲಕ್ಷ ರೂಪಾಯಿಗಳನ್ನು ಷೆಡ್ಡುಗಳ ನಿರ್ಮಾಣ ಕಾರ್ಯಗಳಿಗಾಗಿ ತೊಡಗಿಸುತ್ತಿದ್ದೇವೆ. ಇಲ್ಲಿಯವರೆಗೆ ಸರ್ಕಾರಿ ಹಣವನ್ನೇ ಹೊಂದಿಕೊಂಡು ಈ ಷೆಡ್ಡುಗಳನ್ನು ಕಟ್ಟಲಾಗುತ್ತಿತ್ತು. ಬ್ಯಾಂಕಿನ ಹಣವನ್ನು ಇದರಲ್ಲಿ ಸರ್ಕಾರದವರು ತೊಡಗಿಸಿರಲಿಲ್ಲ ಇದರಿಂದಾಗಿ, ಇದರಲ್ಲಿ ಹೆಚ್ಚಿಗೆ ಕಾರ್ಯಕ್ರಮಗಳನ್ನು ನಡೆಸಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ ಸರ್ಕಾರಿ ಹಣವನ್ನು ಷೆಡ್ಡುಗಳ ನಿರ್ಮಾಣ ಕಾರ್ಯಕ್ಕಾಗಿ ವಿನಿಯೋಗಿಸಿ ಕೈಗಾರೀಕೀಕರಣವನ್ನು ರಾಜ್ಯದಲ್ಲಿ ಶೀಘ್ರವೇ ಮಾಡಬೇಕೆಂದು

ಮುತವರ್ಜಿ ವಹಿಸದರೂ, ಯಶಸ್ವಿಯಾಗಿ ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದ ತಿಳಿದು. ರಾಷ್ಟ್ರೀಕೃತ ಬ್ಯಾಂಕುಗಳವರೊಂದಿಗೆ ಮಾತು ಕತೆ ನಡೆಸಿ, ಸುಮಾರು 8.9 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಮಾರು 750 ಷೆಡ್ಡುಗಳನ್ನೂ ಕಟ್ಟಬೇಕೆಂದೂ, ಇದಕ್ಕೆ 20 ಪರ್ಸೆಂಟ್ ಮಾರ್ಜಿನಲ್ ಮನಿಯನ್ನು ಸರ್ಕಾರವೇ ತೊಡಗಿಸಬೇಕೆಂದು ವ್ಯವಸ್ಥೆ ಮಾಡಿದ್ದು, ಈ ಯೋಜನೆಯಲ್ಲಿ ಈಗಾಗಲೇ ಪ್ರಥಮ ಹಂತದಲ್ಲಿ 400 ಷೆಡ್ಡುಗಳನ್ನು ಸುಮಾರು 3.3 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸುವ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಇಷ್ಟು ಮಾತ್ರವಲ್ಲದೆ, ನಾನು ಎಲ್ಲ ಮಾನ್ಯ ಶಾಸನ ಸಭಾ ಸದಸ್ಯರಿಗೂ ಕಾಗದ ಬರೆದಿದ್ದೆ. ಪ್ರತಿಯೊಬ್ಬ ಶಾಸಕರ ಕ್ಷೇತ್ರದಲ್ಲಿ ಆರಾರು ಕೈಗಾರಿಕಾ ಷೆಡ್ಡುಗಳನ್ನು ಕಟ್ಟಬೇಕು; ಈ ಬಗ್ಗೆ ಸ್ಥಳೀಯ ಸಂಸ್ಥೆಗಳು, ಪೌರಸಭೆಗಳು ಅಥವಾ ಆ ಪ್ರದೇಶದ ಜನರು ನಿವೇಶನ ಕೊಡುವುದಿದ್ದರೆ, ಬಿಲ್ಡಿಂಗ್ ಮೆಟೀರಿಯಲ್ಸ್ ಕೊಡುವುದಿದ್ದರೆ ಸಣ್ಣ ಕೈಗಾರಿಕಾ ಕಾರ್ಪೊರೇಷನ್ ಮೂಲಕ ಇದಕ್ಕೆ ವ್ಯವಸ್ಥೆ ಮಾಡಬೇಕೆನ್ನುವ ಅಭಿಲಾಷೆಯಿತ್ತು. ಆದರೆ, ಈ ಒಂದು ಹೊಸ ಯೋಜನೆಗೆ ಅನೇಕ ಶಾಸಕರು ಸರ್ಕಾರಕ್ಕೆ ಸಹಕಾರ ನೀಡಲಿಲ್ಲ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಬ್ಯಾಂಕಿನಿಂದ ಹಣ ತಂದು ಷೆಡ್ಡುಗಳನ್ನು ಕಟ್ಟೋಣವೆಂದರೆ ಅಲ್ಲಿ ಬಡ್ಡಿ ಜಾಸ್ತಿ. ಸರ್ಕಾರ ಮಾರ್ಜಿನ್ ಮನಿ ಕೊಡುತ್ತದೆಯೇ ಹೊರತು ಹೆಚ್ಚು ಹಣವನ್ನು ವಿನಿಯೋಗಿಸುವುದಕ್ಕಾಗುವುದಿಲ್ಲ. ಆದುದರಿಂದ, ಹಿಂದೆ ಶಾಲೆಗಳನ್ನು ಮತ್ತು ಆಸ್ಪತ್ರೆಗಳನ್ನು ಕಟ್ಟಲಿಕ್ಕೆ ಯಾವ ರೀತಿ ಸ್ಥಳೀಯ ಸಂಸ್ಥೆಗಳು ಮತ್ತು ಸ್ಥಳೀಯ ಜನರು ಮುಂದೆ ಬರುತ್ತಿದ್ದರು ಅದೇ ರೀತಿಯ ಮನೋಭೂಮಿಕೆಯಿಂದ ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲು ಸ್ಥಳೀಯರು ಮುಂದೆ ಬರಬೇಕು. ಇದೇ ಉದ್ದೇಶದಿಂದ, ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮ ಸ್ಥಳವಾದ ಮುದ್ದೇನಹಳ್ಳಿಯಲ್ಲಿ ನಾಲ್ಕು ಕೈಗಾರಿಕಾ ಷೆಡ್ಡುಗಳನ್ನು ಕಟ್ಟಿ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಇದೇ ರೀತಿಯಲ್ಲಿ ಜನ ಮುಂದೆ ಬರುವುದಾದರೆ, ಗ್ರಾಮಾಂತರಗಳಲ್ಲಿ ಹೆಚ್ಚು ಹೆಚ್ಚು ಷೆಡ್ಡುಗಳನ್ನು ಕಟ್ಟುವ ವ್ಯವಸ್ಥೆ ಸರ್ಕಾರ ಖಂಡಿತ ಮಾಡುತ್ತದೆ.

ಪೂರಕ ಕೈಗಾರಿಕಾ ಬೆಳವಣಿಗೆಯಲ್ಲಿ ಕರ್ನಾಟಕಕ್ಕೆ ಪ್ರಥಮ ಸ್ಥಾನ ಬಂದಿದೆ. ಮುಖ್ಯವಾಗಿ ದ್ಯಾವಸಂದ್ರದಲ್ಲಿ ಐ. ಟಿ. ಐ. ಗೆ ಪೂರಕವಾಗಿ 42 ಷೆಡ್ಡುಗಳನ್ನೂ ಕಟ್ಟಲಾಗಿದ್ದು, ಇವುಗಳಲ್ಲಿ ಈಗಾಗಲೇ ಕೈಗಾರಿಕೆಗಳು ನಡೆಯುತ್ತಿವೆ. ಹೆಚ್.ಎ.ಎಲ್., ಕೆ.ಇ.ಬಿ., ಕೆ.ಎಸ್.ಆರ್.ಟಿ.ಸಿ., ಹರಿಹರದ ಕಿರ್ಲೋಸ್ಕರ, ಭದ್ರಾವತಿಯ ವಿ.ಐ.ಎಸ್.ಎಲ್., ಗುಲ್ಬರ್ಗದ ಶಹಬಾದ್‌ನಲ್ಲಿ, ಎನ್.ಜಿ.ಇ.ಎಫ್. ಮತ್ತು ತುಂಗಭದ್ರದ ಹೊಸಪೇಟೆಯಲ್ಲೂ ಕೂಡ ಪೂರಕ ಕೈಗಾರಿಕೆಗಳ ಸಣ್ಣ ಘಟಕಗಳನ್ನು ತೆರೆಯಲು ವ್ಯವಸ್ಥೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯ ಶ್ರೀ ಅನ್ವರ್ ಖುದ್ದೂಸ್ ಅವರು ವಿ.ಐ.ಎಸ್.ಎಲ್. ನಲ್ಲಿ ಕಟ್ಟುವ ಷೆಡ್ಡುಗಳನ್ನು ವಿತರಣೆ ಮಾಡುವಾಗ ಅಧಿಕಾರಿಗಳಿಗೆ ಕೊಡಬೇಡಿ ಎಂದು ಹೇಳುತ್ತಿದ್ದಾರೆ. ಷೆಡ್ಡುಗಳನ್ನು ಹಂಚಲು ನಾವು ಹಲವು ನಿಯಮಗಳನ್ನು ಇಟ್ಟುಕೊಂಡಿದ್ದೇವೆ. ಯಾರ ಪಕ್ಷವನ್ನೂ ಹಿಡಿದು ನಾವು ಷೆಡ್ಡುಗಳನ್ನು ವಿತರಣೆ ಮಾಡುವುದಿಲ್ಲ. ನಿಷ್ಪಕ್ಷಪಾತವಾಗಿ ಷೆಡ್ಡುಗಳ ವಿತರಣೆಯಾಗುವುದೆಂದೂ, ನಾನು ಮಾತು ಕೊಡಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ಬಕಪಕ್ಷಿಗಳು ಜಾಸ್ತಿ ಇವೆ!

ಶ್ರೀ ವೀರಪ್ಪ ಮೊಯಿಲಿ.—ಏನಿದ್ದರೂ, ನಿಯಮದ ಪ್ರಕಾರ ವಿತರಣೆಯಾಗುವುದು.

ಶ್ರೀ ಕಾಗೋಡು ತಿಮ್ಮಪ್ಪ.—ನಿಯಮವನ್ನೇನೂ ದೇವರು ಮಾಡಿಲ್ಲ; ಮನುಷ್ಯ ಮಾಡಿರುವುದು. ಆದುದರಿಂದ, ನೀವೊಂದು ನಿಯಮ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಶ್ರೀ ಕೆ. ಪಟ್ಟಸ್ವಾಮಿಯವರು ಮಾತನಾಡುತ್ತಾ, ಕೆ.ಎಸ್.ಐ.ಡಿ.ಸಿ.ಯಲ್ಲಿ ಐದು ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಹೇಳಿದರು. ಇದನ್ನು ನಷ್ಟ ಎಂದು ಹೇಳಲಿಕ್ಕೆ ಬರುವುದಿಲ್ಲ. ಇದರಲ್ಲಿ ಟೆಕ್ಸ್ಸಾಕ್‌ಗೆ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಕೊಡಬೇಕಾಯಿತು; ಕಳೆದ ವರ್ಷ ಪಾಲಿಟೆಕ್ನಾಲಜಿಕಲ್ ಕ್ಲಿನಿಕ್‌ಗೆ 25 ಸಾವಿರ ರೂಪಾಯಿ ಕೊಡಲಾಗಿದೆ; ನಾಯಿ (Naye) ವಸ್ತು ಪ್ರದರ್ಶನ ಮತ್ತು ಇತರ ವಸ್ತು ಪ್ರದರ್ಶನಗಳಿಗೆ 25 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಎಷ್ಟು ಕೊಟ್ಟಿರಿ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕೊಟ್ಟಿಲ್ಲ.

ಇನ್ನು ಟ್ರೇಡ್ ಆಫ್ ರಾ ಮೆಟೀರಿಯಲ್ಸ್ ಏನು ಆಯಿತು ಅಂದರೆ, 1973-74ನೇ ಸಾಲಿನಲ್ಲಿ ಹಿಂದೂಸ್ತಾನ್ ಸ್ಟೀಲ್ ಕಂಪನಿ ಲಿಮಿಟೆಡ್ ನಿಂದ ಕೆಲವು ವಸ್ತುಗಳನ್ನು ತೆಗೆದು ಕೊಳ್ಳ ಬೇಕಾಯಿತು; ಒಂದು ರೀತಿಯಾದ ಒತ್ತಾಯದ ಮುಖಾಂತರ ಕೊಂಡಕೊಳ್ಳಬೇಕಾಯಿತು; ಕೆಲವು ವಸ್ತುಗಳು ಮಾರುಕಟ್ಟೆಯಲ್ಲಿ ಇದ್ದುದರಿಂದ ನಾವು ಕೊಂಡ ವಸ್ತುಗಳು ಮಾರಾಟವಾಗ ಲಿಲ್ಲ. ಇದರಿಂದ ನಮಗೆ ಕೋಟಿಗಟ್ಟಲೆ ರೂಪಾಯಿ ರಾಮೆಟೀರಿಯಲ್ಸ್ ಉಳಿದುಕೊಂಡಿತು. ಇದರಿಂದ ಒಂದು ಲಕ್ಷ 75 ಸಾವಿರ ರೂಪಾಯಿ ನಷ್ಟವಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಒತ್ತಾಯ ಮಾಡಿದವರು ಯಾರು?

ಶ್ರೀ ಎಂ. ವೀರಪ್ಪ ಮೊಯಿಲಿ.— ಅಂಡರ್‌ಸ್ಟ್ಯಾಂಡಿಗ್ ಇತ್ತು? ಯಾವ ಖಾಸಗಿ ವ್ಯಕ್ತಿ ಗಳಿಂದ ಮಾಡಿದ್ದಲ್ಲ. ರಿವಿಷನ್ ಆಫ್ ಪೆ ಸ್ಕೇಲಿನಿಂದ 75 ಸಾವಿರ ರೂಪಾಯಿ ಒಟ್ಟು 5 ಲಕ್ಷ ರೂಪಾಯಿ ನಿಜವಾಗಿಯೂ ನಷ್ಟವಾಗಿರುವ ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಕೊಳ್ಳೆಗಾಲ, ಹುಣಸೂರು ಹಾಗೂ ಚಾಮರಾಜ ನಗರಗಳಲ್ಲಿ ಷೆಡ್ಡುಗಳನ್ನು ಕಟ್ಟಬೇಕೆಂದು ಹೇಳಿದರು. ಈಗಾಗಲೇ ಕೊಳ್ಳೆಗಾಲ ಮತ್ತು ಹುಣ ಸೂರಿನಲ್ಲಿ ಜಾಗವನ್ನು ತೆಗೆದುಕೊಂಡಿದ್ದೇವೆ; ಷೆಡ್ಡುಗಳನ್ನು ಕೂಡ ಕಟ್ಟಲಿಕ್ಕೆ ಪ್ರಯತ್ನ ಮಾಡಿ ಪ್ಲಾಟುಗಳನ್ನು ಕೂಡ ವಿಂಗಡಿಸಿ ಜನಗಳಿಗೆ ಕೊಡುವುದಕ್ಕೆ ತಯಾರಾಗಿದ್ದೇವೆ. ಚಾಮರಾಜ ನಗರದಲ್ಲಿ ಷೆಡ್ಡುಗಳನ್ನು ಕಟ್ಟುವಂತಹ ಆಲೋಚನೆ ಸಧ್ಯಕ್ಕೆ ಇಲ್ಲ. ನಮ್ಮ ದೇವೇಗೌಡರು ಷೆಡ್ಡು ಗಳ ಡಿಸೈನ್‌ಗಳನ್ನು ಚೇಂಜ್ ಮಾಡಬೇಕು ಎಂದು ಹೇಳಿದರು. ಈ ವಿಚಾರದಲ್ಲಿ ಗಮನಕೊಟ್ಟು ಈಗ ಪೀಣ್ಯದ ಎರಡನೇ ಘಟ್ಟದಲ್ಲಿ ಕಟ್ಟುತಕ್ಕ ಷೆಡ್ಡುಗಳ ಮಾದರಿಯನ್ನು ಬದಲಾವಣೆ ಮಾಡ ಲಾಗಿದೆ ತಮಿಳುನಾಡು ಮತ್ತು ಕೇರಳ ರಾಜ್ಯಗಳಿಗೆ ನಾವು ನಮ್ಮ ಪರಿಣತರನ್ನು ಕಳುಹಿಸಿ ಡಿಸೈನ್ಸನ್ನು ಮಾಡಿಫೈ ಮಾಡುತ್ತಿದ್ದೇವೆ. ಕೃಷ್ಣನ್‌ರವರು ಹೇಳಿದರು ಕೇರಳದಲ್ಲಿ 10 ಸಾವಿರ ಷೆಡ್ಡುಗಳನ್ನು ಕಟ್ಟುವಂತ ಯೋಜನೆ ಮಾಡಿದ್ದಾರೆಂದು ನಾನು ಕೂಡ ಕೇರಳಕ್ಕೆ ಹೋಗಿದ್ದೆ 10 ಸಾವಿರ ಷೆಡ್ಡುಗಳು ಅಲ್ಲಿ ಇನ್ನೂ ಬರಲಿಲ್ಲ, ಅದು ಯಶಸ್ವಿಯಾಗಿಲ್ಲವೆಂದು ಅವರೇ ಹೇಳಿದ್ದಾರೆ.

ಇನ್ನು ಕೈಗಾರಿಕಾ ಆಂದೋಳನ ವಿಚಾರದಲ್ಲಿ ಕೃಷ್ಣನ್‌ರವರು ಮತ್ತು ದೇವೇಗೌಡರು ಪ್ರಸ್ತಾಪ ಮಾಡಿದ್ದಾರೆ. ಬಹಳ ಸಂತೋಷದಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ ಕೈಗಾರಿಕಾ ಆಂದೋಳನ ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿಗೆ ಯಶಸ್ವಿಯಾಗಿದೆ ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳು ಕೂಡ ನನ್ನ ಹತ್ತಿರ ಇವೆ. ಕೈಗಾರಿಕಾ ಆಂದೋಳನವನ್ನು ಮಾಡುವ ಮೊದಲು ಪ್ರತಿ ಯೊಂದು ಜಿಲ್ಲೆಗೆ ಸಂಬಂಧಪಟ್ಟಂತೆ ಟೆಕ್ನೋ ಎಕಾನಮಿ ಸರ್ವೆ ರಿಪೋರ್ಟ್ ವ್ಯವಸ್ಥಿತವಾಗಿ ಹಾಗೂ ಶಾಸ್ತ್ರೀಯವಾಗಿ ನಾವು ತಯಾರು ಮಾಡಿ ಎಲ್ಲೆಲ್ಲಿ ಯಾವರೀತಿಯ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು ಎನ್ನುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದು; ಆಯಾ ಕೈಗಾರಿಕೆಗಳಿಗೆ ಬೇಕಾದಂತ ಪ್ರಾಜೆಕ್ಟ್ ಫೈಲನ್ನು ತಯಾರು ಮಾಡಿ, ಈ ಒಂದು ಆಂದೋಳನವನ್ನು ಮುಖ್ಯವಾಗಿ ಕೈಗಾರಿಕೆಯಲ್ಲಿ ಹಿಂದುಳಿದಿರುವ ಜಿಲ್ಲೆಗಳಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಬರಲಿಕ್ಕೆ ಪ್ರಯತ್ನ ಮಾಡಲಾಗಿದೆ. ಕೈಗಾರಿಕಾ ಆಂದೋಳನದ ಬಗ್ಗೆ ಎಲ್ಲಾ ಬ್ಯಾಂಕುಗಳ ಪ್ರಮುಖ ಅಧಿಕಾರಿಗಳು, ಕೈಗಾರಿಕೆಗೆ ಸಂಬಂಧಪಟ್ಟ ಅಧಿಕಾರಿಗಳು ಆಯಾ ಪ್ರದೇಶಗಳಲ್ಲಿ ಒಂದು ವಾರಗಳು ಇದ್ದುದರಿಂದ ಆ ಪ್ರದೇಶಗಳಲ್ಲಿ ಒಂದು ರೀತಿಯಾದ ಕೈಗಾರಿಕಾ ಸಂಸ್ಕೃತಿ ಬೆಳೆಯಲಿಕ್ಕೆ ಸಾಧ್ಯವಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ಆಂದೋಳನ ಮಾಡಿದಾಗ 33' ಯೂನಿಟ್‌ಗಳು ರಿಜಿಸ್ಟರ್ ಆದವು; ಅವುಗಳ ಪೈಕಿ 232 ಕೈಗಾರಿಕೆಗಳು ಸ್ಥಾಪನೆ ಆಗಬಹುದೆಂದು ಗುರುತಿಸಲಾಗಿದೆ; ಈಗ 121 ಕೈಗಾರಿಕೆಗಳು ಪ್ರಾರಂಭವಾಗಿವೆ 1,5,7,200 ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಿದ್ದು; 628 ಮಂದಿಗೆ ಉದ್ಯೋಗ ದೊರೆತಿದೆ ಧಾರವಾಡದಲ್ಲಿ 4 8 ಕೈಗಾರಿಕಾ ಯೂನಿಟ್ ಗಳು ರಿಜಿಸ್ಟರ್ ಆಗಿದ್ದು; 428 ಯೂನಿಟ್‌ಗಳು ಸಾಲ ಪಡೆದುಕೊಂಡಿವೆ. 151 ಯೂನಿಟ್‌ಗಳಿಗೆ 1,2,22 000 ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ; 1 700 ಮಂದಿಗೆ ಕೆಲಸ ಒದಗಿಸಿದೆ. ಬಿಜಾಪುರದಲ್ಲಿ ಕೈಗಾರಿಕಾ ಆಂದೋಳನ ಪ್ರಾರಂಭ ಮಾಡಿದಾಗ ಜನರು ಹೇಳಿದರು. ಬಿಜಾಪುರ ದಲ್ಲಿ ಕೈಗಾರಿಕೆಗಳು ಬರಲಿಕ್ಕೆ ಸಾಧ್ಯವಾಗುವುದಿಲ್ಲವೆಂದು. ಅಲ್ಲಿ 399 ಯೂನಿಟ್‌ಗಳು ರಿಜಿಸ್ಟರ್

ಆಗಿದ್ದು: 299 ಯೂನಿಟ್‌ಗಳಿಗೆ ಸಾಲ ಕೊಡುವ ಬಗ್ಗೆ ತೀರ್ಮಾನ ಮಾಡಲಾಗಿದೆ. 65 ಯೂನಿಟ್‌ಗಳು ಕೆಲಸ ಮಾಡುತ್ತಿದ್ದು: 364 ಮಂದಿಗೆ ಕೆಲಸ ಕೊಟ್ಟಿದೆ. ಇದರ ಮೇಲೆ 36,66,810 ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಲಾಗಿದೆ. ಗುಲ್ಬರ್ಗದಲ್ಲಿ 516 ಯೂನಿಟ್‌ಗಳು ರಿಜಿಸ್ಟರ್ ಆಗಿದ್ದು, 19 ಯೂನಿಟ್‌ಗಳು ಕೆಲಸ ಮಾಡುತ್ತಿದ್ದು; 170 ಮಂದಿಗೆ ಕೆಲಸ ಕೊಟ್ಟಿದೆ. ಬೀದರ್‌ನಲ್ಲಿ ಇತ್ತೀಚೆಗೆ ಆಂದೋಲನ ಮಾಡಲಾಗಿದೆ. ಒಂದು ಇಂಡಸ್ಟ್ರೀಸನ್ನು ಮಾಡಬೇಕಾದರೆ 1-2 ವರ್ಷ ಬೇಕಾಗುತ್ತದೆ. 291 ಯೂನಿಟ್‌ಗಳನ್ನು ರಿಜಿಸ್ಟರ್ ಆಗಿದ್ದು; 36 ಯೂನಿಟ್‌ಗಳು ಕೆಲಸ ಮಾಡುತ್ತಿವೆ; 11,12,000 ಇನ್‌ವೆಸ್ಟ್‌ಮೆಂಟ್ ಮಾಡಿದ್ದು, 214 ಮಂದಿಗೆ ಕೆಲಸ ಒದಗಿಸಿದೆ.

ಆದ್ದರಿಂದ ಆ ಪ್ರದೇಶದಲ್ಲಿ ಕೈಗಾರಿಕಾ ಆಂದೋಳನ ಹೆಚ್ಚಿನ ಮಟ್ಟಿಗೆ ನಡೆದದ್ದು, ಕೈಗಾರಿಕಾ ವಾತಾವರಣವನ್ನು ಕಲ್ಪಿಸಲಿಕ್ಕೆ ಸಾಧ್ಯವಾದುದು ಮಾತ್ರವಲ್ಲದೆ, ಆ ಪ್ರದೇಶದಲ್ಲಿ ಎಲ್ಲ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂದು ಇದ್ದಂತ ಯುವಕರನ್ನು ಇದರಿಂದ ಹುರಿದುಂಬಿಸಿದ್ದಾಗಿದೆ.

SRI M. S. KRISHNAN.—According to your figure, not even 50% of those people who have come forward or applied have gone into prodouction. The total number employed is ab ut 2,200 How can you claim that it has really made a big stride.

4-30 P.M.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವೊತ್ತು ಒಂದು ಇಂಡಸ್ಟ್ರಿ ಪ್ರಾರಂಭ ಮಾಡಬೇಕು ಎಂದು ಮಾಡುವುದಕ್ಕೆ ಹೊರಟರೆ, ಅದು ಸರಿಯಾಗಿ ಒಂದು ಅಭಿವೃದ್ಧಿಗೆ ಬರಬೇಕಾದರೆ ಸುಮಾರು ಒಂದೆರಡು ವರ್ಷಗಳಾದರೂ ಕೂಡ ಬೇಕಾಗುತ್ತದೆ ಅಲ್ಲಿ ಕೆಲಸ ಮಾಡತಕ್ಕಂತಹವರಿಗೆ ಷೆಡ್ ಮಾಡಬೇಕಾಗುತ್ತದೆ, ಮತ್ತೆ ಬೇರೆ ಬೇರೆ ರೀತಿಯ ವ್ಯವಸ್ಥೆ ಮಾಡಬೇಕಾಗುತ್ತದೆ. ಇವೆಲ್ಲ ಮಾಡಬೇಕಾಗುವುದರಿಂದ ಸ್ವಲ್ಪ ಕಾಲ ಬೇಕಾಗುತ್ತದೆ. ನಾನು ಪರಿಶೀಲನೆ ಮಾಡಿದ್ದಕ್ಕೆ ಯಾವ ಪ್ರದೇಶದಲ್ಲಿ ಕೈಗಾರಿಕಾ ಆಂದೋಳನವಾಗಿದೆ. ಆ ಪ್ರದೇಶದಲ್ಲಿ ದಿ ಗ್ರೋತ್ ರೇಟ್ 150 ಪರ್‌ಸೆಂಟ್‌ವರೆಗೆ ಆಗಿದೆ. ಈ ಒಂದು ನೆಲೆಯಲ್ಲಿ ಕೈಗಾರಿಕಾ ಆಂದೋಳನ ಬಹಳ ಯಶಸ್ವಿಯಾಗಿದೆ ಎಂದು ಹೇಳಕ್ಕೆ ಬಯಸುತ್ತೇನೆ.

SRI M. S. KRISHNAN.—Growth rate between what period and what period ? Either the earlier period must be some 'X' 8 figure and now it must me 'X' 150 I don't think that it is the position. If that is so it would be very correct.

SRI M. VEERAPPA MOILY —Growth rate when compared to the previous years is 150%. This is what I want to say ಇನ್ನು ಮಾನ್ಯ ಸದಸ್ಯರು, ಈ ಸೇಲ್ಸ್ ಟ್ಯಾಕ್ಸ್ ರೀಫಂಡ್ ಮತ್ತು ಇನ್ನಿತರೇ ಸವಲತ್ತುಗಳು ಸರಿಯಾಗಿ ದೊರಕುತ್ತಿಲ್ಲ ಎನ್ನುವ ಮಾತನ್ನು ಹೇಳಿದರು. 1975-76ರಲ್ಲಿ 98 ಯೂನಿಟ್‌ಗಳಿಗೆ ಮತ್ತು 1976-77ರಲ್ಲಿ 60 ಯೂನಿಟ್‌ಗಳಿಗೆ ಈ ಸೇಲ್ಸ್ ಟಾಕ್ಸ್ ರೀಫಂಡ್ ಆಗಿದೆ. 1975-76ರಲ್ಲಿ 17 ಲಕ್ಷ 15 ಸಾವಿರದ 230 ರೂಪಾಯಿ ಸೇಲ್ಸ್ ರೀಫಂಡ್ ಆಗಿದೆ. 1976-77ರಲ್ಲಿ 18 ಲಕ್ಷ 95 ಸಾವಿರದ 747 ರೂಪಾಯಿ ಸೇಲ್ಸ್ ಟಾಕ್ಸ್ ರೀಫಂಡ್ ಆಗಿದೆ. ಆದ್ದರಿಂದ ಈ ಸೇಲ್ಸ್ ಟ್ಯಾಕ್ಸ್ ಮತ್ತು ಇನ್ನಿತರೇ ಸವಲತ್ತುಗಳು ಬರೀ ಕಾಗದದ ಮೇಲೆ ಮಾತ್ರ ಇದೆ. ಅದು ನಿಜವಾಗಿಯೂ ಜನಗಳಿಗೆ ಸಿಕ್ಕುತ್ತಿಲ್ಲ ಎಂದು ಹೇಳುವ ಮಾತು ಸರಿಯಲ್ಲ. ಇನ್ನು ವಿದ್ಯುತ್ತಿನ ಕೊರತೆ ಇದ್ದರೂ ಕೂಡ ಕಳೆದ ವರ್ಷ ನಮ್ಮ ಸಣ್ಣ ಕೈಗಾರಿಕೆಯ ಅಭಿವೃದ್ಧಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಆಗಿದೆ. ಇನ್ನು ದುರ್ಬಲ ವರ್ಗದವರ ಅಭಿವೃದ್ಧಿಯಲ್ಲೂ ಕೂಡ ಹೆಚ್ಚಿನ ಸಾಧನೆಯನ್ನು ನಾವು ಮಾಡಿದ್ದೇವೆ ಎಂದು ಹೇಳಿ ಈ ಸಣ್ಣ ಕೈಗಾರಿಕೆಗಳ ಬೇಡಿಕೆಗೆ ಸಂಪೂರ್ಣವಾದ ಅನುಮತಿ ಕೊಡಬೇಕೆಂದು ನಾನು ಬೇಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಬಾಂಗಿ.—ಸ್ವಾಮಿ, ನಾನು ಹ್ಯಾಂಡ್‌ಲೂಮ್ಸ್ ಬಗ್ಗೆ ಸಪರೇಟ್ ಡೈರೆಕ್ಟರೇಟ್ ಮಾಡಬೇಕು ಎಂದು ಹೇಳಿದ್ದೆ, ಆ ಬಗ್ಗೆ ಮಾನ್ಯಮಂತ್ರಿಗಳು ಯಾವುದೇ ಉತ್ತರ ಹೇಳಲಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಮಾನ್ಯ ಸದಸ್ಯರಾದ ಬಾಂಗಿಯವರು ಕೇಳತಕ್ಕ ಪ್ರಶ್ನೆಯನ್ನು ನಾನು ವಿವರವಾಗಿ ಹೇಳುತ್ತೇನೆ. ಹ್ಯಾಂಡ್‌ಲೂಮ್ಸ್ ಬಗ್ಗೆ ಸಪರೇಟ್ ಡೈರೆಕ್ಟರೇಟ್ ಮಾಡುವುದು ಮತ್ತೇ ನೇಕಾರರಿಗೆ ಕಲ್ಯಾಣ ನಿಧಿ ಕೊಡುವುದಾಗಿ ಮಾನ್ಯ ಮಂತ್ರಿಗಳು ಫೆಬ್ರುವರಿ ತಿಂಗಳಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಿರಿ ಅದನ್ನು ಕೈ ಬಿಟ್ಟಿದ್ದೀರಾ ಹೇಗೆ ಎಂಬುದನ್ನು ತಿಳಿಸಬೇಕು. ಇನ್ನು ಹೌಸಿಂಗ್ ಪ್ರೋಗ್ರಾಂ ಮೂರು ಕಡೆಗಳಲ್ಲಿ ನಡೆದುಕೊಂಡಿದೆ ಎಂದು ಹೇಳಿದಿರಿ. ಆ ಒಂದು ಕಾರ್ಯ ವಿಧಾನವನ್ನು ಇತರ ತಾಲ್ಲೋಕುಗಳಲ್ಲಿ ವಿಸ್ತರಿಸುವುದು ಇದೆಯೋ ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರಾದ ಬಾಂಗಿಯವರು ಹ್ಯಾಂಡ್‌ಲೂಮ್ ಬಗ್ಗೆ ಸಪರೇಟ್ ಡೈರೆಕ್ಟರೇಟ್ ಆಗಬೇಕು ಎಂದು ಹೇಳಿದರು. ಶಿವರಾಮನ್ ಕಮಿಟಿ ವರದಿ ಪ್ರಕಾರ ಹ್ಯಾಂಡ್‌ಲೂಮ್ಸ್ ಬಗ್ಗೆ ಸಪರೇಟ್ ಡೈರೆಕ್ಟರೇಟ್ ಆಗಬೇಕು ಎಂದು ಹೇಳಿದ್ದು ಇದೆ. ಆದರೆ ಹೆಚ್ಚು ಹೆಚ್ಚು ಕಚೇರಿಗಳನ್ನು ಮಾಡಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಇವೊತ್ತು ಔಟ್‌ಸೈಡ್ ದಿ ಕೋ ಆಪರೇಟಿವ್ ಫೋಲ್ಡ್‌ನಲ್ಲಿ ಇರತಕ್ಕದ್ದನ್ನು ನೋಡುತ್ತೇವೆ ಇನ್ನೂ ಮೂರು ಅಪೆಕ್ಸ್ ಸೊಸೈಟಿಗಳು ಇವೆ. ಅವು ಯಾವುವೆಂದರೆ, ಉಲ್ಲನ್; ಕಾಟನ್ ಮತ್ತು ಸಿಲ್ಕ್ ಅಪೆಕ್ಸ್ ಸೊಸೈಟಿಗಳು. ಆದ್ದರಿಂದ ನೇಕಾರರಿಗೆ ಔಟ್‌ಸೈಡ್ ದಿ ಕೋ ಆಪರೇಟಿವ್ ಫೋಲ್ಡ್, ಮತ್ತು ಇನ್‌ಸೈಡ್ ದಿ ಕೋ ಆಪರೇಟೀವ್ ಫೋಲ್ಡ್ ಅದನ್ನು ನೋಡುವ ಸ್ಟೇಟ್ ಲೆವೆಲ್ ಆರ್ಗನೈಜೇಷನ್ ಇದೆ ಅದಕ್ಕೋಸ್ಕರ ನಾವು ಸಪರೇಟ್ ಡೈರೆಕ್ಟರೇಟ್ ಮಾಡುವ ವಿಚಾರವನ್ನು ಕೈಬಿಟ್ಟಿಲ್ಲ. ಅದು ಅಗತ್ಯ ಎಂದು ಕಂಡುಬಂದರೆ ಪುನರ್ ಪರಿಶೀಲನೆ ಮಾಡುತ್ತೇವೆ. ಸಪರೇಟ್ ಡೈರೆಕ್ಟರೇಟ್ ಮಾಡುವುದು ನೇಕಾರರ ದೃಷ್ಟಿಯಲ್ಲಿ ಅಗತ್ಯ ಎಂದು ಕಂಡುಬಂದರೆ ಖಂಡಿತ ಅದನ್ನು ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರಾದ ಆರ್ ಎಸ್. ಪಾಟೀಲರು ನೇಕಾರರ ಕಲ್ಯಾಣ ನಿಧಿ ವಿಚಾರವಾಗಿ ಕೇಳಿದರು ಅದನ್ನು ನಾವು ಜಾರಿ ಮಾಡುತ್ತೇವೆ ಅದು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿರುವುದು ಮಾತ್ರವಲ್ಲದೇ ಅದನ್ನು ಕೂಡಲೇ ಈ ಕೋ ಆಪರೇಟೀವ್ ಸೆಕ್ಟಾರ್‌ನಲ್ಲಿ ಇರತಕ್ಕ ನೇಕಾರರಿಗೆ ಕಲ್ಯಾಣ ನಿಧಿಯನ್ನು ಜಾರಿ ಮಾಡುತ್ತೇವೆ.

ಶ್ರೀ ಪಿ ಎಂ. ಬಾಂಗಿ.—ಮಾನ್ಯ ಮಂತ್ರಿಗಳು ಮಿನಿ ಸ್ಪಿನ್ನಿಂಗ್ ಮಿಲ್ಸ್ ವಿಚಾರವಾಗಿ ಏನೂ ಉತ್ತರ ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ನಮ್ಮ ಖಾದಿ ಬೋರ್ಡಿನಲ್ಲಿ ಲೋಕ ವಸ್ತ್ರದ ಪ್ರಯೋಗವನ್ನು ಮಾಡುತ್ತಿದ್ದೇವೆ ಅದು ಪ್ರಾರಂಭವಾಗಿ ಬಹಳ ಯಶಸ್ವಿಯಾಗಿ ನಡೆಯುತ್ತಿದೆ ಮಾನ್ಯಸದಸ್ಯರು ಒಂದು ದಿವಸ ಬಂದು ಅದನ್ನು ನೋಡಬಹುದು. ಇದು ಒಂದು ಹೊಸ ಪ್ರಯೋಗವನ್ನು 1975ರ ಪೈಲಟ್ ಪ್ರಾಜೆಕ್ಟ್‌ನಲ್ಲಿ ಪ್ರಾರಂಭ ಮಾಡಿದ್ದೇವೆ, ಇದರ ಪ್ರಕಾರ ಮೂರು ವಿಧ ಇದೆ. ಒಂದು ಕಾಂಪೋಸಿಟ್ ಯೂನಿಟ್ಸ್ ಎರಡು ವಾನ್ ವೀವಿಂಗ್ ಯೂನಿಟ್ಸ್ ಮೂರು ಸ್ಪಿನಿಂಗ್ ಯೂನಿಟ್ಸ್ ಆದ್ದರಿಂದ ನಾಲ್ಕನೆಯದಾಗಿ ಲೋಕ ವಸ್ತ್ರಯೂನಿಟ್ಸ್ ಸ್ಥಾಪನೆ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದ ಇವೊತ್ತು ಸ್ಪಿನ್ನಿಂಗ್ ಮಿಲ್ಸ್ ಮಾಡಲಿಕ್ಕೆ ಸಾಧ್ಯ ಇದೆ. ಆದರೆ ಹ್ಯಾಂಡ್‌ಲೂಮ್ ನೇಕಾರರಿಗೆ ಬೇಕಾದಂಥ ಎಲ್ಲಾ ಕೌಂಟುಗಳ ನೂಲುಗಳನ್ನು ಈ ಸ್ಪಿನ್ನಿಂಗ್ ಯೂನಿಟ್‌ಗಳಿಂದ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇವೊತ್ತು ರಾಜ್ಯದಲ್ಲಿ ಕೆಲವು ಮಿಲ್ಲುಗಳು ತೊಂದರೆಯಲ್ಲಿ ಇವೆ ತಾವು ಹೊಸ ಹೊಸ ಮಿಲ್ಲಗಳನ್ನು ಮುಂಚೆ ಮಾಡುವುದಕ್ಕೆ ಇಲ್ಲಿರತಕ್ಕ ಮಿಲ್ಲುಗಳಲ್ಲಿ ಲೋಕವಸ್ತ್ರ ತಯಾರು ಮಾಡುವುದಕ್ಕೆ ಏತಕ್ಕೆ ಒತ್ತಾಯ ಮಾಡಬಾರದು ?

SRI D. DEVARAJ URS.—I dono't know whether you have seen that Lok Vastra Unit here ?

SRI M. S. KRISHNAN.—No.

SRI D. DEVARAJ URS.—Please see that Unit ಅದನ್ನು ನೋಡಿ ಅನಂತರ ಏನಾದರೂ ಸಲಹೆ ಕೊಡಿ, It should be possible for the people of lesser resources to get the benefits. We can have a unit even in one village which may cost Rs. 5–6 lakhs and not more than that.

SRI M. S. KRISHNAN.—Either they have to go in for very costly things like Terrene etc. which they cannot do. What has been said by the economists connected with the textile units is that these medium scale units can also do this Lok Vastra.

SRI D DEVARAJ URS.—Merely converting Terrine and other things to cotton production, cotton yarn cotton cloth production, who prevents them ? Sick mill is always a sick mill whether it is cotton or some other things, how can they convert this. This is a small unit which is just about one unit to 48 spindles. How can you convert this as a factory ?

SRI M. S. KRISHNAN.—The conception is different, that is what I am saying.

SRI D. DEVARAJ URS.—That is why the factory cannot take up all these things as the whole machine has to work or it has to be idle

ಶ್ರೀ ಕೆ. ಶ್ರೀರಾಮುಲು (ರೇಷ್ಮೆ ಇಲಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಉಪಾಧ್ಯಕ್ಷರೆ ನನ್ನ ಇಲಾಖೆಯ ಮೇಲೆ ಅಂದರೆ ರೇಷ್ಮೆ ಇಲಾಖೆಯ ಮೇಲೆ 7 ಜನ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಪುಟ್ಟಸ್ವಾಮಿಯವರು ನನ್ನ ರಾಜೀನಾಮೆಯ ವಿಚಾರವನ್ನೂ ಕೂಡ ಅವರ ಭಾಷಣದಲ್ಲಿ ಕೇಳಿದ್ದಾರೆ. ಅವರು ಈ ರೀತಿ ಕೇಳುವ ಮೊದಲೇ ನಾನು ಹೇಳಿರುವ ಅಂಕಿ ಅಂಶಗಳಲ್ಲಿ ತಪ್ಪಿದರೆ ಅಥವಾ ಯಾರಾದರೂ ಮುಂದೆ ಬಂದು ಇಂಥಾದ್ದು ತಪ್ಪು ಮಾಡಿದ್ದೀರಿ ಎಂದು ತೋರಿಸುವುದಾದರೆ ನಾನು ಈ ರಾಜಕೀಯದಿಂದಲೇ ಹೊರಗೆ ಹೋಗುತ್ತೇನೆಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದೇನೆ. ಇದುವರೆಗೂ ನಾನು ಹೇಳಿರುವ ಅಂಕಿ ಅಂಶಗಳ ಮೇಲೆ ನನ್ನ ಇಲಾಖೆಯ ಯಾವ ಅಧಿಕಾರಿಯೇ ಆಗಲಿ ನನ್ನ ಹತ್ತಿರ ಬಂದು ಸಮಾಧಾನದ ಉತ್ತರ ಹೇಳಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಇಲಾಖೆಯನ್ನು ಸೆಪ್ಟೆಂಬರ್ 1ನೇ ತಾರೀಖು ನನಗೆ ವಹಿಸಿಕೊಟ್ಟರು. ಅದಕ್ಕಾಗಿ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಧನ್ಯವಾದವನ್ನು ತಿಳಿಸುತ್ತೇನೆ. ಈ ಇಲಾಖೆಯು 19 2ನೇ ಇಸವಿಯವರೆಗೂ ಕೈಗಾರಿಕಾ ಖಾತೆಯಲ್ಲಿತ್ತು, ನಂತರ 1972 ರಿಂದೀಚೆಗೆ ಇದು ಪ್ರತ್ಯೇಕವಾದ ಇಲಾಖೆ ಆದಮೇಲೆ ಇದಕ್ಕೆ ಬಹಳ ಪ್ರೋತ್ಸಾಹ ಸಿಕ್ಕಿದೆ ಎಂದು ಹೇಳಬಯಸುತ್ತೇನೆ. ಈ ಇಲಾಖೆಯು ಆಂದಿನಿಂದ ನಡೆದು ಬಂದಿರುವ ದಾರಿಯನ್ನು ನೋಡಿದರೆ ಇದರ ಚರಿತ್ರೆ ತಮಗೆ ಗೊತ್ತಾಗುತ್ತದೆ.

ನಾನು ಈ ಇಲಾಖೆಯನ್ನು ವಹಿಸಿಕೊಂಡು ಸುಮಾರು 11 ತಿಂಗಳಾಗಿವೆ. ಅಂದರೆ ಸೆಪ್ಟೆಂಬರ್ 1ನೇ ತಾರೀಖಿನಿಂದ ಇಲ್ಲಿಯವರೆಗೆ ಸುಮಾರು 348 ಪತ್ರಗಳನ್ನು ನನ್ನ ಇಲಾಖೆಯ ಮತ್ತು ಇದಕ್ಕೆ ಸಂಬಂಧಪಟ್ಟ ಇತರ ಅಧಿಕಾರಿಗಳಿಗೆ ಬರೆದು ಅವರ ಕಡೆಯಿಂದ ಎಷ್ಟು ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವೋ ಅಷ್ಟು ವಿಷಯಗಳನ್ನೂ ತಿಳಿದುಕೊಂಡಿದ್ದೇನೆ. ಅಂದರೆ ಸರಾಸರಿ ತಿಂಗಳಿಗೆ 31.1 ಪತ್ರಗಳನ್ನು ಬರೆದಿದ್ದೇನೆ. ಇದರಲ್ಲಿ ಡೈರೆಕ್ಟರ್‌ರವರಿಗೆ 132, ಸೆಕ್ರೆಟರಿಯವರಿಗೆ 38, ಫೆಡರೇಷನ್‌ಗೆ 3, ಖಾಸಗಿ ಏಜೆಂಟ್‌ರಿಗೆ 175, ಪತ್ರಗಳು. ಈ ರೀತಿ

ಬರೆದಿರುತ್ತೇನೆ ಈಗಲೂ ಕೂಡ ನಾನು ಹೇಳುತ್ತಿರುವುದು ಸರಿ ಎಂದು ವಾದ ಮಾಡುವುದಕ್ಕೆ ನಾನು ತಯಾರಿಲ್ಲ. ಯಾರಾದರೂ ಬಂದು ನೀವು ತಪ್ಪಾಗಿ ನಡೆದಿದ್ದೀರಿ ಎಂದು ಹೇಳುವುದಾದರೆ ನಾನು ಪತ್ರಿಕೆಯಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದೇನೆ ಅದರಂತೆ ನಡೆದುಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ಇದು ದುರುದ್ದೇಶದಿಂದ ಕೂಡಿದೆ ಎಂದು ಯಾರೂ ಕೂಡ ತಪ್ಪಾಗಿ ಭಾವಿಸಬಾರದು. ಮೊಟ್ಟ ಮೊದಲನೆಯದಾಗಿ ಹೇಳುವುದಾದರೆ ತಮಗೆಲ್ಲರಿಗೂ ಗೊತ್ತಿರುವಂತೆ ರೇಷ್ಮೆ ಹುಳುವಿಗೆ ಕಣ್ಣಿಲ್ಲ. ಆದರೆ..............

ಶ್ರೀ ಎಂ. ಎಸ್. ಕೃಷ್ಣನ್.—ಕೆಲವರು ಕಣ್ಣಿದ್ದೂ ಕುರುಡರಾಗಿರುತ್ತಾರೆ.

ಶ್ರೀ ಕೆ. ಶ್ರೀರಾಮುಲು—ನಾನು ಇದೇ ವಿಷಯವನ್ನು ಹೇಳಬೇಕೆಂದಿದ್ದೆ ಈ ಕಣ್ಣಿಲ್ಲದ ರೇಷ್ಮೆ ಹುಳು ಸೊಪ್ಪನ್ನು ಚೆನ್ನಾಗಿ ತಿಂದು ತಾನು ಕಟ್ಟಿದ ಗೂಡಿನಲ್ಲಿ ತನ್ನ ಮರಣವನ್ನು ಹೊಂದುತ್ತದೆ. ಈ ರೀತಿ ಅದು ಮರಣ ಹೊಂದುವಾಗಲೂ ಕೂಡ ಕರ್ನಾಟಕದಲ್ಲಿ ಸುಮಾರು 25 ಲಕ್ಷ ಜನ ತಮ್ಮ ಜೀವನ ಮಾಡುವುದಕ್ಕೆ ಅನುಕೂಲವಾಗಲಿ ಎಂದು ಅವಕಾಶ ಮಾಡಿಕೊಟ್ಟು ಸಾಯುತ್ತದೆ. ಹುಳುವಿಗೆ ಕಣ್ಣಿಲ್ಲ, ರೈತನಿಗೆ ಬಾಯಿಲ್ಲ. ಕಣ್ಣೂ ಬಾಯಿ ಎರಡು ಇದ್ದು ತಲೆಯಲ್ಲಿ ಬುದ್ಧಿಯನ್ನೂ ಇಟ್ಟುಕೊಂಡಿರುವ ಜನ ಇದನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತಾರೆಂಬುದು ಇದರ ಚರಿತ್ರೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ವಿಚಾರ ಹೇಳುವುದಾದರೆ, ಧರ್ಮಾವರಂನಲ್ಲಿ ನೆಯ್ಗೆ ಕೆಲಸ ಮಾಡುವವರು ಒಂದು ದಿವಸಕ್ಕೆ ಒಂದು ಸೀರೆಯನ್ನು ನೇಯುತ್ತಾರೆ. ಆದೇ ನಮ್ಮ ಮೈಸೂರಿನಲ್ಲಿರುವ ಮುಡಿಗುಂದ ಕಾರ್ಖಾನೆಯಲ್ಲಾಗಲಿ, ಅಥವಾ ಕನಕಪುರದಲ್ಲಿರುವ ಕಾರ್ಖಾನೆಯಲ್ಲಾಗಲಿ ಒಂದು ದಿವಸಕ್ಕೆ ಎರಡು—ಎರಡೂವರೆ ಮೀಟರ್ ಕೂಡ ನೇಯುವುದಿಲ್ಲ. ಹಿಂದೆ ಸಿಲ್ಕ್ ಫಿಲೇಚರ್‌ನಿಂದ 500 ಗ್ರಾಂ ರೇಷ್ಮೆ ಬರುತ್ತಿದ್ದುದ್ದು ಈಗ 700-750 ಗ್ರಾಂ ಬರುತ್ತಿದೆ. ಉತ್ಪತ್ತಿ ಹೆಚ್ಚಿರುವುದರಿಂದ ಅವರಿಗೆ ನಾವು ತಾತ್ಕಾಲಿಕ ಪರಿಹಾರ 21 ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದು ನಾರಾಯಣ ಪೈ ಕಮಿಷನ್ ಶಿಫಾರಸ್ಸಿನಲ್ಲಿ ಇರಲಿಲ್ಲ ಇವರು ಸರಿಯಾಗಿ ಪ್ರೊಡಕ್ಷನ್ ಕೊಡದಿದ್ದರೆ ಇವರಿಗೆ ಹೇಗೆ ದುಡ್ಡನ್ನು ಹೆಚ್ಚಿಗೆ ಮಾಡುವುದು ಎಂದು ಆಯಾ ಫ್ಯಾಕ್ಟರಿ ಸಂಘದವರನ್ನು ಕರೆದು ಮಾತನಾಡಿದ್ದೇನೆ. ಇಲ್ಲಿ 2 ಸಂಘಗಳಿದ್ದು ಒಂದಕ್ಕೊಂದಕ್ಕೆ ಭಿನ್ನಾಭಿಪ್ರಾಯ ಇದೆ. ಇವತ್ತು ಚನ್ನಪಟ್ಟಣದಲ್ಲಿರುವ ಫ್ಯಾಕ್ಟರಿಯಲ್ಲಿ ಒಂದು ದಿವಸಕ್ಕೆ 16 ಮೀಟರ್ ಪ್ರೊಡಕ್ಷನ್ ಕೊಡುವ ಸಾಧ್ಯತೆ ಇದೆ. ಆದರೆ ಅವರು ಕೊಡುತ್ತಿರುವ ಕೇವಲ 8 ಮೀಟರ್‌ಗಳಷ್ಟು ಮಾತ್ರ. ಇದಕ್ಕೆ ಕಾರಣ ಏನೆಂದರೆ, ನಾವು ಫ್ಯಾಕ್ಟರಿ ಒಳಗಡೆ ಹೋದರೆ ಕಾರ್ಮಿಕರೂ ಒಳಗಡೆ ಕೆಲಸಮಾಡುತ್ತಾರೆ ನಾವು ಹೊರಗಡೆ ಹೋದರೆ ಅವರೂ ಕೂಡ ಹೊರಗಡೆ ಹೋಗುತ್ತಾರೆ. ಒಂದು ದಿವಸದಲ್ಲಿ 8 ಗಂಟೆ ಕೆಲಸ ನಡೆದರೆ ಅದರಲ್ಲಿ 4 ಗಂಟೆ ಪ್ರೊಡಕ್ಷನ್ ಮಾತ್ರ ಸಿಕ್ಕುತ್ತದೆ. ಇನ್ನುಳಿದ 4 ಗಂಟೆಗೆ ಪ್ರೊಡಕ್ಷನ್ ಬರುವುದಿಲ್ಲ. ಈ ವಿಷಯವನ್ನು ನಾನು ಅನೇಕ ಸಾರಿ ಹೇಳಿದ್ದೇನೆ. ಇವತ್ತು ಅಲ್ಲಿ ಅರ್ಧಕ್ಕರ್ಧ ಕೆಲಸಮಾಡುತ್ತಿಲ್ಲ. ಈ 3 ಕಾರ್ಖಾನೆಗಳಿಗೆ ಏನು ಕೊಡಬೇಕೋ ಅದನ್ನು ಕೊಡುತ್ತೇವೆ. ನಾವು ಬಂದಮೇಲೆ 10 ಕಾರ್ಖಾನೆಗಳ ಪೈಕಿ 5 ಕಡೆಗಳಲ್ಲಿ ಕಾರ್ಮಿಕರಿಗೋಸ್ಕರ ಕ್ಯಾಂಟೀನ್‌ಗಳನ್ನು ತೆರೆದಿದ್ದೇವೆ. ಅಲ್ಲಿ ಒಂದು ಊಟಕ್ಕೆ 25 ಪೈಸೆಯಿಂದ 60 ಪೈಸೆ ವರೆಗೆ ಛಾರ್ಜ್ ಮಾಡುತ್ತೇವೆ. ಅಂದರೆ ಸುಮಾರು 300 400 ಗ್ರಾಂವರೆಗೆ ಅನ್ನ, ಹಿಟ್ಟು ಸಂಬಾರ್ ಕೊಡುತ್ತಿದ್ದೇವೆ. ಅವರು 25 ಪೈಸೆ ಕೊಟ್ಟು ಊಟ ತೆಗೆದುಕೊಂಡು ಅವರು ತಿಂದು ಅವರಮಕ್ಕಳಿಗೂ ಕೊಡುತ್ತಿದ್ದಾರೆ.

ಅವರಿಗೆ ಎಷ್ಟು ತೊಂದರೆ ಇದೆ ಎಂದು ಹೇಳುವುದಾದರೆ ಮನೆಯಲ್ಲಿರತಕ್ಕಂಥ ಜನ ಎಲ್ಲರೂ ಬಂದು ಕ್ಯಾಂಟಿನ್‌ಗಳಲ್ಲಿ ಊಟಮಾಡುತ್ತಾರೆಂದು ಸ್ವಲ್ಪ ತಾವು ಯೋಚನೆ ಮಾಡಬೇಕಾಗುತ್ತದೆ. ಫ್ಯಾಕ್ಟರಿಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ 25 ರಿಂದ 70 ಪರ್ಸೆಂಟ್ ವರೆಗೆ ಟಿ. ಬಿ. ಮತ್ತು ಅಸ್ತ್ಮ ಕಾಯಿಲೆಯಿಂದ ನರಳತಕ್ಕಂಥ ಜನರು ಇರುತ್ತಾರೆ. ನಾನೇ ಖುದ್ದು ನೋಡಿದ್ದೇನೆ. ಒಳಗಡೆ ಮೂರು ಗಂಟೆಗಳ ಕಾಲ ನಿಂತುಕೊಂಡು ಸ್ಟೀಮ್‌ನಲ್ಲಿ ಕೆಲಸ ಮಾಡಿದರೆ ತಲೆ ಚಕ್ಕರ್ ಬರುತ್ತದೆ. ದಾರ ತೆಗೆಯುತಕ್ಕಂಥವರು ನಾಲ್ಕು ಗಂಟೆಗಳ ಕಾಲ ನಿಂತುಕೊಂಡೆ ಕೆಲಸ ಮಾಡಬೇಕಾಗಿರುತ್ತದೆ. ಅವರು ವಾರಕ್ಕೊಂದು ಸಲವಾದರೂ ಆಬ್ಸೆಂಟ್ ಆಗುತ್ತಾರೆ. ವಾರದಲ್ಲಿ 6 ದಿವಸಗಳೂ ಪೂರ್ತಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆಬ್ಸೆಂಟ್ ಆಗಲೇ

ಬೇಕಾಗುತ್ತದೆ. ಆದುದರಿಂದ ಈ ಮರಣ ನಿಧಿ ಯೋಜನೆಯನ್ನು ಆದಷ್ಟು ಜಾಗ್ರತೆಯಾಗಿ ಜಾರಿಗೆ ತರಬೇಕೆಂದು ಅಪೇಕ್ಷೆಪಟ್ಟಿದ್ದೇವೆ. ಕಾರ್ಮಿಕನು ಸತ್ತರೆ ಅವನ ಕುಟುಂಬಕ್ಕೆ 10 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಯೋಜನೆ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಟಿ. ಬಿ. ಕಡಿಮೆ ಮಾಡುವುದಕ್ಕೆ ಮೆಡಿಕಲ್ ಚೆಕಪ್ ರಿಪೋರ್ಟ್ ಇದೆಯೋ ರೆಗ್ಯುಲರ್ ಚೆಕಪ್ ಇದೆಯೋ. ಇದರ ಬಗ್ಗೆ ನಮ್ಮ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಪ್ರಯತ್ನ ಮಾಡಿದ್ದೀರಿ ?

ಶ್ರೀ ಕೆ. ಶ್ರೀರಾಮುಲು.—ಇದರ ಬಗ್ಗೆ ನಮ್ಮ ಆರೋಗ್ಯ ಮಂತ್ರಿಗಳಿಗೂ ಮತ್ತು ಶ್ರೀ ಬಿ. ಜಿ. ಬಣಕಾರ್‌ರವರಿಗೂ ಪತ್ರ ಬರೆದಿದ್ದೇವೆ, ಹಾಲನ್ನು ಕಾಸ್ಟ್ ಪ್ರೈಸ್‌ಗೆ ಕೊಡಬೇಕೆಂದು ಮತ್ತು ಟಿ. ಬಿ. ಎಲ್ಲ ಕಡೆ ಹರಡತಕ್ಕಂಥ ರೋಗ. ಅದನ್ನು ತಡೆಗಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದೇವೆ. ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಎಲ್ಲಕ್ಕಿಂತಲೂ ಮುಖ್ಯವಾದ ಪ್ರಶ್ನೆ ರೇಷ್ಮೆ ಕೈಗಾರಿಕೆಯದಾಗಿರುತ್ತದೆ. ದೇಶದಲ್ಲಿ ಉತ್ಪಾದನೆಯಾಗುವುದರಲ್ಲಿ 85 ಪರ್ಸೆಂಟ್ ನಮ್ಮಲ್ಲಿ ಉತ್ಪಾದನೆಯಾಗುತ್ತಿದೆ. ಕಳೆದ ವರ್ಷದಲ್ಲಿ ಸುಮಾರು ನಮ್ಮ ಕರ್ನಾಟಕದಲ್ಲಿಯೇ 9 ಲಕ್ಷ ಕೆ. ಜಿ. ರೇಷ್ಮೆ ಉತ್ಪಾದನೆಯಾಗಿದೆ. ಆಂಧ್ರದಿಂದ ಬರತಕ್ಕಂಥ ಸುಮಾರು ಒಂದು ಮುಕ್ಕಾಲು ಲಕ್ಷ ಕೆ. ಜಿ. ತಮಿಳುನಾಡಿನಿಂದ 34 ಸಾವಿರ ಕೆ. ಜಿ. ಇದೆಲ್ಲವೂ ಕರ್ನಾಟಕ ಉತ್ಪನ್ನಕ್ಕಿಂತ ಕಡಿಮೆ ಇರುತ್ತದೆ. ಇದರಿಂದ ದಿನನಿತ್ಯ ಬೆಲೆ ಕಡಿಮೆಯಾಗುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಯಾರು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಆಹಾರ ಪದಾರ್ಥಗಳ ಬಗ್ಗೆಯೂ ಕಳೆದ ವರ್ಷ ಇದೆ ಪ್ರಶ್ನೆ ಬಂದಿತು. ರಾಗಿಯ ಬೆಲೆ ಇಳಿದು ಹೋಯಿತು. ಸರ್ಕಾರವೇ ಇದನ್ನು ತೆಗೆದುಕೊಂಡು ರೈತರನ್ನು ಕಾಪಾಡಬೇಕೆಂದು ಹೇಳಿದರು. ಆದ್ದರಿಂದ ರೇಷ್ಮೆಯನ್ನು ಯಾರು ಉಪಯೋಗಿಸುವುದಕ್ಕೆ ಸಾಧ್ಯತೆ ಇದೆಯೋ ಅವರು ವರ್ಷಕ್ಕೆ ಇನ್ನೂರು ಮುನ್ನೂರು ರೂಪಾಯಿಗಳ ಬಟ್ಟೆಗಳನ್ನಾದರೂ ಉಪಯೋಗಿಸಿದರೆ ಆ ಕೈಗಾರಿಕೆಯನ್ನು ಅವಲಂಬಿಸಿರುವ 25 ಲಕ್ಷ ಜನರು ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಕೈಗಾರಿಕೆಯಲ್ಲಿ ಮಾತ್ರ ಯಾವುದೇ ಕೈಗಾರಿಕೆ ಕರ್ನಾಟಕದಲ್ಲಿರತಕ್ಕಂಥ ಜನಸಂಖ್ಯೆಯಲ್ಲಿ ಆರನೆ ಒಂದು ಭಾಗದಷ್ಟು ಜನರಿಗೆ ಕೆಲಸ ಮಾಡತಕ್ಕಂಥ ಸೌಲಭ್ಯವಿರುವುದಿಲ್ಲ. ಇದು ರೇಷ್ಮೆ ಇಲಾಖೆಗೆ ಮಾತ್ರ ಸಾಧ್ಯ. ಹೊರಗಡೆ ಇದನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಬೇಕೆಂದು ಹೇಳುತ್ತಾರೆ. ಹೊರಗಡೆಯಿಂದ ಬರತಕ್ಕಂಥ ಖರ್ಚು ಬಹಳ ಕಡಿಮೆ ಇರುತ್ತದೆ. ಆದರೆ ಪ್ರೊಡಕ್ಷನ್ ಜಾಸ್ತಿ ಇರುತ್ತದೆ. ಶ್ರೀ ಪುಟ್ಟಸ್ವಾಮಯ್ಯನವರು ಹೇಳಿದರು 40 ಬೇಸಿನ್‌ಗಳಲ್ಲಿ 4 ಜನ ಕೆಲಸ ಮಾಡತಕ್ಕಂಥ ಬೇಸಿನ್‌ಗಳನ್ನು ಏತಕ್ಕೆ ಹಾಕಬಾರದು ಎಂದು ಹೇಳುತ್ತಾರೆ. ಆಗ ಇನ್ನೂ ಜಾಸ್ತಿ ಪ್ರೊಡಕ್ಷನ್ ಆಗುತ್ತದೆ. ಆದುದರಿಂದ ಇದನ್ನು ಮಾಡಿದರೆ ನಿರುದ್ಯೋಗ ಹೆಚ್ಚಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕಾಫಿ ಬೆಳೆಯನ್ನು ನಿಗದಿ ಮಾಡಲು ಕಾಫಿ ಬೋರ್ಡಿಗೆ ವಿಹಿತ ಮಾಡಿದಂತೆ ರೇಶ್ಮೆ ಬೆಳೆಯನ್ನು ಮಾರ್ಕೆಟಿಂಗ್ ಬೋರ್ಡ್‌ಗೆ ಬಿಡುವುದು ವಿಹಿತವಲ್ಲವೆ. ಅಂಥ ಸುಧಾರಣೆಯನ್ನು ತರಲಿಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಶ್ರೀರಾಮುಲು.—ತಾವು ಹೇಳತಕ್ಕಂಥ ವಿಷಯ ಇಲ್ಲ ಬಂದಿವೆ. ಪೂರ್ತಿ ಭಾಷಣ ವಾದಮೇಲೆ ಇದರ ಬಗ್ಗೆ ಕೇಳಿ ವಿವರವನ್ನು ಹೇಳುತ್ತೇನೆ. ಈ ರೇಶ್ಮೆ ವ್ಯಾಪಾರವು ಕೆಲವರ ಕೈಯಲ್ಲಿ ಸೀಮಿತವಾಗಿದೆ. ಅಂಥವರು ಇಂಥವರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ಸದನದಲ್ಲಿ ಸದಸ್ಯರು ಹೇಳಲೇಬೇಕು ಎಂದರೆ ವಿವರವಾಗಿ ಹೇಳುತ್ತೇನೆ. ಮುನ್ನೂರಕ್ಕೂ ಹೆಚ್ಚು ಜನರು ಇದ್ದಾರೆ. ಶ್ರೀ ಬೈರೇಗೌಡರು ಒಂದು ಪ್ರಶ್ನೆಯನ್ನು ಕೇಳಿದರು, ಮತ್ತು ಶ್ರೀ ಟಿ. ರಾಮಣ್ಣನವರು ಒಂದು ಕಟ್‌ಮೋಷನ್ ಕಳುಹಿಸಿರುತ್ತಾರೆ. ದಿನನಿತ್ಯ ರೇಶ್ಮೆ ಬೆಲೆಯು ಇಳಿಯುತ್ತಿವೆ ಎಂದು. ಆದ್ದರಿಂದ ರೇಶ್ಮೆಯನ್ನು ಎಲ್ಲರೂ ಉಪಯೋಗಿಸುವುದಾದರೆ ರೈತರು ಕಷ್ಟಮಾಡಿ ಬಾರ ತೆಗೆಯುವ ಹವ್ಯಾಸಕ್ಕೆ ಹೋಗುತ್ತಾರೆ. ಆದರಿಂದ ಹೆಚ್ಚಿನ ಲಾಭವೂ ಬರುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಕಷ್ಟಪಟ್ಟು ಬೆಳೆದು ಅದನ್ನು ಬೇರೆಯವರಿಗೆ ಕೊಟ್ಟು ದುಡ್ಡು ಸಿಕ್ಕಲಿಲ್ಲವೆಂದು ಹೇಳಿದರೆ ಅದರಿಂದ ಏನು ಪ್ರಯೋಜನ. ಅದಕ್ಕೋಸ್ಕರ ಇಲಾಖೆ ವಹಿಸಿಕೊಂಡಮೇಲೆ ನಾನು ಮೊದಲನೆ ಪತ್ರವನ್ನು ಅಧ್ಯಕ್ಷರಿಗೆ 13-9-1976 ರಲ್ಲಿ ಬರೆದಿರುತ್ತೇನೆ

ಅದರಲ್ಲಿ ಏನು ಬರೆದಿರುತ್ತೇನೆಂದರೆ ಈ ಇಲಾಖೆಯು ಇಷ್ಟೊಂದು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣವೇನು. ಒಂದು ಕೋಟಿ ಹದಿಮೂರು ಲಕ್ಷ ರೂಪಾಯಿಗಳು 1975—76ನೇ ಸಾಲಿನಲ್ಲಿ ನಷ್ಟವಾಗಲು ಏನು ಕಾರಣ. ಯಾರು ಕಾರಣರು ಎಂಬುದಕ್ಕೆ ಸರಿಯಾದ ಕಾರಣವನ್ನು ಕೊಡಬೇಕೆಂದು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ ಮುಂದಿನ ನವೆಂಬರ್, ಡಿಸೆಂಬರ್ 76ರ ಒಳಗಾಗಿ ಉಂಟಾಗಿರುವ ನಷ್ಟವನ್ನು ಸರಿಪಡಿಸುತ್ತೇವೆ ಮತ್ತು ಅದಕ್ಕೆ ಕಾರಣವಾದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಪತ್ರ ಬರೆದಿದ್ದಾರೆ. ಡಿಸೆಂಬರ್ ತಿಂಗಳಲ್ಲಿ ವರದಿಯು ಬಂದಿದೆ. 5 ಕಾರ್ಖಾನೆಯಲ್ಲಿ ಲಾಭ ಬರುತ್ತಿದೆ ಎಂದು ಹೇಳಿರುತ್ತಾರೆ. ಈ ಮಹಾ ಸಭೆ ಯೋಚನೆ ಮಾಡಬೇಕು 460 ರೂಪಾಯಿ ಒಂದು ಕೇಜಿಗೆ ಹಿಂದೆ ಖರ್ಚುಮಾಡುತ್ತಿದ್ದುದು ಈಗ ನಾವು ಕ್ರಮ ತೆಗೆದುಕೊಂಡಮೇಲೆ 325 ರೂಪಾಯಿಗೆ ಬಂದಿದೆ ಎಂದರೆ 135 ರೂಪಾಯಿ ಕಡಿಮೆಯಾಯಿತು. ಇದು ನಿಜವಾಗಿಯೂ ನಷ್ಟವಾಗಿದ್ದರೆ ಇಷ್ಟರಮಟ್ಟಿಗೆ ಖರ್ಚು ಕಡಿಮೆಯಾಗುವುದಕ್ಕೆ ಕಾರಣವಿರುತ್ತಿರಲಿಲ್ಲ ಎಂದು ಯಾರಾದರೂ ಊಹಿಸಬಹುದು. ನನ್ನ ಪ್ರಕಾರ ಇನ್ನು 70 ರೂಪಾಯಿ ಒಂದು ಖರ್ಚು ಕೇಜಿಗೆ ಕಡಿಮೆ ಯಾಗುವುದಕ್ಕೆ ಸಾಧ್ಯವಿದೆ.

ಇನ್ನು ಈ ಇಲಾಖೆಯಲ್ಲಿ 1968ರಲ್ಲಿ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯಲ್ಲಿ ಟೆಕ್ನೀಶಿಯನ್ಸ್ ಅಂದಿನ ಮಂತ್ರಿಗಳ ಅಧ್ಯಕ್ಷರೆಯಲ್ಲಿ ಒಂದು ರಿಪೋರ್ಟ್ ಮಾಡಿದ್ದಾರೆ ಆ ರಿಪೋರ್ಟ್‌ನಲ್ಲಿ ಬಹಳ ಆಶ್ಚರ್ಯಕರಂದೊದ ಕೆಲವಾರು ವಿಷಯಗಳನ್ನು ತಿಳಿಸಿದ್ದಾರೆ. ಅದರಲ್ಲಿ ಏನು ಹೇಳುತ್ತಾರೆಂದರೆ 72 ಸಾವಿರ ಕೇಜಿ ಇಂದ 87 ಸಾವಿರ ಕೇಜಿ ಮಿನಿಮಮ್ ಟಾರ್‌ಜೆಟ್ ಎಕ್ಸಿಸ್ಟಿಂಗ್ ಎಲ್ಲಾ ಫ್ಯಾಕ್ಟರೀಸ್‌ಗಳದ್ದು ಸೇರಿ 1 ಲಕ್ಷ 77 ಸಾವಿರ ಕೇಜಿಯಷ್ಟು ಕಾರ್ಖಾನೆಗಳಲ್ಲಿ ತಯಾರು ಮಾಡಬೇಕೆಂದು ಎಕ್ಸ್‌ಪರ್ಟ್ಸ್ ಕೊಟ್ಟಿರುವ ಇನ್‌ಫರಮೇಷನ್. 1967-68ರಲ್ಲಿ 98,277 ಕೇಜಿ ಕೊಟ್ಟಿದ್ದಾರೆ ಇನ್ನೂ 70,000 ಕೇಜಿ ಕೊಡುವುದಕ್ಕೆ ಅವಕಾಶ ಇದೆಯೆಂದು ವರದಿಯಲ್ಲಿ ಇದೆ. ಮಾನ್ಯ ಷಟ್ಟಸ್ವಾಮಿಯವರು ಗಮನಿಸಬೇಕು ಏನೆಂದರೆ ನಾನು ನಮ್ಮ ಡೈರೆಕ್ಟರ್‌ರವರಿಗೆ ತಾರೀಖು 12-11-1976 ರಲ್ಲಿ ಒಂದು ಪತ್ರ ಬರೆದಿದ್ದೇನೆ. ಆ ಪತ್ರದ ಅರ್ಥ ಇಷ್ಟು, ಡೈರೆಕ್ಟರ್‌ರವರ ವರದಿಯಲ್ಲಿ 1972-73, 1973-74, 1974-75 ಈ 3 ವರ್ಷಗಳಲ್ಲಿ 13,58 9000 ರೂಪಾಯಿಗಳಷ್ಟು ಮುಗರಾಟವಾಗಿದೆ ಎಂದು ಇದೆ; ಫೆಡರೇಷನ್‌ನವರು ಕೊಟ್ಟಿರತಕ್ಕ ವರದಿಯಲ್ಲಿ 6,68 24,645 ರೂಪಾಯಿಗಳು 95 ಪೈಸೆ ಇಷ್ಟು ಮಾರಾಟವಾಗಿದೆ ಎಂದು ಕೊಟ್ಟಿದ್ದಾರೆ. ಇವೆರಡರಲ್ಲೂ ಅಜಗಜಾಂತರ ವ್ಯತ್ಯಾಸ ಇದೆ ಇದನ್ನು ಕ್ಲಾರಿಫೈ ಮಾಡಬೇಕೆಂದು ಹೇಳಿ 12-11-1976ರಲ್ಲಿ ಡೈರೆಕ್ಟರ್‌ರವರಿಗೆ ಒಂದು ಪತ್ರವನ್ನು ಬರೆದೆ. ದಿನಾಂಕ 3-12-1976 ರಲ್ಲಿ ಅಂಡರ್‌ಸೆಕ್ರೆಟರಿಯವರು ಡೈರೆಕ್ಟರ್‌ರವರಿಗೆ ವಿವರಣೆ ಕೇಳಿ ಈ ಬಗ್ಗೆ ಪತ್ರ ಬರೆದಿರುತ್ತಾರೆ. ಈ ಬಗ್ಗೆ ಡೈರೆಕ್ಟರ್‌ರವರಿಂದ ಇನ್ನೂ ನನಗೆ ವಿವರಣೆ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಫೆಡರೇಷನ್ ಕಡೆಯವರಿಂದ ಬಂದಿಲ್ಲವೇ ?

ಶ್ರೀ ಕೆ. ಶ್ರೀ ರಾಮುಲು.—ಡೈರೆಕ್ಟರ್ ಕಡೆಯಿಂದ ಈ ಬಗ್ಗೆ ವಿವರಣೆ ಬಂದಿಲ್ಲ. ನಮ್ಮ ಡೈರೆಕ್ಟರ್‌ರವರು ಅಲ್ಲಿ ಒಬ್ಬ ಮೆಂಬರ್ ಆಗಿರುವುದರಿಂದ, ಅವರಿಂದಲೇ ವಿವರಣೆಯನ್ನು ತೆಗೆದುಕೊಳ್ಳಬೇಕಾಗಿದೆ. ಇದರಲ್ಲಿ ಫೆಡರೇಷನ್‌ಗೆ ಯಾವುದೇ ಸಂಬಂಧ ಇಲ್ಲ.

5-00 P. M.

SRI KAGODU THIMMAPPA —That means the Director is not co-operating with you

ಶ್ರೀ ಕೆ. ಶ್ರೀರಾಮುಲು.—ಹಾಗೆ ಹೇಳುವುದಕ್ಕೆ ಬರುವುದಿಲ್ಲ.

SRI S. M. SHEERNALY CHANDRASHEKAR.—Is it fair on the part of the Government to disclose these things ?

ಶ್ರೀ ಕೆ ಶ್ರೀರಾಮುಲು.—ನಾನು ಹೇಳತಕ್ಕಂಥ ವಿಷಯಗಳು ರಿಕಾರ್ಡ್‌ನಲ್ಲಿ ಇದೆ. ಅದನ್ನು ಮಾತ್ರ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ತಮ್ಮ ಡೈರೆಕ್ಟರನ್ನು ಹದ್ದುಬಸ್ತಿನಲ್ಲಿ ಇಟ್ಟು ಕೊಳ್ಳದೇ ಇರತಕ್ಕಂಥ ಅಸಾಮರ್ಥತೆಯನ್ನು ತೋರಿಸುತ್ತದೆಯೋ ಅಥವಾ ಅವರ ಕಿವಿಯನ್ನು ಹಿಂಡುವ ಸಾಮರ್ಥ್ಯವನ್ನು ತೋರಿಸುತ್ತದೆಯೋ ಎಂಬುದು ನಮಗೆ ಗೊತ್ತಾಗಬೇಕು.

ಶ್ರೀ ಕೆ. ಶ್ರೀರಾಮುಲು.—ಅದನ್ನೆಲ್ಲಾ ಕೊನೆಯಲ್ಲಿ ಹೇಳೋಣ. ಇದರಲ್ಲಿ 6½ ಕೋಟಿ ರೂಪಾಯಿಗಳ ವ್ಯತ್ಯಾಸ ಇದೆ. ಈ ಬಗ್ಗೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಿದೆ. ಈ ಬಗ್ಗೆ ಇಲಾಖೆಯವರು 'ನೀವು ಹೇಳತಕ್ಕಂಥ ವಿಷಯ ಸರಿಯಾಗಿ ಇಲ್ಲ, ಇದು ನಿಜವಾದ ವಿಷಯ' ಎಂದು ಹೇಳಬಹುದಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ.— ಯಾರು ?

ಶ್ರೀ ಕೆ. ಶ್ರೀರಾಮುಲು.—ನಮ್ಮ ಇಲಾಖೆಯವರು ಹೇಳಬಹುದಾಗಿತ್ತು.

SRI S. M. SHEERNALY CHANDRASHEKAR.—The Hon'ble Minister is empowered to take action. I do not know why he is speaking like this.

ಶ್ರೀ ಕೆ. ಶ್ರೀ ರಾಮುಲು.—ಇದು ಬಹಳ ಗಮನಿಸಬೇಕಾದಂತಹ ಅಂಶ, ನಾನು ಆಗಲೇ ಇದರಲ್ಲಿ 6½ ಕೋಟಿ ರೂಪಾಯಿಗಳ ವ್ಯತ್ಯಾಸ ಬಂದಿದೆಯೆಂದು ಹೇಳಿದ್ದೇನೆ. ಇದು 1972-73 ರಲ್ಲಿ, 1973-74 ರಲ್ಲಿ ಮತ್ತು 1974-75ರಲ್ಲಿ ಎಷ್ಟು ಲಕ್ಷ ಕೇಜಿ ಕಕೂನ್ಸ್ ಅನ್ನು ತೆಗೆದು ಕೊಂಡಿದ್ದಾರೆ, ಅದರ ಬೆಲೆ ಎಷ್ಟು, ಅದರಲ್ಲಿ ಎಷ್ಟು ವರಮಾನ ಬಂದಿದೆ ಎಂಬುದನ್ನು ಇಲ್ಲಿ ಹೇಳುತ್ತಿದ್ದೇನೆ. ಅವರು 66, 51, 372 ಕೇಜಿ ಕಕೂನ್ಸ್ ತೆಗೆದುಕೊಂಡಿದ್ದಾರೆ. ಒಂದು ಕೇಜಿಗೆ 1972-73 ರಲ್ಲಿ ನನ್ನ ಪ್ರಕಾರ 10 ರೂ. 51 ಪೈಸೆ ಇತ್ತು ; ಡೈರೆಕ್ಟರ್‌ರವರ ಪ್ರಕಾರ 1 ಕೇಜಿಗೆ 10 ರೂ. 96 ಪೈಸೆ ಇತ್ತು. ಆದರೆ 35 ರೂ. ಮುಂತೆ ಒಂದು ಕೆ.ಜಿ.ಗೆ ಕೊಟ್ಟಂತಹ ಲೆಕ್ಕ ಇದೆ

ಶ್ರೀ ಕಾಗೋಡು ತಿಮ್ಮಪ್ಪ.—ನಿಮಗೆ ಈ ವರದಿ ಎಲ್ಲಿಂದ ಬಂತು ?

ಶ್ರೀ ಕೆ. ಶ್ರೀರಾಮುಲು.— ಅದನ್ನೆಲ್ಲಾ ಕೊನೆಯಲ್ಲಿ ಕೇಳಿ. ನಾನು ಮೊದಲೇ ಹೇಳಿದ್ದೇನೆ ಇದು ಅಂಕಿ ಅಂಶಗಳು ಎಂದು. ಆದ್ದರಿಂದ ಮಾನ್ಯ ಭೈರೇಗೌಡರು ಹಿಂದೆ ಈ ಬಗ್ಗೆ ಪ್ರಶ್ನೆ ಒಂದನ್ನು ಕೇಳಿದ್ದರು. ಅವರ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ. ಡೈರೆಕ್ಟರ್‌ರವರ ವರದಿ ಪ್ರಕಾರ ಒಂದು 1972-73ರಲ್ಲಿ ಕೇಜಿಗೆ 10 ರೂ. 96 ಪೈಸೆ ಆಗುವುದಾದರೆ ರೈತರಿಗೆ ಒಂದು ಕೇಜಿಗೆ 35 ರೂಪಾಯಿಗೆ ಕೊಟ್ಟಹಾಗೆ ಆಗಿರುತ್ತದೆ. 1973-74ರಲ್ಲಿ ಡೈರೆಕ್ಟರ್‌ರವರ ವರದಿ ಪ್ರಕಾರ ಒಂದು ಕೇಜಿಗೆ 15 ರೂ. 75 ಪೈಸೆ ಇದೆ. ನನ್ನ ಲೆಕ್ಕದ ಪ್ರಕಾರ ಒಂದು ಕೇಜಿಗೆ 15 ರೂ 46 ಪೈಸೆ ಇದೆ ಅವರ ವರದಿ ಪ್ರಕಾರ ರೈತರಿಗೆ ಒಂದು ಕೇಜಿಗೆ 46 ರೂಪಾಯಿನಂತೆ ನಂತೆ ಕೊಟ್ಟಹಾಗೆ ಆಗುತ್ತದೆ. ಈ ಪ್ರಕಾರ ಸುಮಾರು 11,19,57, 917-00 ರೂಪಾಯಿ ಗಳಷ್ಟು ರಾಮೆಟೀರಿಯಲ್ಸನ್ನು (ರೇಷ್ಮೆ ಗೂಡು) ಪರ್ಚೇಸ್ ಮಾಡಿದ್ದಾರೆ. ಇದರಲ್ಲಿ 11.55 ರೆಂಡಿಟ್ಟು ಅಷ್ಟು ಉತ್ಪತ್ತಿ ಆಗಬೇಕಾಗಿತ್ತು. ಅಷ್ಟು ಆಗಿಲ್ಲ. ಬ್ಯಾಲೆನ್ಸ್ ಷೀಟ್‌ನಲ್ಲಿ 1974-75 ರಲ್ಲಿ ಒಂದು ಕೇಜಿಗೆ 15.2 ರೆಂಡಿಟ್ಟು ಬರುತ್ತದೆಂದು ಹೇಳಿದ್ದಾರೆ ನನ್ನ ಲೆಕ್ಕದ ಪ್ರಕಾರ ಒಂದು ಕೇಜಿಗೆ 14.3 ರೆಂಡಿಟ್ಟು ಬರಬೇಕಾಗಿತ್ತು ಎಂದು ಫಿಗರ್ಸ್ ಕೊಟ್ಟಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಯಾವ ಬೇಸಿಸ್ ಮೇಲೆ ಕೊಟ್ಟಿದ್ದೀರಿ ?

ಶ್ರೀ ಕೆ. ಶ್ರೀರಾಮುಲು.—ಯಾವ ಬೇಸಿಸ್ ಎಂದರೆ ಒಳ್ಳೆಯ ರೇಷ್ಮೆ ಗೂಡು ಇದೆ. ಆದ್ದರಿಂದ ಒಂದು ಕೇಜಿಗೆ 8 7 ರೆಂಡಿಟ್ಟು ಬರುತ್ತದೆ. ಆಮೇಲೆ ಅವರು ಒಂದು ಕೇಜಿಗೆ 14 2 ರೆಂಡಿಟ್ಟು ತಯಾರು ಮಾಡಿದ್ದಾರೆ. ನಾನು ಒಂದು ಕೇಜಿಗೆ 14.3 ರೆಂಡಿಟ್ಟು ಅಲೋ ಮಾಡಿದ್ದೇನೆ. ಆದ್ದರಿಂದ ಸರಾಸರಿ ಒಂದು ಕೆ. ಜಿ. ರೇಷ್ಮೆಗೆ 11½ ರೆಂಡಿಟ್ಟು ಆಗಬೇಕಾಗಿತ್ತು. ಒಟ್ಟು 4,91,308 ಕೇಜಿ ತಯಾರಾಗಬೇಕಾಗಿತ್ತು. 1972-73ರಲ್ಲಿ 1,64,300 ಕೇಜಿ ತಯಾರಾಗಬೇಕಾಗಿತ್ತು. 1973-74 ರಲ್ಲಿ 1,62,708 ಕೇಜಿ ತಯಾರಾಗಬೇಕಾಗಿತ್ತು, 1974-75ರಲ್ಲಿ 1,64,300 ಕೇಜಿ ತಯಾರಾಗಬೇಕಾಗಿತ್ತು.

ಒಟ್ಟು 4,91,308 ಕೇಜಿಯಷ್ಟು ರೇಷ್ಮೆ ತಯಾರಾಗಬೇಕಾಗಿತ್ತು. ಇದರಲ್ಲಿ 11,19,57, 917 ರೂಪಾಯಿ ರೇಷ್ಮೆ ಗೂಡಿನ ಖರ್ಚು ಕಳೆದರೆ 95,24,457 ರೂಪಾಯಿಯಷ್ಟು ವ್ಯಾಪಾರದಿಂದ ಉಳಿತಾಯ ಇರಲೇಬೇಕು. ಈ ಬಗ್ಗೆ ರೇಟನ್ನು ಹೇಗೆ ಹಾಕಿಕೊಂಡಿರಿ ಎಂದು ಪ್ರಶ್ನೆ ಬರಬಹುದು. ಈಗಾಗಲೇ ಫೆಡರೇಷನ್ ಮುಖಾಂತರ ಮಾರಿರತಕ್ಕಂಥ ಆಧಾರದ ಮೇಲೆ ಯಾವ ರೇಟನ್ನು ಹಾಕಿಕೊಳ್ಳಬಹುದು ಎಂಬುದನ್ನು ತಿಳಿಸಿ ಎಂದು ರಿಜಿಸ್ಟ್ರಾರ್‌ರವರಿಗೆ ಪತ್ರ ಬರೆದು ಕೇಳಿದಾಗ, ಒಂದು ಕೇಜಿಗೆ ಸರಾಸರಿ ರೇಟ್ 268 ರೂ. ಬರುತ್ತದೆಂದು 21-6-1977 ರಲ್ಲಿ ಅವರು ರಿಪ್ಲೈ ಕೊಟ್ಟಿದ್ದಾರೆ ಈ ಒಂದು ಆಧಾರದ ಮೇಲೆ ತೆಗೆದುಕೊಂಡರೂ 95,24,457 ರೂಪಾಯಿಯಷ್ಟು ಉಳಿತಾಯ ಇರಲೇಬೇಕು. ಇದು ಸರಿಯೇ ಎಂದು ಯಾರಿಗಾದರೂ ಸಂಶಯ ಬರುತ್ತದೆ. ಅದಕ್ಕೋಸ್ಕರ ನಮ್ಮ ಇಲಾಖೆಯವರು ಕೊಟ್ಟಿರತಕ್ಕಂಥ ವರದಿಯಲ್ಲಿರುವ ವಿಷಯವನ್ನು ಹೇಳುತ್ತಿದ್ದೇನೆ. 1976-77 ರವರೆಗೆ 1, 30, 703 ಕೇಜಿಯಷ್ಟು ಒಂದು ವರ್ಷಕ್ಕೆ ಪ್ರೊಡಕ್ಷನ್ ಬಂದಿದೆ ಅಂದರೆ 1, 64, 000 ಕೇಜಿಗೆ 34,000 ಕೇಜಿ ಕಡಿಮೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—7 ಫಿಲೇಚರ್‌ಗಳಿಂದ ಇಷ್ಟು ಆಗಿದೆಯೇ ?

ಶ್ರೀ ಕೆ ಶ್ರೀರಾಮುಲು.-7ಫಿಲೇಚರ್‌ಗಳಿಂದ ಇಷ್ಟಾಗಿದೆ. ಇದರಲ್ಲೂ ಒಂದು ವಿಷಯ ಏನೆಂದರೆ 40 ಪರ್ಸೆಂಟ್ ಎಲೆಕ್ಟ್ರಿಸಿಟಿ ಕಟ್ ಇರುವುದರಿಂದ ಉಳಿಧಿರತಕ್ಕಂಥ ಪ್ರೊಡಕ್ಷನ್ ಬರಲಿಲ್ಲ ಎಂದು ನಾವು ತಿಳಿದುಕೊಳ್ಳಬಹುದು. ಈ ವರದಿಯಲ್ಲಿ ಒಂದು ವಿಶೇಷ ಇದೆ. ಇಲ್ಲಿ ಏನಾಗಿದೆ ಎಂದರೆ ಮಂತ್ರಿಗಳಿಗೇ ಒಂದು ವರದಿ ಮತ್ತು ಈ ಶಾಸನಸಭೆಗೆ ಒಂದು ವರದಿ ಆಗಿದೆಯಲ್ಲಾ ಎಂದು ನನಗೆ ಸಂಕಟವಾಗಿದೆ. ತಾರೀಖು 1-12-1976 ರಲ್ಲಿ 9 ತಿಂಗಳ ಪ್ರೊಡಕ್ಷನ್ ಕೊಟ್ಟಿರುವುದು 1, 23, 337 ಕೇಜಿ 674 ಗ್ರಾಂಸ್ ಎಂದರೆ ಇಲ್ಲಿ ಸುಮಾರು 7000 ಚಿಲ್ಲರೆ ಕೇಜಿಯಷ್ಟು ತಿಂಗಳಿಗೆ ವರದಿಯಲ್ಲಿ ಬಂದಿದೆ.

ಈ ವರದಿಯಲ್ಲಿರುವ ಪ್ರಕಾರ ತಿಂಗಳಿಗೆ 7ಸಾವಿರಕೆ.ಜಿ. ಪ್ರೊಡಕ್ಷನ್ ಬಂದರೆ ಮೂರುತಿಂಗಳಿಗೆ 21 ಸಾವಿರ ಕೆ.ಜಿ. ರೇಷ್ಮೆ ನೂಲು ಪ್ರೊಡಕ್ಷನ್ ಆದಂತಾಗುತ್ತದೆ ನನ್ನ ಪ್ರಕಾರ ಸರಾಸರಿ ಹತ್ತೂವರೆ ಸಾವಿರ ಕೆ.ಜಿ. ಒಂದು ತಿಂಗಳಿಗೆ ಪ್ರೊಡಕ್ಷನ್ ಬಂದರೆ 7 ಫ್ಯಾಕ್ಟರಿಯಿಂದ 31½ ಸಾವಿರ ಕೆ.ಜಿ. ಆಗುತ್ತದೆ. ಅದನ್ನು ಸೇರಿಸಿದರೆ 1,64,300 ಕೆ.ಜಿ. ಬಂದಿದೆಯೆಂಬುದು ಕೊಟ್ಟಿರತಕ್ಕ ವರದಿಯಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದನ್ನು ಯಾರು ಬೇಕಾದರೂ ನೋಡಬಹುದು. ಹಾಗಿಲ್ಲದಿದ್ದರೆ 9 ತಿಂಗಳಿಗೆ 1,23,337 ಕೆ. ಜಿ, ಬಂದಿದ್ದು ಮೂರು ತಿಂಗಳಿಗೆ 6 ಸಾವಿರ ಕೆ.ಜಿ. 7 ಸಾವಿರ ಕೆ.ಜಿ. ಕಾರ್ಖಾನೆಯಲ್ಲಿ ಬರಲು ಸಾಧ್ಯವಿಲ್ಲ. ಒಂದು ಕಾರ್ಖಾನೆಗೆ 350 ಕೆ.ಜಿ. ಬಂತು ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಆಧಾರದ ಮೇಲೆ ಫೆಡರೇಷನ್‌ಗೆ ಮಾರಿರತಕ್ಕ ರೇಷ್ಮೆ ನೂಲು ಎಷ್ಟು, ಅವರು ಕೊಟ್ಟಿರತಕ್ಕ ಹಣ ಎಷ್ಟು ಎಂದು ಕೇಳಿದ್ದೇನೆ. ದುರ್ದೈವ ನನಗೆ ಉತ್ತರ ಸಿಕ್ಕಿಲ್ಲ. ಫೆಡರೇಷನ್‌ನವರು ಅವರ ಆಡಿಟ್ ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಆದರೆ ನನಗೆ ಇಲಾಖೆಯಿಂದ ಉತ್ತರ ಸಿಕ್ಕಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಲಾಖೆ ಡೈರೆಕ್ಟರ್‌ರವರು ನಿಮ್ಮ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕೆ. ಶ್ರೀರಾಮುಲು.—ಇಲಾಖೆ ಡೈರೆಕ್ಟರಲ್ಲ. ಫೆಡರೇಷನ್ ಅಧ್ಯಕ್ಷರು. 6½ ಕೋಟಿ ರೂಪಾಯಿ ವ್ಯತ್ಯಾಸ ಬರುತ್ತದೆಂದು ಹೇಳಿದ್ದಾರೆ. ಜನರಲ್ ಮ್ಯಾನೇಜರ್‌ಗಳು ಕೊಟ್ಟಿರತಕ್ಕಂತೆ ಪ್ರೊಡಕ್ಷನ್ ವರದಿಯಲ್ಲೂ ಸರಿಯಾದ ಅಂಕಿ ಅಂಶಗಳನ್ನು ಕೊಟ್ಟಿಲ್ಲ. ಫೆಡರೇಷನ್‌ಗೆ 7 ಕಾರ್ಖಾನೆಯಿಂದ ಸಿಲ್ಕ್ ಮಾರಾಟ ಮಾಡುತ್ತಾರೆ ಅವರು ಕೊಟ್ಟಿರತಕ್ಕ ಪ್ರೊಡಕ್ಷನ್‌ಗೂ ನಮ್ಮ ಪ್ರೊಡಕ್ಷನ್‌ಗೂ ಹೋಲಿಕೆ ತೆಗೆದುಕೊಂಡರೆ 6,17,20 299 ರೂಪಾಯಿ ವ್ಯತ್ಯಾಸ ಬರುತ್ತದೆ. ಈ ವ್ಯತ್ಯಾಸ ಯಾತಕ್ಕೆ ಎಂದು ಕೇಳಿದ್ದೇನೆ. ಅದನ್ನು ಅವರು ತಿಳಿಸಬಹುದಾಗಿತ್ತು. ಹೋದ ನವೆಂಬರ್‌ನಲ್ಲಿ ಕೇಳಿದರೆ 8 ತಿಂಗಳಾದರೂ ಕೂಡ ವಿವರ ಕೊಡದೇ ಇದ್ದರೆ ಹೇಗೆ ! ಬೋರ್ಡ್ ಮೀಟಿಂಗ್‌ನಲ್ಲೂ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಆದರೂ ಅವರು ಗಣನೆಗೆ

ತೆಗೆದುಕೊಳ್ಳದೇ ಇದ್ದರೆ ತಾವು (ವಿರೋಧ ಪಕ್ಷದವರು) ನಿಮ್ಮ ಕೈಯಲ್ಲಿ ಏನೂ ಆಗಲಿಲ್ಲ ಎಂದು ಕೇಳುವುದು ಸಹಜ. ಮತ್ತು ನಾನು ಈ ಸ್ಥಾನದಲ್ಲಿರುವುದಕ್ಕೆ ಲಾಯಕ್ಕಿಲ್ಲ ಎಂದು ಹೇಳುತ್ತಿದ್ದೀರಿ. ನಾನು ಹೋಗುವುದಕ್ಕೆ ಸಿದ್ಧವಾಗಿದ್ದೇನೆ.

SRI KAGODU THIMMAPPA.—As Minister in-charge of the D part-ment you have po•ers to secure all the information. When you h ve failed to secure such i formation definetely the impression is th t you are inc mpetent to hold this Ministry.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾವು ಈಗ ಮಾನ್ಯ ಸಚಿವರಿಂದ ಉತ್ತರ ಕೇಳುತ್ತಿದ್ದೇವೆ. ಮಾನ್ಯ ಸದಸ್ಯರುಗಳ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಅಭಿಪ್ರಾಯಗಳನ್ನು ಕೊಟ್ಟು ಉತ್ತರ ಪಡೆಯತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ. ಈ ಇಲಾಖೆಯಲ್ಲಿ ರೇಷ್ಮೆ ನೂಲಿನ ವಿಷಯದಲ್ಲಿ ಲಕ್ಷಗಟ್ಟಲೆ ವ್ಯತ್ಯಾಸ ಬಂದಿರುವುದು ಗಹನವಾದ ವಿಷಯವೇ ಸರಿ ಇಲ್ಲ ಎಂದು ಯಾರೂ ಹೇಳುವುದಿಲ್ಲ. ಸದನಕ್ಕೂ ಕೂಡ ಮಾನ್ಯ ಮಂತ್ರಿಗಳು ಇನ್‌ಫರ್ಮೇಷನ್ ಕೊಟ್ಟಿದ್ದಾರೆ. ನಾನು ಆ ವಿಷಯಕ್ಕೆ ಅಡ್ಡ ಬರುವುದಿಲ್ಲ. ಪ್ರೊಡಕ್ಷನ್‌ನಲ್ಲಿ ಬೆಲೆಯಲ್ಲಿ ಮತ್ತೊಂದರಲ್ಲಿ ಅನೇಕ ವ್ಯತ್ಯಾಸಗಳಿರುವುದರಿಂದ ಸಹಜವಾಗಿ ಡೈರೆಕ್ಟರಿಗೂ ಮತ್ತು ಇವರಿಗೂ ಭಿನ್ನಾಭಿಪ್ರಾಯವಿರುತ್ತದೆ. ನಾನು ಹೇಳುವುದೇನೆಂದರೆ ಇದನ್ನು ಉದ್ದಕ್ಕೂ ಹೇಳುತ್ತಾ ಹೋಗುವುದರಲ್ಲಿ ಅರ್ಥವಿಲ್ಲ.

SRI KAGODU THIMMAPPA.—The Honourable Minister is trying to take the house into confi ence and wants to strengthen his hand.

ಶ್ರೀ ಎಸ್. ಬಂಗಾರಪ್ಪ.—ನಾನು ವಿಷಯವನ್ನು ಮುಚ್ಚಿಡಬೇಕು ಎಂಬ ಅಭಿಪ್ರಾಯವನ್ನು ಹೇಳುತ್ತಿಲ್ಲ. ಅಭಿಪ್ರಾಯ ವ್ಯತ್ಯಾಸಗಳು ಪ್ರತಿಯೊಂದು ವಿಷಯಗಳಲ್ಲೂ ಇರುತ್ತವೆ. ಈ ರೀತಿ ವ್ಯತ್ಯಾಸ ಬಂದಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ಸಾಕು. ಹೋಲಿಕೆಗಳು ಯಥೇಚ್ಛವಾಗಿರುತ್ತದೆ.

SRI KAGODU THIMMAPPA.—My Hon'ble friend is trying to prevent the Minister from comi g out with th truth. ಮಾನ್ಯ ಮಂತ್ರಿಗಳು ನಿಜವಾದ ವಿಷಯಗಳನ್ನು ಹೇಳುತ್ತಿದ್ದಾರೆ. ಮಧ್ಯದಲ್ಲಿ ಬಂಗಾರಪ್ಪನವರು ಅದನ್ನು ಹೇಳಬೇಡಿ ಎಂಬ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

MR. DEPUTY SPEAKER.—It is his opinion.

ಶ್ರೀ ಎಸ್. ಬಂಗಾರಪ್ಪ.—ಡೈರೆಕ್ಟರ್ ಅವರ ಅಭಿಪ್ರಾಯ ಸರಿ ಕಾಣವಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿದರೆ ಸಾಕು.

MR. DEPUTY SPEAKER.—No interruptions, please.

ಶ್ರೀ ಕೆ. ಶ್ರೀರಾಮುಲು.—ಪ್ರೊಡಕ್ಷನ್‌ನಿಂದ 6 1/4 ಕೋಟಿ ರೂಪಾಯಿ ವ್ಯತ್ಯಾಸ ಬರುತ್ತದೆಯೆಂದು ಹೇಳಿದೆ. ಇದನ್ನು ಡೈರೆಕ್ಟರ್ ಅವರು ಮಾಡಿದ್ದಾರೆ ಎಂಬುದು ಪ್ರಶ್ನೆಯಲ್ಲ. 72ನೇ ಇಸವಿಯಿಂದ ಆಗಿರತಕ್ಕ ವಿಷಯವನ್ನು ನಾನು ಹೇಳುತ್ತಿದ್ದೇನೆ. ಈ ಡೈರೆಕ್ಟರ್ ಬಂದಿದ್ದು 1976ರಲ್ಲಿ. ಆದ್ದರಿಂದ ಅವರು ಕೆಲವು ವಿಷಯಗಳನ್ನು ತಿಳಿಸಲಿಲ್ಲ. ಅದು ಬೇರೆ ವಿಷಯ. 99 ಸಾವಿರ ಮೀಟರ್ ರೇಷ್ಮೆ ಬಟ್ಟೆ ಉತ್ಪಾದನೆಯಾಗಿದೆ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ವರದಿ ಕೊಡುವುದಕ್ಕೆ ಮುಂಚೆ ನನ್ನನ್ನು ಕೇಳಿದ್ದರೆ ಒಳ್ಳೆ ವರದಿ ಕೊಡಿಸುತ್ತಿದ್ದೆ. ಅವರು ಆ ರೀತಿ ನಡೆದುಕೊಂಡಿಲ್ಲ ಎಂದು ಹೇಳಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾರು ಡೈರೆಕ್ಟರ್ ಅವರೆ ?

ಶ್ರೀ ಕೆ. ಶ್ರೀರಾಮುಲು.—ಹೌದು. 1966ನೇ ಇಸವಿಯಲ್ಲಿ ಅದೇ ಕಾರ್ಖಾನೆಯಲ್ಲಿ ಎಷ್ಟು ಪ್ರೊಡಕ್ಷನ್ ಬಂದಿದೆ ಎಂದು ಹೇಳುತ್ತೇನೆ 1,39,273 ಮೀಟರ್ಸ್ ಬಂದಿದೆ. ಆದ್ದರಿಂದ 99 ಸಾವಿರ ಮೀಟರ್‌ಗೆ ಸಂತೋಷಪಡಿಸಬೇಕಾದ ಅಗತ್ಯ ಏನೂ ಇಲ್ಲ. ಇನ್ನೂ 40 ಸಾವಿರ ಮೀಟರ್ ಕಡಿಮೆಯಾಗಿದೆ ಎಂದು ಪಶ್ಚಾತ್ತಾಪ ಪಡಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ಬಟ್ಟೆ ಬೆಲೆ ಯಾಕೆ ಜಾಸ್ತಿ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು. ಬಟ್ಟೆ ಸ್ಟಾಕ್ ಇದೆ. 1966-67ರಲ್ಲಿ ಕಡಿಮೆ ಪ್ರೊಡಕ್ಷನ್ ಆಯಿತು ಎಂದು ಹೇಳಿ ಒಂದು ಮೀಟರ್‌ಗೆ ಸುಮಾರು 7 ರೂಪಾಯಿ ಜಾಸ್ತಿ ಮಾಡಿದ್ದಾರೆ ಪ್ರೊಡಕ್ಷನ್ ಕಡಿಮೆ ಆಯಿತು ಆದ್ದರಿಂದ ಬಟ್ಟೆ ಬೆಲೆ ಜಾಸ್ತಿ ಆಯಿತು ಎಂದು ಹೇಳಿದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ರಾ ಮೆಟೀರಿಯಲ್ಸ್ ಬೆಲೆ ಜಾಸ್ತಿಯಾಯಿತು ಆದ್ದರಿಂದ ಬಟ್ಟೆ ಬೆಲೆ ಜಾಸ್ತಿಯಾಯಿತು ಎಂದು ಹೇಳಿದರೆ ನಾನು ಒಪ್ಪುತ್ತೇನೆ. ಆದರೆ ಅವರು ಹೇಳುವ ಕಾರಣವನ್ನು ಒಪ್ಪುವುದಕ್ಕಾಗುವುದಿಲ್ಲ ಪ್ರೊಡಕ್ಷನ್ ಕಡಿಮೆಯಾದ್ದರಿಂದ ಮೀಟರ್‌ಗೆ 7 ರೂಪಾಯಿನಂತೆ ಬಟ್ಟೆ ಬೆಲೆ ಜಾಸ್ತಿ ಮಾಡುತ್ತೇವೆ ಎಂದು ಹೇಳಿದರೆ ವಿಷಯ ಚೆನ್ನಾಗಿ ತಿಳಿದಿರುವವರು ಯಾರೂ ಒಪ್ಪುವುದಿಲ್ಲ. ಇದರಿಂದ ಏನೋ ನಡೆದಿದೆ ಎಂದು ಸಂಶಯ ಬರುವುದಕ್ಕೆ ಕಾರಣ ಇದೆ. ಇಲ್ಲ ಎಂದು ಹೇಳಿದರೆ ಈಗಲೂ ನನ್ನ ಹೇಳಿಕೆಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ. 1966ರಲ್ಲಿನ ಬ್ಯಾಲೆನ್ಸ್ ಷೀಟ್ ಪ್ರಕಾರ......

ಉಪಾಧ್ಯಕ್ಷರು.—ನಿಮಗೆ ಇನ್ನೂ ಎಷ್ಟು ಹೊತ್ತು ಬೇಕಾಗುತ್ತದೆ?

ಶ್ರೀ ಕೆ. ಶ್ರೀರಾಮುಲು.—ಇನ್ನೂ ಸ್ವಲ್ಪ ಜಾಸ್ತಿ ಸಮಯ ಬೇಕಾಗುತ್ತದೆ. ಇವತ್ತು ನಾನು ಹೇಳುವ ಮಾತನ್ನು ಸಾಬೀತು ಮಾಡದೇ ಇದ್ದರೆ, ನಾನು ಹೇಳಿದ್ದು ತಪ್ಪು ಎಂದು ಈ ಸಭೆ ತೀರ್ಮಾನ ಮಾಡುವುದಾದರೆ ನಾನು ನಾಳೆಯಿಂದ ಸಭೆಗೆ ಬರುವುದಿಲ್ಲ.

ಉಪಾಧ್ಯಕ್ಷರು.—ಇನ್ನೂ ಎಷ್ಟು ಹೊತ್ತು ಬೇಕು ಎಂಬುದನ್ನು ಹೇಳಿ.

ಶ್ರೀ ಕೆ. ಶ್ರೀರಾಮುಲು.—ಇನ್ನೂ ಒಂದು ಗಂಟೆ ಬೇಕು ಎಂದು ಹೇಳಿದ್ದೇನೆ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ಅಂಕಿ ಅಂಶಗಳನ್ನು ಹೇಳಬೇಕಾಗಿರುವುದರಿಂದ ಬೇಗ ಆಗುವುದಿಲ್ಲ. ವಿಷಯಗಳನ್ನು ಈ ಸಭೆಗೆ ತಿಳಿಸಬೇಕಾಗಿದೆ. 1964ನೇ ಇಸವಿಯಲ್ಲಿ ಆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಸಂಘದವರು ಅಂದಿನ ಜನರಲ್ ಮ್ಯಾನೇಜರ್ ಮೇಲೆ ಒಂದು ಚಾರ್ಜ್ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ಈ ಕಾರ್ಖಾನೆಯಲ್ಲಿ ಬಹಳ ಅನ್ಯಾಯವಾಗುತ್ತದೆ, ವರ್ಮಾ ಅಂಡ್ ಕಂಪನಿಯಿಂದ ಜರಿ ತೆಗೆದುಕೊಳ್ಳುತ್ತಿದ್ದಾರೆ, ಅದು ಜರಿ ತಯಾರು ಮಾಡತಕ್ಕ ಕಾರ್ಖಾನೆ ಅಲ್ಲ ಎಲ್ಲಿಂದಲೋ ತಂದು ಅವರು ಮಾರಾಟ ಮಾಡುತ್ತಾರೆ, ಅದು ಬಹಳ ಅನ್ಯಾಯ ಎಂದು ಕಾರ್ಮಿಕ ಸಂಘದವರು ಹಸ್ತಪ್ರತಿಗಳನ್ನು ಅಚ್ಚು ಮಾಡಿ ಹಂಚಿದ್ದಾರೆ ಆಗ ಅಷ್ಟು ಜನ ಕಾರ್ಮಿಕರನ್ನೂ ಅಂದಿನ ಜನರಲ್ ಮ್ಯಾನೇಜರ್ ಅವರು ಡಿಸ್‌ಮಿಸ್ ಮಾಡಿದರು. ವಿಚಾರಣೆಯಾಗಲಿಲ್ಲ ನಾನು ಬಂದ ಮೇಲೆ ಕಾರ್ಖಾನೆಗೆ ಹೋಗಿ ಮಾತನಾಡಿ 20 ಸಾವಿರ ರೂಪಾಯಿ ಕಾಂಪೆಂಸೇಷನ್ ಕೊಟ್ಟು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಮಾಡಿದೆ. ಮೂರು ಜನರನ್ನು ತೆಗೆದುಹಾಕಿದ್ದರು. ಇನ್ನೊಂದು ಕೇಸು ಹೈಕೋರ್ಟಿಗೆ ಹೋಗಿದೆ. ಇನ್ನು 1976ನೇ ಇಸವಿಯಲ್ಲಿ ಇವರು ಇತ್ತ ವರದಿಪ್ರಕಾರ ಅಲ್ಲೂ 10 ಜನ ಕಾರ್ಮಿಕರನ್ನು ಡಿಸ್‌ಮಿಸ್ ಮಾಡಿದ್ದಾರೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೆಲಸಕ್ಕೆ ತೆಗೆದುಕೊಳ್ಳಲು ಅಪ್ಪಣೆ ಮಾಡಿದರು, ನಾನೂ ಕೂಡ ಅಪ್ಪಣೆ ಮಾಡಿದೆ. ಆದರೆ ಅದನ್ನು ನಮ್ಮ ಡೈರೆಕ್ಟರ್ ನಾನು ಮಾಡಿದ ಅಪ್ಪಣೆ ಸರ್ಕಾರದ ಆರ್ಡರಲ್ಲವೆಂದು ಅದನ್ನು ವಾಪಸ್ ಕಳುಹಿಸಿಕೊಟ್ಟರು.

ಶ್ರೀ ಎಂ. ಎಸ್. ಕೃಷ್ಣನ್.—ಕೇವಲ ಅವರು ನೋಟೀಸ್ ಹಾಕಿದ್ದೇ ಕಾರಣವೇ ?

ಶ್ರೀ ಕೆ ಶ್ರೀರಾಮುಲು.—ಇರಬಹುದು ನಾನು ವಿವರವನ್ನು ಕೇಳಿದ್ದಕ್ಕೆ ಅದಕ್ಕೆ ಉತ್ತರ ಬಂದಿಲ್ಲ. ಆ ನೋಟೀಸಿನಲ್ಲಿ ಇರತಕ್ಕಂಥಾದ್ದು, ಅಲ್ಲಿ ಇರತಕ್ಕಂಥ ಜನರಲ್ ಮ್ಯಾನೇಜರ್ ರೇಷ್ಮೆ ಇಲಾಖೆಯ ಕಾರನ್ನು ಮಾರಾಟ ಮಾಡಿದರು. ಅದು ಯಾಗಿಗೆಂದರೆ ಆ ಇಲಾಖೆಯ ಮೇಸ್ತ್ರಿ ಮಗಳಿಗೆ. ಅದು ನ್ಯಾಯವಾಗಿ ಕಾನೂನಿನ ಪ್ರಕಾರ ಟೆಂಡರ್ ಕರೆದು ಆಕ್ಷನ್ ಮಾಡಬೇಕಾಗಿತ್ತು. ಮಾಡಲಿಲ್ಲ ಇದರಿಂದ ಕಾರ್ಖಾನೆ ಯಾವರೀತಿ ನಡೆಯುತ್ತಿದೆ ಎಂದು ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಹೇಳಿರುವ ಪ್ರಕಾರ ನೋಡುವುದಾದರೆ ಇದರಲ್ಲಿ ಸತ್ಯಾಂಶವಿದೆ ಎಂದು ಗೊತ್ತಾಗುತ್ತದೆ.

ಶ್ರೀ ಕೆ ಶ್ರೀರಾಮುಲು.—ಇನ್ನು ಒಂದು ವಿಷಯ ಮುಖ್ಯವಾದದ್ದು ಎಂದರೆ ಕಾರ್ಖಾನೆಯೊಳಗೆ 71-7 ರ ವರೆವಿಗೆ ಬಟ್ಟೆ ಬೆಲೆ ಜಾಸ್ತಿ ಮಾಡಿಲ್ಲವೆಂದು ಡೈರೆಕ್ಟರಿಂದ ವರದಿ ಬಂತು. ಈ ಡೈರೆಕ್ಟರ್ ಕೊಟ್ಟಿರತಕ್ಕಂಥ ವರದಿ ಮತ್ತು ಕಳುಹಿಸಿರತಕ್ಕಂಥ ಲೆಕ್ಕದಲ್ಲಿ ಜನರಲ್ ಮ್ಯಾನೇಜರ್ ಕೊಟ್ಟಿರತಕ್ಕಂಥ ಅಂಕಿಅಂಶಗಳು ಯಾವ ಯಾವ ವರ್ಷದಲ್ಲಿ ಬಟ್ಟೆ ಬೆಲೆ ಜಾಸ್ತಿಯಾಗಿದೆ ಎಂದು ಕೇಳಿದರೆ 1970-71ರಲ್ಲಿ ಮೀಟರ್‌ಗೆ 41 ರೂ. 1971-72ರಲ್ಲಿ 78 ರೂ. 1972-73ರಲ್ಲಿ 59 ರೂ. 18 ಪೈ. 1973-74ರಲ್ಲಿ 81 ರೂ 34 ಪೈ. ಎಂದು ತಿಳಿಸಿರುತ್ತಾರೆ. ಇದನ್ನು ನೋಡಿದರೆ ಪಶ್ಚಾತ್ತಾಪ ಪಡುವಂತಹ ವಿಷಯ ಡೈರೆಕ್ಟರ್ ಒಂದು ವರದಿ ಮತ್ತು ಜನರಲ್ ಮ್ಯಾನೇಜರ್ ಒಂದು ವರದಿ ಕೊಟ್ಟರೆ ನಾವು ಯಾವ ತೀರ್ಮಾನಕ್ಕೆ ಬರಬೇಕು ಎಂದು ಹೇಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳುತ್ತಿರುವ ವಿಷಯ ಬಹಳ ಗಹನವಾದ ವಿಷಯವಿದೆ. ಕೊನೆಗೆ ಮಂತ್ರಿಗಳು ಡಿಮಾಂಡ್ ತೆಗೆದುಕೊಳ್ಳುವುದಕ್ಕೆ ಹಿಂದೆ ಏನು ನಡೆದಿದೆ 76-77ರಲ್ಲಿ ನಡೆದಿದ್ದಲ್ಲ. ಸುಮಾರು 10-12 ವರ್ಷಗಳ ಹಿಂದೆ ನಡೆದಿರತಕ್ಕಂಥಾದ್ದು ?

ಶ್ರೀ ಕೆ. ಶ್ರೀರಾಮುಲು.—ಈ ಕಾರ್ಖಾನೆಯಲ್ಲಿ ಸುಮಾರು 7 ಕೋಟಿಗೆ ಮೇಲ್ಪಟ್ಟು ರೂಪಾಯಿಗಳು ನಷ್ಟವಾಗಿದೆ. ಇದು ಆಗಿದೆಯೋ ? ಇಲ್ಲವೇ ನಾವು ನೋಡಬೇಕಾಗಿದೆ. ನಮ್ಮ ಡೈರೆಕ್ಟರ್ ಹೇಳುತ್ತಾರೆ ಒಂದು ಕೆ ಜಿ. ರೇಷ್ಮೆಗೆ 11 ಮೀಟರ್ ಬಟ್ಟೆ ಎಂದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಈ ಸಭೆಯ ಸಮಯವನ್ನು ಉಳಿಸುವ ದೃಷ್ಟಿಯಿಂದ ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಶ್ರೀರಾಮುಲು.—ಈಗ ಒಂದು ವಿಷಯ ಹೇಳುತ್ತೇನೆ. ಈಗ 10 ಜನರನ್ನು.....

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳು ತಮ್ಮ......

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಅಧ್ಯಕ್ಷರೇ, ಈ ಹೇಳಿಕೆಯ ವಿಷಯವನ್ನು ಸರಿಯಾಗಿ ತೋರಿಸುವುದಕ್ಕೆ ಹೇಳಿಕೆಯನ್ನು ಕೊಡುತ್ತಿದ್ದೇನೆ. ಯಾರಿಗೂ ಇದರಲ್ಲಿ ಸಂಶಯ ಬೇಡ. ನಮ್ಮ ಪ್ರೊಡಕ್ಷನ್ 99 ಸಾವಿರ 92 ರೂಪಾಯಿ ಅವರೇಜ್ ಮೀಟರ್‌ಗೆ ರೇಟು ಮಾಡಿದರೆ ಅದು ಹೇಗೆ ನಷ್ಟವಾಗುತ್ತದೆ ? ನಮ್ಮ ಡೈರೆಕ್ಟರ್ ಹೇಳುತ್ತಿರುವುದು ಸುಳ್ಳು ಅಥವಾ ತಪ್ಪು ಎಂದು ಇಲ್ಲಿ ನೋಡುತ್ತಿಲ್ಲ. ಇದು ಹೇಗೆ ಎಂದು ತಿಳಿದುಕೊಳ್ಳಬೇಕಾಗಿದೆ. ನನ್ನ ವರದಿ ಅಂದರೆ ಮಿನಿಸ್ಟರ್ ಬಗ್ಗೆ ಕಾಂಟ್ರವರ್ಷಿಯಲ್ ಸ್ಟೇಟ್‌ಮೆಂಟ್ ಕೊಡಬೇಕಾಗಿತ್ತೇ ? ಈ ರೀತಿಯಲ್ಲಿ 11 ಮೀಟರ್ ಒಂದು ಕೇಜಿಗೆ ಆದರೆ 21.2 ಮೀಟರ್ ಲೆಕ್ಕ ಮಾಡುವುದಕ್ಕೆ ನನ್ನ ಹತ್ತಿರ ಅವರು ಒದಗಿಸಿರತಕ್ಕಂಥ ಅಂಕಿ ಅಂಶಗಳನ್ನು ನೋಡಿದರೆ ಕಾಟನ್ ವೀವಿಂಗ್ ಫ್ಯಾಕ್ಟರಿಯಲ್ಲಿ ನಾನು ಕಾರ್ಮಿಕನಾಗಿದ್ದರಿಂದಲೇ ಸಿಲ್ಕ್ ಬಗ್ಗೆ ಈ ರೀತಿ ವರದಿಗಳನ್ನು ಕೊಡುತ್ತಾ ಇರುವುದು ಎಂದು ಟೀಕೆ ಮಾಡುವ ರೀತಿಯಲ್ಲಿ ಪತ್ರ ಬರೆಯುತ್ತಿದ್ದಾರೆ. ನನಗೆ ಮಂತ್ರಿ ಪದವಿ ಮುಖ್ಯವಲ್ಲ. ಮನುಷ್ಯನಿಗೆ ಆತ್ಮಗೌರವ ಮುಖ್ಯ. ಅದು ಇಲ್ಲದೆ ಹೋದರೆ ಹೇಗೆ ? ಅವರು ಹಾಲಿ ಕೊಟ್ಟಿರತಕ್ಕಂಥ ಪ್ರಕಾರ ನೋಡಿದರೆ ಮೀಟರ್ ಒಂದಕ್ಕೆ 44 ರೂಪಾಯಿ ಎಂದು ವ್ಯತ್ಯಾಸವನ್ನು ನೋಡಿದರೆ ಪ್ರತಿಯೊಂದನ್ನು ಹೀಗೆ ತೆಗೆದುಕೊಂಡರೆ ಒಂದು ರೂಪಾಯಿ 28 ಪೈಸೆ ಪರ್ ಗ್ರಾಮ್ ಆಗುತ್ತದೆ. ಹಾಗೆಂದರೆ 10 ಸಾವಿರ ಕೇಜಿಗೆ ಎಷ್ಟು ಗ್ರಾಮ್ ಆಗುತ್ತದೆ ? ನೀವು ಹೇಳಿ ಅದರಲ್ಲಿ ಅಂಟು ಇರುತ್ತದೆ ಅದನ್ನು ತೆಗೆಯಬೇಕು ಎಂದರೆ 2 2 ಬಿಟ್ಟು ಹೋಗುತ್ತದೆ ಇದು ಅವರು ಕೊಟ್ಟಿರುವ ವರದಿ ಪ್ರಕಾರ ರೇಷ್ಮೆ ಬೆಲೆ ಎರಡು ನೂರು ರೂಪಾಯಿಗಳು ಕೆ.ಜಿ.ಗೆ ಇದ್ದರೆ ರಾ ಮೆಟೀರಿಯಲ್ ಕೇಜಿಗೆ 380 ರೂಪಾಯಿ 180 ರಿಂದ ಜಾಸ್ತಿ ಮಾಡಿದರೆ ಈ ದುಡ್ಡು ಯಾರಿಗಾ ಹೋಗುತ್ತದೆ ? ನೀವೇ ಹೇಳಿ. ಒಂದು ಕಡೆ ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅನೇಕ ಕಡೆ ಹೇಳಿರುತ್ತಾರೆ. ಇದು 7 ಕೋಟಿಯಲ್ಲ. ಇನ್ನು ಮುಡಿಗುಂಡಲ ಫ್ಯಾಕ್ಟರಿಯಲ್ಲಿ ರೇಶ್ಮೆ ಎಷ್ಟು ಬಳಸುತ್ತಿದ್ದಾರೆ, ಕೂಲಿ ಎಷ್ಟು ಕೊಡುತ್ತಾರೆ ಈ ಕಾಸ್ಟ್‌ಶೀಟ್ ಹಾಕಿರತಕ್ಕಂಥ 1450 ಗ್ರಾಮಿಗೆ 33.2 ಬಟ್ಟೆ ಮಾಡಿದರೆ 20 ಮೀಟರ್‌ನಿಂದ ಬರುವುದಿಲ್ಲ ಎಂದು ಹೇಗೆ ಹೇಳುತ್ತೀರಿ ?

ನಾನು ಯಾವ ಫ್ಯಾಕ್ಟರಿಯ ಮೇಲೆ ಹೇಳುತ್ತಿದ್ದೇನೆ. ಈ ಮುಡಿಗುಂಡಲ ಫ್ಯಾಕ್ಟರಿ, ಮತ್ತು ಕನಕಪುರದಲ್ಲಿ ಮತ್ತು ಮೈಸೂರು ವೀವಿಂಗ್ ಫ್ಯಾಕ್ಟರಿಯಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿದೆಂದು ಹೇಳುತ್ತೇನೆ. ಕಾಸ್ಟ್ ಶೀಟ್ ಒಂದು ರಿಕಾರ್ಡನ್ನಾದರೂ ಮೈಸೂರು ವೀವಿಂಗ್ ಫ್ಯಾಕ್ಟರಿಯವರು ಕೊಡುತ್ತಾರೆಯೇ ? ಮೇಂಟೇನ್ ಮಾಡಿದ್ದಾರೆಯೇ ? ಆ ರೀತಿ ಮೇನ್‌ಟೇನ್ ಮಾಡದೇ ಇದ್ದಾಗ ಯಾವ ವರದಿಯನ್ನು ನ್ಯಾಯವಾದಂಥ ವರದಿಯೆಂದು ತೆಗೆದು ಕೊಳ್ಳಲಿ ? ಯಾವ ಕಾರಣದಿಂದರೇ ಆಗಲಿ ಈ ಕಾಸ್ಟ್ ಲಿಸ್ಟನ್ನು ಮೇನ್‌ಟೇನ್ ಮಾಡಲೇಬೇಕು.

5-30 P.M.

SRI S. BANGARAPPA.— The Hon. Ministe· is explaining the departmental activities and lapses. As a Minis'er what action the Hon. Minister has taken in those matters?

SRI KAGODU THIMMAPPA,— Why the Hon. Member is interfering in the middle when the Hon. Minister is explaining the truth.

SRI S. M. SHEERNALI CHANDRASHEKHAR.— I doubt whether he is replying as a Minister or not ?

ಉಪಾಧ್ಯಕ್ಷರು.— ಮಂತ್ರಿಗಳವರ ಉತ್ತರವಾದ ಮೇಲೆ ಏನು ಬೇಕಾದರೂ ತಾವು ಕೇಳ ಬಹುದು. ದಯವಿಟ್ಟು ಕುಳಿತುಕೊಳ್ಳಿ.

(ಮಧ್ಯೆ ಹಲವಾರು ಸದಸ್ಯರುಗಳನ್ನು ಎದ್ದು ನಿಂತುಕೊಂಡು ಮಾತ ನಾಡಲು ಶುರು ಮಾಡಿದಾಗ, ಯಾರ ಮಾತೂ ಸ್ಪಷ್ಟವಾಗಿ ಕೇಳಿ ಬರು ತ್ತಿರಲ್ಲಿಲ್ಲ)

ಶ್ರೀ ಬಿ ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳವರು ಸತ್ಯವನ್ನು ಬಿಚ್ಚಿ ಹೇಳುತ್ತಿದ್ದಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ನನಗೆ ವಿರೋಧ ಪಕ್ಷದ ಮಂತ್ರಿಗಳವರೇ ಉತ್ತರ ಕೊಡುತಿ ದ್ದಾರೇನೋ ಎನ್ನುವ ಅನುಮಾನ ಬರುತಿ ದೆ.

ಶ್ರೀ ಎಂ, ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳವರು ಬಹಳ ಗಂಭೀರವಾದ ಮಾತನ್ನು ಹೇಳಿದರು. ನಾನು ಒಬ್ಬ ಟೆಕ್ಸ್‌ಟೈಲ್ ಕಾರ್ಮಿಕನಾಗಿದ್ದುದರಿಂದ, ನನ್ನನ್ನು ಅವಹೇಳನ ಮಾಡುವ ರೀತಿಯಲ್ಲಿ ಅಧಿಕಾರಿಗಳು ವರ್ತನೆ ಮಾಡಿದ್ದಾರೆ ಎಂದು ಹೇಳಿದರು. ಅವರ ಮಾತಿನಲ್ಲಿ ನನಗೆ ಏನು ಕಂಡು ಬರುತ್ತಿದೆ ಎಂದರೆ, ಹಾಗೆ ಹೇಳಿರುವುದರಿಂದ ಸಾಬೀತು ಮಾಡಬೇಕು ಎನ್ನುವ ಜವಾಬ್ದಾರಿ ಇರುವುದರಿಂದ ಅವರಿಗೆ ಪೂರ್ತಿ ಆ ವಿಷಯದ ಬಗ್ಗೆ ಹೇಳುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ. ಶ್ರೀರಾಮುಲು.— ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯುವರೂ ಕೂಡ ಯಾವ ರಿಮಾರ್ಕ್ಸ್ ಪಾಸ್ ಮಾಡಿಲ್ಲ ಆದುದರಿಂದ ನಿಮ್ಮ ಹೇಳಿಕೆಯಲ್ಲಿ ನಿಜವಿಲ್ಲವೆನ್ನುವ ಅರ್ಥವಾಗು ತ್ತದೆಂದು ಅಧಿಕಾರಿಗಳು ಹೇಳುತ್ತಾರೆ ಬಹುಶಃ ಪಿ. ಎ. ಸಿ. ಕಮಿಟಿಯವರಿಗೆ ವಿನಯದಿಂದ ಕೇಳಿಕೊಳುತ್ತೇನೆ. ಅವರಿಗೆ ಈ ಟೆಕ್ಸ್‌ಟೈಲಿನ ಟೆಕ್ನಿಕ್ಸ್ ಪೂರ್ತಿಯಾಗಿ ಗೊತ್ತಿಲ್ಲವೆಂದು ಕಾಣುತ್ತದೆ ಗೊತ್ತಿದ್ದರೆ ಬಹುಶಃ ಅವರೂ ಈ ಅಪಾದನೆ ಮಾಡುತ್ತಿದ್ದರೊ ಏನೋ......!

(ಮಧ್ಯೆ ನಗು............)

ಶ್ರೀ ಎಚ್. ಡಿ. ದೇವೇಗೌಡ.— ಈ ಸಭೆಯಲ್ಲಿ ಅವರು ಹೇಳಿರುವುದನ್ನು ಲಘುವಾಗಿ ತೆಗೆದು ಕೊಳ್ಳಬೇಕಾದ ಅಗತ್ಯವಿಲ್ಲ. ಮಾನ್ಯ ಶ್ರೀರಾಮುಲುರವರು. ಪಿ.ಎ.ಸಿ. ಕಮಿಟಿಯವರು ಅದನ್ನು ಪತ್ತೆ ಹಚ್ಚದೆ ಲೋಪ ಮಾಡಿದ್ದಾರೆಂದು ಏನು ಹೇಳಿದರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಹೇಳಿದ ಹಾಗೆ ಯಾವುದೇ ವಿಷಯದ ಬಗ್ಗೆ ಆಳವಾಗಿ ಅಧ್ಯಯನ ಮಾಡದೇ ಅದರಲ್ಲಿರ ತಕ್ಕಂಥ ಲೋಪವನ್ನು ಕಂಡು ಹಿಡಿಯುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ವಿಧಾನ ಮಂಡಲದ

ಸಮಿತಿಗಳು ಅವರ ಇತಿಮಿತಿಯೊಳಗೇ ಕೆಲಸ ಮಾಡಬೇಕಾಗಿ ಬರುತ್ತದೆ. ಎಲ್ಲಾ ಇಲಾಖೆಯಲ್ಲೂ ನಡೆಯತಕ್ಕ ಅವ್ಯವಹಾರಗಳನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡುವುದಕ್ಕೆ ಕಾಲ ಕೂಡ ಇರುವುದಿಲ್ಲ ಅದು ಮಾನ್ಯ ಮುಖ್ಯಮಂತ್ರಿಗಳವರಿಗೂ ಗೊತ್ತಿದೆ ಹಿಂದೆ ಆಗಿರಬಹುದಾದಂಥ ಅವ್ಯವಹಾರಗಳನ್ನು ನೋಡುವುದಕ್ಕೆ ಹೋದರೆ ಬಹುಶಃ ದಿನಗಟ್ಟಲೆ ಕೊಡಬೇಕಾಗಿ ಬರುತ್ತದೆ. ಇವತ್ತು ಪಿ.ಎ.ಸಿ. ಕಮಿಟಿಯವರು ಆಗಲೀ, ಅಥವಾ ಸಬಾರ್ಡಿನೇಟ್ ಕಮಿಟಿಯವರು ಆಗಲಿ ಮತ್ತೆ ಇನ್ಯಾವ ಕಮಿಟಿಯವರೇ ಆಗಲೀ ಹೇಳಲಿಲ್ಲವೆಂದು ಅಧಿಕಾರಿಗಳನ್ನು ಸ್ವೇಚ್ಛಾಪ್ರವೃತ್ತಿಯಿಂದ ಬಿಡುವುದಕ್ಕೆ ಸಾಧ್ಯವಿಲ್ಲ.

SRI D. DEVARAJ URS.— Let us not go into the matter deeper. The Minister has got certain things to say, he is telling. Suppose he wants to indict the Director the concerned Director is not before us. If the Committee wants to take it up it can take up the matter. Here we are hearing only one side version. If the Minister wants to say anything let him say. As I know the Director has hot openly criticised in the press.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಮಂತ್ರಿಗಳವರು ಸಂಬಂಧಪಟ್ಟಂತೆ ಇಲಾಖೆಯಲ್ಲಿ ಆಡಳಿತ ನಿರ್ವಹಣೆ ಮಾಡಿರತಕ್ಕ ಕಾಲದಲ್ಲಿ ಏನೇನು ಸತ್ಯಾಂಶಗಳನ್ನು ಅವರು ಕಂಡು ಹಿಡಿದಿದ್ದಾರೆ ಅದನ್ನು ಅವರು ಇವತ್ತು ಸಭೆಯ ಮುಂದಿಟ್ಟಾಗ್ಯೂ ಕೂಡ ಆ ವಿಷಯಗಳನ್ನೆಲ್ಲಾ ಪಿಎಸಿ ಕಮಿಟಿಯವರಿಗಾಗಲೀ ಅಥವಾ ಪಿಯು.ಸಿ. ಕಮಿಟಿಯವರಿಗಾಗಲೀ ರೆಫರ್ ಮಾಡಬಹುದು.

SRI D. DEVARAJ URS.— The Committees themselves have the right to take up this matter. Either this committee or that committee can take up.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಸಚಿವರು ಪೂರ್ಣವಾಗಿ ಪರಿಶೀಲನೆ ಮಾಡಿಲ್ಲವೆಂದು ಹೇಳಿದ್ದಾರೆ. ಇನ್ನೊಂದು ವಿಷಯವನ್ನು ಅವರು ಹೇಳಿರುವುದೇನೆಂದರೆ ಜುಡಿಶಿಯಲ್ ಪ್ರೋಬ್ ಮಾಡುವ ಬಗ್ಗೆ ನಿರ್ಣಯ ಮಾಡತಕ್ಕದರ ಬಗ್ಗೆ ನನ್ನ ಅಭಿಪ್ರಾಯವಿದೆ ಎಂದೂ ಈ ಸದನದಲ್ಲಿಯೇ ಹೇಳಿದ್ದಾರೆ. ಆದುದರಿಂದ ಮಂತ್ರಿಗಳವರು ಅದರ ಪೂರ್ಣ ವಿವರವನ್ನು ಸದನದಲ್ಲಿ ಇಡುವುದಕ್ಕೆ ಅವಕಾಶವಿರುವುದರಿಂದ, ನಾನು ಹೇಳುತ್ತೇನೆ ಅದನ್ನು ಪಿಎಸಿ. ಅಥವಾ ಬೇರೆ ಇನ್ನು ಯಾವುದಾದರೂ ಸಮಿತಿಗೆ ರೆಫರ್ ಮಾಡುವುದು ಉತ್ತಮ ಇದರಲ್ಲಿ ಮಾನ್ಯ ಸಚಿವರು ಹೇಳಿದ ಹಾಗೆ ಇದು ಟೆಕ್ನಿಕಲ್ ಆಸ್ಪೆಕ್ಟ್‌ಗೆ ಸಂಬಂಧಪಟ್ಟಿರುವುದರಿಂದ ಪಿಎಸಿ. ಕಮಿಟಿಯಲ್ಲಿರುವ ಸದಸ್ಯರೆಲ್ಲರೂ ಅಷ್ಟೊಂದು ಆಳವಾದ ಅನುಭವವನ್ನು ಅದರಲ್ಲಿ ಪಡೆದಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ-ಅವರು ಹೇಳುತ್ತಿರತಕ್ಕಂಥ ಟೆಕ್ನಿಕಲ್ ಆಸ್ಪೆಕ್ಟ್‌ನಿಂದ ಅದರ ಸಂಪೂರ್ಣ ವಿವರಣೆಯನ್ನು ಸಭೆಯ ಮುಂದೆ ಇಟ್ಟು ಅದನ್ನು ಪರಿಶೀಲಿಸುವುದಕ್ಕೆ ಅವಕಾಶವಿರಲಿ ಎಂದು ಹೇಳುತ್ತೇನೆ.

SRI D. DEVARAJ URS.— Even if the Minister wants to give details there are places where he can give. To a committee he can send all the details. There is provision to refer these things to the committees. If the Public Undertakings Committee takes it up, he can give all the details. The matter may be relating to 1962 onwards. where is the time to look into all those things? it is sheer waste of time.

ಶ್ರೀ ಕಾಗೋಡು ತಿಮ್ಮಪ್ಪ.— ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರು ಈ ಸದನದಲ್ಲಿ ಎಲ್ಲಾ ವಿಷಯಗಳನ್ನು ಇಟ್ಟರೆ ಆಗ ಅದನ್ನು ಯಾವ ಕಮಿಟಿಗೆ ಬೇಕಾದರೂ ರೆಫರ್ ಮಾಡಬಹುದು. ಆದುದರಿಂದ ಅವರು ಎಲ್ಲಾ ವಿಷಯಗಳನ್ನು ಈ ಸಭೆಯ ಮುಂದೆ ಹೇಳಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ,

ಶ್ರೀ ಎಚ್. ಡಿ. ದೇವೇಗೌಡ – ಪಿಎಸಿ. ಅಥವಾ ಪಿಯುಸಿ. ಕಮಿಟಿಯವರಾಗಲೀ ಅಥವಾ ಇನ್ನು ಯಾವ ಕಮಿಟಿಯವರೇ ಆಗಲೀ ಎಲ್ಲಾ ವಿಷಯಕ್ಕೂ ಕೈ ಹಾಕುವುದಕ್ಕೆ ಆಗುವುದಿಲ್ಲ. ಅದಕ್ಕೆ ಕೆಲವು ನೀತಿ ನಿಯಮಗಳೆಂದು ಇದೆ. ಯಾವ ಯಾವ ವಿಷಯಗಳನ್ನು ಸಮಿತಿಯವರು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿದೆ ಎಂದು ನಾವೇ ರಚಿಸಿಕೊಂಡಿರತಕ್ಕ ಕೆಲವು ನೀತಿ ನಿಯಮಗಳು ಇವೆ. ಈ ಸದನದಲ್ಲಿ ಮಾನ್ಯ ರೇಷ್ಮೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಂತ್ರಿಗಳವರು ಏನು ಕೆಲವು ವಿಷಯಗಳನ್ನು ಇಡುತ್ತಿದ್ದಾರೆ ಅದು 1958ರದು ಇರಬಹುದು 1964, 68ರದು ಇರಬಹುದು ಈ ಸಭೆಗೆ ಒಂದು ಅಧಿಕಾರವಿದ್ದು ಅದರಂತೆ ಒಂದು ಸಮಿತಿಯನ್ನು ನೇಮಕ ಮಾಡಿ ಪಿಎಸಿ. ಅಥವಾ ಪಿಯುಸಿ, ಕಮಿಟಿಯವರಾಗಲೀ ಅಥವಾ ಎ.ಜಿ.ಯವರು ಬರೆದಿದ್ದರೂ ಕೂಡ ಅದನ್ನು ಪರಿಶೀಲನೆ ಮಾಡಿ ಎಂದು ಹೇಳತಕ್ಕಂಥ ಒಂದು ಅಧಿಕಾರ ಈ ಸದನಕ್ಕೆ ಇದೆ. ಆದರೆ ಆ ಸಮಿತಿಯು ಮುಂದೆ ಮಂತ್ರಿಗಳವರನ್ನು ಕರೆಸಿ ವಿಚಾರಣೆ ಮಾಡುವುದು ಅಷ್ಟು ಸೂಕ್ತವಾಗಿರುದಿಲ್ಲವೆಂದು ಅದರ ಬಗ್ಗೆ ಈಗಾಗಲೇ ರೂಲಿಂಗ್ ಆಗಿದೆ. ಹಿಂದೇ ಒಂದು ಸಾರಿ ಕೇಂದ್ರದಲ್ಲಿ ಉಕ್ಕಿನ ಮಂತ್ರಿಗಳಾಗಿದ್ದವರನ್ನು ಸಮಿತಿಯ ಮುಂದೆ ವಿಚಾರಣೆಗಾಗಿ ಕರೆಸಿದಾಗ, ಆ ಸಮಿತಿಯ ಕೆಲಸಕಾರ್ಯಗಳಿಗೇ ಅಡಚಣೆ ಉಂಟಾಗುತ್ತದೆ ಎನ್ನುವ ಆಧಾರದ ಮೇಲೆ ಒಂದು ರೂಲಿಂಗ್‌ನ್ನು ಕೊಟ್ಟಿದ್ದಾರೆ, ಸಮಿತಿಯ ಮುಂದೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಬಹುದು. ವಿಚಾರಣೆ ಮಾಡಬಹುದು, ಆದರೆ ಸಚಿವರನ್ನು ಕರೆಯಬಾರದು ಬೇಕಾದರೆ ವಿವರಣೆ ಪಡೆಯಬಹುದೆಂದು ಇದೆ. ಆದುದರಿಂದ ಅವರು ಎಲ್ಲಾ ವಿಷಯಗಳನ್ನೂ ಸಭೆಯ ಮುಂದಿಡಲಿ. ಅನಂತರ ಈ ಡಿಮ್ಯಾಂಡ್‌ನ್ನು ಅಂಗೀಕಾರ ಮಾಡುವುದಕ್ಕೆ ಮುನ್ನ ಅದನ್ನು ಸಮಿತಿಯ ಮುಂದೆ ರೆಫರ್ ಮಾಡುವುದಕ್ಕೆ ತಮಗೆ ಅಧಿಕಾರವಿದೆ ಹಾಗೆ ತಾವು ರೂಲಿಂಗ್ ಕೊಡಬಹುದು.

ಕಳೆದ ಸಾರಿ ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ಬಗ್ಗೆ ನನಗೂ ಮತ್ತು ಮಾನ್ಯ ಕೆ. ಎಚ್. ಪಾಟೀಲರಿಗೂ ಸದನದಲ್ಲಿ ಚರ್ಚೆ ಬಿದ್ದಾಗ, ಮಾನ್ಯ ಅಧ್ಯಕ್ಷರು, ಆ ವಿಚಾರವನ್ನು ಸಾರ್ವಜನಿಕ ಉದ್ದಿಮೆ ಸಮಿತಿಗೆ ರೆಫರ್ ಮಾಡಿ ಅವರು ಅದನ್ನು ಪರಿಶೀಲನೆ ಮಾಡುತ್ತಾರೆ ಎಂದು ಅಪ್ಪಣೆ ಕೊಡಿಸಿದ್ದಾರೆ.

Let us face the facts.

SRI D. DEVARAJ URS.—We are not in a position to go into the facts and verify. These are all facts pertaining to ten years. I have no objection as I have already stated for its being referred to the Public Accounts Committee or the Public Undertakings Committee. I have absolutely no objection. The Minister might have thought in a particular manner about prices and so on and so forth. These are all somewhat technical matters The house cannot clearly understand here. Therefore, I said Let it go to any committee.

ಉಪಾಧ್ಯಕ್ಷರು.— ಮಾನ್ಯ ಸಭೆಯ ಕಾಲವನ್ನು ಗೊತ್ತು ಮಾಡಲ್ಪಟ್ಟಿದೆ. ಮಾನ್ಯ ಸಭೆಯ ಕಾಲ ಪವಿತ್ರವಾದುದು. ನಿಗದಿಯಾದ ಕಾಲದೊಳಗೆ ಮಾನ್ಯ ಮಂತ್ರಿಗಳವರು ಉತ್ತರವನ್ನು ನೀಡಬೇಕಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಸಚಿವರ ಹೇಳಿಕೆ ಕೂಡ ಅಷ್ಟೇ ಪವಿತ್ರವಾದುದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳು ಸಭೆಯ ಮುಂದೆ ತಮ್ಮ ಇಲಾಖಾ ಬೇಡಿಕೆಯನ್ನು ಮಂಡಿಸಿದ್ದಾರೆ, ಅದರ ಬಗ್ಗೆ ಚರ್ಚೆ ನಡೆದಿದೆ, ಮತ್ತು ಚರ್ಚೆಗೆ ಉತ್ತರ ಕೊಡಬೇಕಾದ್ದು ಅವರ ಕರ್ತವ್ಯ. ಆದರೆ, ಅವರು ಮಾತನಾಡುತ್ತಿರುವ ಶೈಲಿ ಮತ್ತು ವ್ಯಾಕರಣವನ್ನು ಗಮನಿಸಿದರೆ ಇದನ್ನು ಉತ್ತರವೆಂದು ಪರಿಗಣಿಸಬೇಕೋ ಅಥವಾ ಡೈರೆಕ್ಟರ್ ಮೇಲೆ ಆಪಾದನೆ ಮಾಡುತ್ತಿದ್ದಾರೆಂದು ಪರಿಗಣಿಸಬೇಕೋ? ಆಪಾದನೆ ಮಾಡುವುದೇ ಆಗಿದ್ದರೆ, ಆಪಾದನೆ ಪಟ್ಟಿಗಳನ್ನು ಕೊಡುವುದಕ್ಕೆ ಬೇರೆ ಜಾಗಗಳಿವೆ. ಆಪಾದನೆಗಳನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಡಬಹುದು, ಅಥವಾ ಪತ್ರಿಕೆಗಳಿಗೆ ಹೇಳಿಕೆ ಮುಖೇನವಾದರೂ ಕೊಡಬಹುದು. ನಂತರ ಈ ವಿಚಾರವನ್ನು ಸರ್ಕಾರದವರು ಸಾರ್ವಜನಿಕ ಉದ್ದಿಮೆ ಸಮಿತಿಗೆ ವಹಿಸಿ ತನಿಖೆಮಾಡಿಸಲಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಕೃಷ್ಣಪ್ಪನವರು ಈ ರೀತಿ ಹೇಳುವುದು ಸರಿಯಲ್ಲ. ಮಂತ್ರಿಗಳು ಯಾವ ರೀತಿ ಉತ್ತರ ಕೊಡಬೇಕೆನ್ನುವುದು ಅವರಿಗೇ ಬಿಟ್ಟದ್ದು, ಸದಸ್ಯರಾಗಲೀ ಅಥವಾ ಮುಖ್ಯ ಮಂತ್ರಿಯವರಾಗಲೀ ಹೀಗೆ ಉತ್ತರ ಕೊಡಬೇಕೆಂದು ಮಂತ್ರಿಗಳಿಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಹೇಳಿದರೆ ಅದು ನ್ಯಾಯವೂ ಅಲ್ಲ. ಅಷ್ಟೇ ಅಲ್ಲ, ಹಾಗೆ ಮಾಡಿದರೆ, ಒಬ್ಬ ಮಂತ್ರಿಯ ಹಕ್ಕುಗಳಿಗೆ ಕುಂದಕವನ್ನುಂಟು ಮಾಡಿದಂತಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—1977ರಲ್ಲಿ ಒಂದು ಮೀಟರಿಗೆ 92 ರೂಪಾಯಿ ಬೆಲೆ ಇತ್ತು. 31ನೇ ಮಾರ್ಚಿ 1977ರ ಡೈರೆಕ್ಟರ್‌ರವರ ಅಂಕಿ-ಅಂಶದ ಪ್ರಕಾರ ಸ್ಟಾಕ್‌ನಲ್ಲಿ 87,980 ಮೀಟರ್ ಬಟ್ಟೆ ಇತ್ತು, ಆದರೆ, ಅದರ ಬೆಲೆ ಮಾತ್ರ 44ರೂಪಾಯಿ ಪ್ರತಿ ಮೀಟರಿಗೆ ಇದೆ ಒಂದು ಮೀಟರಿಗೆ 2 ರೂಪಾಯಿ ಬೆಲೆ ಇದ್ದುದು ಸ್ಟಾಕ್ ಕೊಡುವಾಗ ಒಂದು ಮೀಟರ್ ಬೆಲೆ 44 ರೂಪಾಯಿಗಳಾಗ ಬೇಕಾಗಿದ್ದರೆ, ಆ ಬಟ್ಟೆ ಯಾವುದು? ಅದು ಹೇಗೆ ಬಂತು? ಅದು ಯಾವ ಕಾರ್ಖಾನೆಯಲ್ಲಿ ತಯಾರಾಯಿತು? ನಾನು ಮೊದಲೇ ಹೇಳಿದ ಹಾಗೆ, ನನಗೆ ಯಾರ ಮೇಲೂ ವೈಯುಕ್ತಿಕ ದ್ವೇಷವಿಲ್ಲ ಇಪ್ಪತ್ತು ಮೀಟರ್ ಬರುವುದಿಲ್ಲ, 9ರಿಂದ 13 ಮೀಟರ್ ಬರುತ್ತದೆ ಎಂದು ಅವರು ಹೇಳಿದ್ದಾರೆ. ಯಾವುದು ಸಿಕ್ಕಿತೋ ಅದನ್ನೇ ವರದಿ ಮಾಡುವ ಅಭ್ಯಾಸ ಅಧಿಕಾರಿಗಳಿಗಿರುವುದರಿಂದ, ಈ ರೀತಿ ಹೇಳಿದ್ದಾರೆಂದು ಭಾವಿಸಬಹುದು. ನಾವು ಈ ಲೋಪವನ್ನು ಎತ್ತಿ ತೋರಿಸಿದರೆ, ಹತ್ತಿ ಗಿರಣಿಯಲ್ಲಿ ಕೆಲಸ ಮಾಡುವವನಿಗೆ ಏನು ಗೊತ್ತಿರುತ್ತದೆ ಎಂದು ನೋಟ್ ಹಾಕಿ ಕಳುಹಿಸುವುದು ಸರಿಯಲ್ಲ. ಇದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೂ ತಿಳಿಸಿದ್ದೇನೆ. ಅದನ್ನವರು ಪರಿಶೀಲನೆ ಮಾಡಬೇಕು ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ನಾನು ಮಂತ್ರಿಗಳಿಗೆ ಬರೆದಿದ್ದೇನೆ. ಒಬ್ಬ ಡೈರೆಕ್ಟರ್ ಕೈಕೆಳಗೆ ಇರುವುದಕ್ಕೆ ನಾನು ತಯಾರಿಲ್ಲ. ಇದರ ಬಗ್ಗೆ ಸೂಕ್ತ ಕಂಡಲ್ಲಿ ನ್ಯಾಯಾಂಗ ತನಿಖೆಯಾಗ ಬೇಕು. ನಾನು ಈ ಬಗ್ಗೆ ಲೀಗಲ್ ಒಪಿನೀಯನ್ ಕೂಡ ತೆಗೆದುಕೊಂಡಿದ್ದೇನೆ ಮುಖ್ಯಮಂತ್ರಿ ಗಳಿಗೂ ಪತ್ರ ಬರೆದಿದ್ದೇನೆ.

ಮಾನ್ಯ ಕೆ. ಪುಟ್ಟಸ್ವಾಮಿಯವರು ಫೆಡರೇಷನ್ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ರಾಜೀನಾಮೆ ಕೇಳಿ ಎಂದು ಕೇಳಿದರು. ಇದರ ಬಗ್ಗೆ ರಿಜಿಸ್ಟ್ರಾರ್‌ರವರು 21-6-1977ರಲ್ಲಿ ನನಗೊಂದುಪತ್ರ ಬರೆದು ಕೋ-ಅಪರೇಟಿವ್ ಸೊಸೈಟಿ ಆ್ಯಕ್ಟ್ 30(ಜ) 59 ಮತ್ತು 64ರ ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆ ಎಂದು ತಿಳಿಸಿದ್ದಾರೆ. ಇದು ನೇರವಾಗಿ ನನ್ನ ಇಲಾಖೆಗೆ ಸಂಬಂಧಿಸಿಲ್ಲವಾದರೂ, ರಿಜಿಸ್ಟ್ರಾರ್‌ರವರು ನನಗೆ ಪತ್ರ ಬರೆದಿರುವುದರಿಂದ ಕ್ರಮ ಜರುಗಿಸಲಾಗುತ್ತಿದೆ ಎಂದು ಸಭೆಯು ತಿಳಿದುಕೊಳ್ಳಬಹುದು.

ಮಾನ್ಯ ಕೆ. ಪುಟ್ಟಸ್ವಾಮಿಯವರು ಮತ್ತು ಎಸ್. ಪುಟ್ಟಸ್ವಾಮಿಯವರು ಮತ್ತಿತರ ಸದಸ್ಯರು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ, ಅದು ಹೇಗೆ ನಡೆಯಿತು ಎಂದು ಕೇಳಿದ್ದಾರೆ. ಅದಕ್ಕಾಗಿಯೇ ನಾನು ಇದೆಲ್ಲಾ ಹೇಳುತ್ತಾ ಹೇಗೆ ನಡೆಯಿತು ಎಂದು ತಿಳಿಸಿದೆ. ಇದು ಅರವತ್ತೆರಡನೆ ಇಸವಿಯಿಂದ ನಡೆಯುತ್ತಿರುವ ವಿಷಯ. ಮಾನ್ಯ ಸದಸ್ಯ ಶ್ರೀ ಬೈರೇಗೌಡ ಅವರು ರೈತರಿಗೆ ಗೂಡಿನ ಬೆಲೆ ಸಿಕ್ಕುತ್ತಿಲ್ಲ ಎಂದು ಹೇಳಿದರು, ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನೊಂದು ಯೋಜನೆಯನ್ನು ಕೊಟ್ಟಿದ್ದೇನೆ. ಈ ಯೋಜನೆ ಪ್ರಕಾರ, ಒಂದು ಕೇಜಿಗೆ ಈಗ ಖರ್ಚು ಮಾಡುತ್ತಿರುವ 210 ರೂಪಾಯಿಗಳಲ್ಲಿ ಉಳಿತಾಯ ಮಾಡಿದರೆ ಇನ್ನು ಐದು ವರ್ಷಗಳಲ್ಲಿ ಮೂವತ್ತು ಕೋಟಿ ರೂಪಾಯಿಗಳನ್ನು ಮೂಲಧನವನ್ನಾಗಿ ಉಳಿಸಬಹುದು. ಈ ಬಗ್ಗೆ ಯಾರು ಬೇಕಾದರೂ ಚರ್ಚೆ ಮಾಡಲಿ. ನಾನು ವಿವರ ಕೊಡುತ್ತೇನೆ. ಸಾಮಾನ್ಯವಾಗಿ ಇಂಥ ವ್ಯವಹಾರಗಳು ಯಾರಿಗೆ ಗೊತ್ತಿಲ್ಲದಿದ್ದರೂ ಕಾಸ್ಟ್ ಅಕೌಂಟೆಂಟ್‌ಗೆ ಗೊತ್ತಿರುತ್ತದೆ. ಕಾಸ್ಟ್ ಅಕೌಂಟೆಂಟ್‌ಗೆ ಗೊತ್ತಿಲ್ಲದ ವಿಚಾರವಲ್ಲ ಇದು. ಟೆಕ್ಸ್‌ಟೈಲ್‌ನಲ್ಲಿ ಇಪತ್ತು ಮೀಟರು ಬಟ್ಟೆ ಬರುತ್ತದೆ ಎಂದರೆ, ಸಿಲ್ಕ್‌ನಲ್ಲಿ ಏತಕ್ಕೆ ಬರುವುದಿಲ್ಲ? ಸಿಲ್ಕ್ ತೂಕ ಮತ್ತು ಅರಳೆ ತೂಕ ಒಂದೇ ಅಲ್ಲವೆ? ಸರ್ಕಾರಿ ಕಾರ್ಖಾನೆಗಳೆಂದರೆ ಧರ್ಮಛತ್ರಗಳಾಗಬಾರದು ಸರಿಯಾಗಿ ನಡೆದರೆ, ಕಾರ್ಖಾನೆಗಳಲ್ಲಿ ನಷ್ಟವಾಗುವುದಕ್ಕೆ ಕಾರಣವೇ ಇಲ್ಲ. ಯಾವ ಕಾರ್ಖಾನೆಯಲ್ಲಿ ಕಾಸ್ಟ್ ಅಕೌಂಟ್ ಮೇಂಟೆನ್ ಮಾಡಿಲ್ಲ, ಆ ಕಾರ್ಖಾನೆಯಲ್ಲಿ ಸಾಕಷ್ಟು ಹಣ ಪೋಲಾಗುವುದಕ್ಕೆ ಅವಕಾಶವಿದೆ. ತನ್ಮೂಲಕ ಕಾರ್ಖಾನೆ ನಷ್ಟ ಅನುಭವಿಸುವುದಕ್ಕೆ ಕಾರಣವಾಗುತ್ತದೆ. ಇಲ್ಲಿ ಕಾಸ್ಟ್ ಅಕೌಂಟ್ ಮೆಂಟೆನ್ ಮಾಡಿಲ್ಲ.

ಬಟ್ಟೆಯನ್ನು ಯಾವ ಬೆಲೆಗೆ ಕೊಡುತ್ತಾರೆ, ಯಾವ ಬೆಲೆಗೆ ತೆಗೆದುಕೊಳ್ಳುತ್ತಾರೆ ಎನ್ನುವ ವಿವರ ಇಲ್ಲ ಇಲ್ಲದೇ ಇರುವುದರಿಂದ ನಮಗೆ ಇದರ ಮೇಲೆ ಎಲ್ಲ ವಿಧವಾದ ಸಂಶಯ ಬರುವುದಕ್ಕೆ ಅವಕಾಶವಾಗುತ್ತದೆ ನಾನು ಈ ಜನರಲ್ ಮ್ಯಾನೇಜರನ್ನು ವರ್ಗ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಬೇರೆ ಮ್ಯಾನೇಜರನ್ನು ನೇಮಿಸಿ ಎಂದು ಹೇಳಿದ್ದೇನೆ. ಆದರೆ, ಆ ಜನರಲ್ ಮ್ಯಾನೇಜರ್‌ನ್ನು ವರ್ಗ ಮಾಡಿಸುವುದಕ್ಕಾಗಲಿಲ್ಲ ನನಗೆ ಎಂದು ಬಹಳ ಪಶ್ಚಾತ್ತಾಪದಿಂದ ಹೇಳುತ್ತಿದ್ದೇನೆ. ನಾನು ರಾಜಿನಾಮೆ ಕೊಡಬೇಕೆಂದು ಈ ಮಹಾ ಸಭೆ ತೀರ್ಮಾನ ಮಾಡಿದರೆ, ನಾನು ನಾಳೆಯೇ ರಾಜಿನಾಮೆ ಕೊಡುತ್ತೇನೆ. ನಾನು ಮುಖ್ಯ ಮಂತ್ರಿಗಳಿಗೆ ತಿಳಿಸಿರುವ ವಿಚಾರದ ಬಗ್ಗೆ ನನ್ನ ಬಳಿ ಮಾಹಿತಿ ಇದೆ. ನಾನು ಅದನ್ನವರಿಗೆ ಕೊಡುತ್ತೇನೆ. ಅವನ್ನೆಲ್ಲಾ ಪರಿಶೀಲನೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ನಿರ್ಣಯಕ್ಕೆ ಬಂದರೆ ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲಿ.

ಶ್ರೀ ಕೆ. ಎಚ್. ಹನುಮೇಗೌಡ — ಇಲಾಖೆಯ ಕೆಲಸಕಾರ್ಯಗಳ ಬಗ್ಗೆ ಮಾತನಾಡದೆ, ಇದನ್ನೆಲ್ಲ ಮಾನ್ಯ ಮಂತ್ರಿಗಳು ಇಲ್ಲಿ ಏತಕ್ಕೆ ಹೇಳುತ್ತಿದ್ದಾರೆ?

ಶ್ರೀ ಬಿ. ಪುಟ್ಟಸ್ವಾಮಯ್ಯ.— ಸತ್ಯವನ್ನು ಮುಚ್ಚಿಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಹನುಮೇಗೌಡರು ಕಾಂಗ್ರೆಸ್ ಸೇರಿದಮೇಲೆ ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ನಿಮ್ಮ ಕೈಯಲ್ಲಿ ಆಗದೆಹೋದರೆ ಬಿಟ್ಟುಬಿಡಿ. ಸುಮ್ಮನೆ ಇಲ್ಲಿ ಏತಕ್ಕೆ (* * *.)

ಶ್ರೀ ಕಾಗೋಡು ತಿಮ್ಮಪ್ಪ.— ಇವರು ಹೇಳಿದಹಾಗೆ ಮಂತ್ರಿಗಳು ಉತ್ತರ ಹೇಳಬೇಕೇ? ಬುದ್ಧಿ ಹೇಳುವುದಕ್ಕೆ ಬಂದಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ. ನಾನು ಬುದ್ಧಿ ಹೇಳುವುದಕ್ಕೆ ಬಂದಿಲ್ಲ. ನಮಗೆ ಹೇಳುವ ಅಧಿಕಾರ ಇದೆ.

ಶ್ರೀ ಕಾಗೋಡು ತಿಮ್ಮಪ್ಪ — ಮಂತ್ರಿಗಳಿಗೆ ಹೇಳುವ ಹಕ್ಕು ನಿಮಗೆ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.— ನಿಮಗೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಸ್ವಾಮಿ, ನನ್ನದೊಂದು ಕ್ರಿಯಾಲೋಪ ಮಾನ್ಯ ಹನುಮೇಗೌಡರು ಮಂತ್ರಿಗಳ ಬಗ್ಗೆ ಮಾತನಾಡುತ್ತಾ (* * *) ಎಂದು ಹೇಳಿದ್ದಾರೆ. ಅದು ಅವಾಚ್ಯ ಶಬ್ದ ದಯವಿಟ್ಟು ತೆಗೆಸಿಹಾಕಿ.

ಉಪಾಧ್ಯಕ್ಷರು.— (* * *) ಎನ್ನುವ ಪದವನ್ನು ತೆಗೆದುಹಾಕಿ.

ಶ್ರೀ ಕೆ. ಶ್ರೀರಾಮುಲು.— ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆ ಬಗ್ಗೆ ಪ್ರಾರಂಭದಲ್ಲಿಯೇ ಹೇಳಿದೆ 9 ಲಕ್ಷ ಕೆ.ಜಿ. ಉತ್ಪತ್ತಿ ಜಾಸ್ತಿಯಾಗಿದೆ ಎಂದು ಯಾವುದು ದೃಷ್ಟಿಯಿಂದ ಇಲಾಖೆ ಹಿಂದೆ ಬೀಳುವುದಕ್ಕೆ ಸಾಧ್ಯವಿಲ್ಲ. ಕೆಲವು ಸದಸ್ಯರು ಮಾತನಾಡುವಾಗ ಒಳ್ಳೆಯ ಪೆಟ್ಟಿ ಸಿಗುತ್ತಿಲ್ಲ ಎಂದು ಹೇಳಿದರು. ಅದರ ಬಗ್ಗೆ ಎಲ್ಲಾ ವ್ಯವಸ್ಥೆ ನಡೆಯುತ್ತಿದೆ, ಇತ್ತೀಚೆಗೆ 63 ಜನ ಶಾಸಕರು ಇರತಕ್ಕ ಮೈಸೂರು, ಕೋಲಾರ, ತುಮಕೂರು 4 ಸಮಿತಿ ಮಾಡಿ, ಈ ಸಮಿತಿ ಒಂದು ತಿಂಗಳಿಗೆ ಒಂದು ಸಲ ಸಭೆ ಸೇರಿ ವಿಷಯ ಪರಿಶೀಲನೆ ಮಾಡಿ ಸೂಕ್ತ ವ್ಯವಸ್ಥೆ ಮಾಡುವಂತೆ ಸರ್ಕಾರಕ್ಕೆ ತಿಳಿಸಬಹುದು. ಇಂಥ ಯೋಜನೆ ಮಾಡಿ ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ನಾನು ಹೇಳತಕ್ಕ ಅನೇಕ ವಿಷಯಗಳು ಹಿಂದೆ ಬಂದಿರತಕ್ಕವು, ಮಾನ್ಯ ಸದಸ್ಯರುಗಳು ಸಂಶಯ ಪಟ್ಟ ಕಾರಣ ತಿಳಿಸಿದೇನೆ ಹೊರತು ಉದ್ದೇಶ ಏನು ಇಲ್ಲ. ಮಾನ್ಯ ಸದಸ್ಯರು ನನ್ನ ಇಲಾಖೆಗೆ ಸಂಬಂಧ ಪಟ್ಟ ಬೇಡಿಕೆಯನ್ನು ಏನು ಕೇಳಿದ್ದೇನೆ, ಅದನ್ನು ಒಮ್ಮತದಿಂದ ಒಪ್ಪಬೇಕು ಎಂದು ಕೇಳಿಕೊಳ್ಳುತ್ತೇನೆ.

(* * *) Word/word expunged as ordered by the chair.

[Madam Speaker in the chair]

SRI D. DEVARAJ URS (Chief Minister).—Madam Speaker, I have very carefully and patiently heard the hon Members who have participated in the Debate on this Demand— Industries In the first instance, I would like to thank all the hon. Members who have participated and also for giving some of the useful suggestions with a view to see that the Department is improved, industries are brought into being more and more in the country and also with a view to see that the Government Undertakings and Public Undertakings turn the corner and production would go up and there would be no loss in some of the industries which have been pointed out as running under loss. At the same time, here and there certain remarks regarding the working of certain industries and particularly the working of the K.S.I I.D.C. which is the Financing Institution have been made and certain references have been made to the recommendations of the Committee on Public Undertakings as well as Committee on Public Accounts. They have also pointed out that Government have not taken proper action on the various recommendations made by these Committees and there is delay.

While making such remarks, a few Officers have also come in for comments on the floor of the House I wish and appeal to the Hon. Members that any comments on individual Officers, as has been once ruled by you, Madam Speaker, should as far as possible, be avoided and in the event of any comments being made, i.e. before comments are being made, more verification would be better so that comments would be based on facts and realities While referring to the particular industry or the Corporation, I would like to deal with one or two comments made. But, at the outset, I would like to submit that within these 5½ years, the industrial growth in our State has gone on well. It is not merely that I am saying that the growth has gone on well. It is the impression of the industrialists even from outside apart from the verasity of what I have said based on facts and figures.

In the year 1972, for instance, the capital investment of large and medium sector industries was of the order of Rs, 37.73 crores. In the year 1973 it went up to Rs 52.36 crores in the year 1974 it increased to Rs. 65.7 crores, in the year 1975 it went up to Rs. 8030 crores and in the year 1976 it went to Rs. 86.00 crores. Thus, for a period of five years, the investment has gone in total to Rs 322.10 crores. Likewise the employment potential has also gone up from 1972 to 1976 (inclusive). The total employment potential increased to the tune of 1,22,166.

6-00 P.M.

SRI M. S KRISHNAN —If we take increase in prices, there is true reflection of the growth between 1972 to 1976.

SRI D. DEVARAJ URS —In the year 1973, it was a peak price period.

SRI M S. KRISHNAN.—Just now the Hon. Chief Minister read out the statistical figures about the increase in the growth regarding the investment and if you take the increase in the prices, then you will see that may not be a true reflection.

SRI D. DEVARAJ URS.—If you take from 1973 onwards, though this was a peak price period, the investment went up to Rs. 52.36 crores which should be appreciated. Even from the point of view of the prices during 1973 (peak price period) it is Rs. 52 crores. Now the same prices, more or less are continuing. In the year 1976 it is Rs. 86 cores) increase about 4 per cent, that is the margin escalation of prices. Now, again in the Small Scale Industrial Sector, for instance, the total number of units throughout the State from the beginning of the year 1969-70 it was 9500 units. Now for the year 1975-76, it rose to 16.428 units and investment in the Small Scale Industrial Sector between 1971-76 was of the order of Rs.75.73 crores In the Small Scale Sector which has created the employment potential of 83,470 persons and Khadi Board is also doing well. Now, to give a boost to the development and growth of industries, the House is aware Madam Speaker that the Government has taken a broad policy decision regarding the incentives to be given to the enterpreneuers. It is a package incentive given. While so giving we have taken into account the regional imblances as was pointed by the Hon. Leader of the Opposition who made a lot of stress on the point that this regional planning was necessary I agree with him. So far as the industral disperal is concerned we have to take note of various regions which are backward where there are no industries and regions where we have certain raw materials minerals, all these factors we have to take into consideration when we think of industrial growth. The concentration of industries in any one city or district is not conducive to the healthy development of the State and the economy too. That is the reason with which the State is devised into 3 groups The first group is, group (1)...... Bangalore Metropolitan area, Bangalore South Taluk Bangalore North Taluk, round about Bangalore... every body knows that is a vast industrially developed area. Many industries are generally brought only to Bangalore. So with a view to see that these industries are not merely brought here, it has been classified as group(1). Group (2) is included Kolar,

Shimoga, Mandya, Chitradurga Nelamangala Taluk of Bangalore District Bellary, Coorg and Group (3) included Tumkur, Hassan, South Kanara, North Kanara, Bijapur, Dharwar, Belgam, Bidar, Gulbarga. Raichur and Mysore are not fied industrial areas and industrial sheds set up by the Government except those group included a single unit. Now, the maximum inaentive and concession are admissible to group 3, the Districts which I just now mentioned. The system of incentive and financial support to be give to the industries depends upon the classification of districts. For example 60 percent of the total capital cost in Group-1, 70 perceat in group-2 and 10 percent State subsidy in industrially notified areas except group-1 which consist of Bangalore North and South-Metropolitan area. This is the state subsidy besides the Central subsidyof 16percent and the sales-tax refund on raw-materials purchased by the eligible industries—that is another concession and development of loan against sales-tax. Regarding Octroi exemption, of building materials etc., there is a separate Government Order Then to have this infra-structure like land which is most important. So, with a view to see that the land is made available to the industralists those who want te come and participate, not to move about acquiring or getting land we have already constituted what is called the Karnataka Industrial Area Devlopment Board and another Karnataka Small Industry Development Corporation The Karnataka Industrial Area Development Board has so far declared about, 35,600 scres of land fit for the industrial areas in 43 places and so for 9000 and odd acres of land have been taken possession of. Out of this, that is till 31-3-1973. 5926 acres of land have been already allotted to 1285 large, medium and small scale industries in the State as a whole. This Karnataka Industries Development Corporation has constructed so far 1181 sheds in about 27 industrial estates and it has ambitious programme of constructing about 400 sheds in Peenya. The finance for this is provided by the Commercial Banks and 350 more sheds will be constructed in the other districts. That is the programme they have. Unfortunately, Madam Speaker, the House is well aware of the fact that the State is terribly hit the power cut. Now this year as you are aware we have resorted to cut of nearly 40 to 50 percent

First it was 40 per cent. Then we had to further increase the cut to 50 per cent. This power cut is a great hindrance to growth and production It has been estimated that nearly 3 to 5 hundred crores worth of produce is the loss as a result of power cut in one year. However, Government is making all efforts to fill up this gap of power deficiency in various ways Apart from getting whatever is possible from the neighbouring States like Maharashtra, Andhra

and Tamil Nadu, we are also pushing through as quickly as possible the construction of a direct line from Kerala to Karnataka so that it will be possible for the State in the near future to get power directly from Kerala State instead of getting it as it was till now through the Tamil Nadu State. There is a proposal to construct a second 200 K V line between Maharashtra and Karnataka and it is before the Government of India They are very seriously considering this question. Besides, we are trying our level best to put up a gas turbine with a capacity of nearly 130 M. W. and I am glad to inform this House that recently we had discussions with the Central Government and I was told by the Chief Secretary who had been to Delhi and had a meeting with the Power Minister at the Centre that the Government of India was keen to expedite this proposal of ours and I hope within 6 to 8 months we will be in a position to see that this gas turbine comes up. This will go a long way in helping this State to reduce power cut,

SRI M. S. KRISHNAN —At what stage is it ?

SRI D. DEVARAJ URS.—First of all the AEG gave us the idea that they are prepared to have a unit. The policy of the Government of India is that these things should go through the BHEL. It has to call for quotations and do all those things. In these negotiations six months were lost. Otherwise by now we could have had the gas turbine and it would have gone into production. I am told they are finalising it and it will take 6 to 8 months more. If everything goes well. Kali Project is also the e which we expect to go into production in July 1978 and out of that prcoduction we are likely to have 100 and odd M. Ws.

